Member's Representation.

Sri C. M. ARUMUGHAM (Kolar Gold Fields).—Sir, the other day you were kind enough to say that the members of the Legislative Assembly must give top priority to the business of this House and that they must attend the session. May I bring to your notice, Sir, that when the session is going on and when we are spending about Rs. 30 per minute, the Ministers attend opening ceremonies and such other functions; I would like to know whether it is in order for them to do so. When you have given us the order not to attend such functions during the session, you must give such order to the Ministers also.

Mr. SPEAKER.—This is not the first time that this question has been raised. It was raised a few days ago and I then stated that normally a Minister should be present and he should be necessarily present when his subject is being discussed. But there are occasions when the Ministers go out to lay the foundation stone of some dam or to open some institute. That way we have no control over them. We have laid down the general rule which I have mentioned. I cannot prevent the Ministers from going out and attending to other duties outside the House.

Sri G. VENKATAI GOWDA (Palaiyam).—Some members also would have liked to go and attend them but for the business of the House. Why should they not be allowed to go? If it is inevitable, the House can be adjourned.

Mr. SPEAKER.—That cannot be done.

FOOD SITUATION IN THE STATE.

(*Debate continued.*)

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ, ಅಶಕ್ತತೆಯಿಂದ ಕುಳಿತು ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ಹೃತ್ಪೂರ್ವಕವಾಗಿ ವಂದನೆಗಳನ್ನು ತಮಗೆ ಸಲ್ಲಿಸುತ್ತೇನೆ. ಇಂದು ದೇಶದ ಆಹಾರ ಪರಿಸ್ಥಿತಿ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ಇಚ್ಛಿಸುತ್ತೇನೆ. ಇವೊತ್ತು ದೇಶದಲ್ಲಿ ಆಹಾರದ ಅಭಾವವೆಂಬುದು ಬಹಳ ಉಗ್ರವಾಗುವುದಕ್ಕೇನು ಕಾರಣ, ಇದೇನು ವಿಚಿತ್ರ, ಹೇಗಾಯಿತು, ಏನು ಎಂಬುದನ್ನು ಕೂಲಂಕಷವಾಗಿ ಪರಿಶೀಲನೆಮಾಡದೆ ಟೀಕೆ ಮಾಡಿದರೆ ಆಹಾರ ಬರುವುದಿಲ್ಲ. ನನಗಿರುವ ಅಲ್ಪ ಅನುಭವದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಒಂದನೆಯದು ದೇಶದ ಆಹಾರದ ಅಭಾವಕ್ಕೆ ರೈತನ ಸ್ಥಿತಿ, ಎರಡನೆಯದು ದೈವಿಕವಾದ ಸಂಪತ್ತು, ಮೂರನೆಯದು ಸರ್ಕಾರದ ಜವಾಬ್ದಾರಿ—ಈ ಮೂರು ಕಾರಣಗಳಿಂದ ಆಹಾರ ಹೆಚ್ಚುವುದು ಮತ್ತು ಕಡಮೆಯಾಗುವುದು ಆಗುತ್ತಿದೆ ಎಂದು ನನ್ನ ಒಂದು ಅಲ್ಪ ಅನುಭವಕ್ಕೆ ಬಂದಿದೆ.

ಒಂದನೆಯದಾಗಿ ರೈತನ ಸ್ಥಿತಿಯೇನು, ಹೇಗೆ ಎಂದು ಯೋಚನೆ ಮಾಡಿದರೆ ನಮ್ಮ ದೇಶದ ರೈತ ಬಹಳ ಬಡವ. ಅವನಿಗೆ ತಿನ್ನುವುದಕ್ಕೆ ಅನ್ನ, ಉಡುವುದಕ್ಕೆ ಬಟ್ಟೆ ಸಾಲದು. ಅವನಿಗೆ ಬೇಸಾಯ ಮಾಡಲು ಶಕ್ತಿಯಿಲ್ಲ, ಸುಗ್ಗಿ ತೃಪ್ತಿಕರವಾಗಿ ಆಗದೆ ಹೋದರೆ ಇರುವುದನ್ನು ಮಾರಿ ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಮಾರಿದ ದವಸಕ್ಕೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಇದಕ್ಕೆ ಅವನ ನಿರಕ್ಷರತೆ, ಅವಿದ್ಯೆ ಕಾರಣ. ಇದನ್ನು ತಿಳಿದು ಅವನಿಗೆ ಸರಿಯಾದ ಅನುಕೂಲವಾಗುವ ಹಾಗೆ ಮಾಡಬೇಕು.

ಎರಡನೆಯದಾಗಿ ರೈತನ ಪರಿಸ್ಥಿತಿ ಏನಾಗಿದೆಯೆಂದು ನೋಡಿ ಬೆಳೆದವನ ಕಷ್ಟವೇನೆಂಬುದನ್ನು ಸರ್ಕಾರದವರು ಪರಿಶೀಲಿಸಿ ಪರಿಹಾರ ಮಾಡಿಯೇ ತೀರಬೇಕು. ಹೇಗೆಂದರೆ ಈ ದಿವಸ ಹೆಚ್ಚು ಆಹಾರ ಬೆಳೆಯಬೇಕೆಂದು ಉತ್ಸಾಹದಿಂದಿರುವವರಿಗೆ ಅಮೃತ ಮಹಲ್ ಕಾವಲು, ಬಂಜರು ಭೂಮಿ ಹರಾಜು ಹಾಕಿ ಕಿಮ್ಮತ್ತಿಗೆ ಕೊಡಬೇಕು. ಆದರೆ ದನಗಳು ಮೇಯುವುದಕ್ಕೆ ಸಾಕಷ್ಟು ಜಮೀನಿಲ್ಲದಂತೆ ಮಾಡಬಾರದು. ಕೆಲವು ಕಡೆ ಅಡಕೆ, ತೆಂಗು ಮುಂತಾದ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತ್ತಾರೆ. ಖುಷ್ಕಿ ಜಮೀನಿನಲ್ಲಿ ಬೆಳೆಯುವುದು ಮೂರು ತಿಂಗಳಿಗೆ ಸಾಲುವುದಿಲ್ಲ.

[Mr. Deputy Speaker in the Chair]

ಇನ್ನು ಎರಡನೆಯದಾಗಿ ರೈತನಿಗೆ ಇರತಕ್ಕ ಸಾಲದ ವಿಚಾರ. "ಕಡಹುಟ್ಟಿ ಬಡವ ಕೆಟ್ಟ" ಎಂದು ಒಂದು ಗಾದೆಯ ಮಾತು ಇದೆ. ರೈತನು ಮೊದಲು ಸಾಲಮಾಡುತ್ತಾನೆ. ಆಮೇಲೆ ಅದಕ್ಕೆ ಹೆಚ್ಚುಹೆಚ್ಚು ಬಡ್ಡಿ ಕೊಡಬೇಕಾಗುತ್ತದೆ. ಬಡವನು ಬಹಳ ಕಷ್ಟಕ್ಕೆ ಈಡಾಗುತ್ತಾನೆ. ರೈತನ ಸಾಲ ಹೇಗೆ ಪರಿಹಾರ ಮಾಡಬೇಕು, ಅದಕ್ಕೆ ಇರತಕ್ಕ ಅಡ್ಡಿ ಆತಂಕಗಳೇನು ಎಂಬುದನ್ನು ಪರಿಶೀಲನೆ ಮಾಡಿಲ್ಲ. ಜಮೀನು ಅಡಮಾನ ಬ್ಯಾಂಕಿನಿಂದ ಸಾಲ ದೊರೆಯಲು ಐದಾರು ತಿಂಗಳು ಹಿಡಿಯುತ್ತದೆ. ಹಳ್ಳಿಗಳಲ್ಲಿ ರೈತನಿಗೆ ಬೇರೆ ಕಡೆ ಸಾಲ ದೊರೆಯುವುದಿಲ್ಲ. ರೈತನಿಗೆ ತಗಾವಿ ಸಾಲ ಸಹ ಸಿಕ್ಕುವುದು ಬಹಳ ಕಷ್ಟವಾಗಿದೆ. ಈ ವಿಚಾರದಲ್ಲಿ ಕಾನೂನನ್ನು ಸ್ವಲ್ಪ ಸಡಿಲ ಮಾಡಿ ರೈತನಿಗೆ ಸಾಲ ಸಿಕ್ಕುವ ಹಾಗೆ ಸಹಾಯ ಮಾಡಬೇಕು. ಇನ್ನು ರೈತನು ಬೆಳೆದಂಥ ಬೆಳೆಯನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ರೈತನಿಗೆ ಯೋಗ್ಯ ಬೆಲೆ ಸಿಕ್ಕುವುದಿಲ್ಲ. ಆಹಾರಧಾನ್ಯಗಳನ್ನು ಮಾರಾಟ ಮಾಡುವ ಮಧ್ಯಸ್ಥಗಾರನಿಗೆ ಹೆಚ್ಚು ಲಾಭವಾಗುತ್ತದೆ. ಆದುದರಿಂದ ರೈತನಿಗೆ ತಾನು ಬೆಳೆದಂಥ ಆಹಾರಧಾನ್ಯಗಳಿಗೆ ಸರಿಯಾದ ಧಾರಣೆ ಸಿಕ್ಕುವವರಿಗೆ ದೇಶದಲ್ಲಿ ಆಹಾರ ಅಭಾವ ತಪ್ಪುವುದಿಲ್ಲ. ಇನ್ನು ರೈತನಿಗೆ ವ್ಯವಸಾಯಕ್ಕೆ ಅತ್ಯಗತ್ಯವಾಗಿ ಬೇಕಾಗುವ ಕುಳ, ಗಾಡಿಯು ಪಟ್ಟಿ ಮುಂತಾದ ಉಪಕರಣಗಳು ಸಿಕ್ಕುವುದಿಲ್ಲ. ಈ ವಿಷಯವನ್ನು ಸರಕಾರ ಪರಿಶೀಲನೆ ಮಾಡಬೇಕು. ರೈತನಿಗೆ ಬೇಕಾಗತಕ್ಕ ಬೀಜ, ಗೊಬ್ಬರ ಇವುಗಳನ್ನು

(ಶ್ರೀ ಟಿ. ಎಸ್. ಶಂಕರಪ್ಪ)

ಸಕಾಲದಲ್ಲಿ ಒದಗಿಸಿಕೊಡಬೇಕು. ಗ್ರಾಮಪಂಚಾಯಿತಿಗಳ ಮುಖಾಂತರ ಗೊಬ್ಬರ ಕೊಡುವ ಏರ್ಪಾಡು ಮಾಡಬೇಕು. ಬಡ ರೈತನು ಸುಖದಿಂದ ಇರುವ ಹಾಗೆ ಮಾಡಿದರೆ ದೇಶ ಸುಭಿಕ್ಷವಾಗುತ್ತದೆ. ನಮ್ಮ ದೇಶ ಇದು ಪುಣ್ಯ ಭೂಮಿಯಾಗಿದೆ. ಆದಕಾರಣ ರೈತರಿಗೆ ಏನೇನು ಸೌಕರ್ಯಗಳು ಬೇಕೋ ಅವುಗಳನ್ನೆಲ್ಲ ಕಾನೂನು ಪ್ರಕಾರ ಒದಗಿಸಿಕೊಡಬೇಕು. ಅಂದರೆ ಈ ಆಹಾರ ಅಭಾವದ ಸಮಸ್ಯೆ ಖಂಡಿತವಾಗಿ ಪರಿಹಾರವಾಗುತ್ತದೆ. ನಮ್ಮ ದೇಶದಲ್ಲಿ ನೂರಕ್ಕೆ 80ರಷ್ಟು ಜನ ವ್ಯವಸಾಯವನ್ನೇ ಅವಲಂಬಿಸಿಕೊಂಡಿದ್ದಾರೆ. ಈ ವ್ಯವಸಾಯದಲ್ಲಿರತಕ್ಕ ರೈತರ ವಿಷಯ ಬಹಳ ಮಹತ್ವದ್ದಾಗಿದೆ. ಸರಕಾರದವರು ಇದಕ್ಕೆ ಹೆಚ್ಚು ಗಮನ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

*Smt. VIJAYA RAGHAVENDER RAO (Chitapur).—I rise to offer a few remarks on the food situation in the State. Now India having won freedom, it has got to develop itself in the agricultural, educational and industrial fields. May I ask the Government as to what is the development in the agricultural field and whether we have got an assurance of enough to eat? Can we be self-sufficient as regards food? Food is the only measure which gives us energy to work; food is the only measure which sticks into our vitamins as cream and sugar are to coffee which keeps us cheerful and gay with some of the additions and subtractions. Such an important problem as the food problem should be tackled not at the city or town level but at the village level or at the farm level, and this, I can very well say, our Government is trying its level best and that since independence it is doing its utmost for production of food. But unfortunately for the State, unfortunately for our people, it could not do so properly as it should have been done. Added to this the proposed land reforms with ceilings have not increased food production in the rural areas but they have diminished much. Let me invite attention of the Government to the provision for agricultural production and education including soil conservation which amounts to 347.627 lakhs and out of this 112.873 are earmarked for agricultural improvement, research and these production schemes.

What agricultural research they do? Do they help farmers in any way? Do they conduct research on any of the foodgrain pests or on some of these insecticides? I really do not understand what research assistants do there today. They may be doing research there today. They may be doing research tomorrow. But they may not be arriving at any conclusion. Therefore Government must see and take steps that research officers arrive at some conclusion on some of these insecticides and grain pests which invade foodgrains.

About tractors, bull-dozers and improved seeds many Hon'ble Members have expressed their opinion. I wish to say something about the tractors. One of the reports from the Government says that the progress was somewhat hindered as spare parts were not readily available. I feel that such reports must not come from the Government side at least. Spare parts are available everywhere in Bangalore, Bombay, Madras or Calcutta. You should not say in your reports that spare parts are not available. There are two tractors in Raichur District and they are running quite properly. That is in Sindanoor taluka. In this regard I may support Srimati Basavarajeswari that spare parts are readily available and the repair work could have been carried out.

Now about fertilisers, everybody is of opinion that the use of fertilisers increases production of foodgrains. But there are two things to be considered and these are—whether fertilisers reach the farmers and whether these are supplied in adequate quantities. I may give you an example and you can realise whether these two factors are fulfilled. In Chitapur taluka, Gulbarga District, Shahabad town, farmers were promised by agricultural officers that they would be distributing fertilisers within a fortnight in the month of July, and to everybody's surprise, even till today the farmers are still receiving the fertilisers like calcium sulphate, ammonium sulphate and etc. Such a thing should not occur. I feel that Government should take necessary steps in such matters. In this connec-

tion, I may say that our Raichur District has got black cotton soil and it requires bone manure. It acts as a very good fertiliser. If this is supplied, I believe there will be a slight increase in food production.

Lastly, I may say that agricultural staff must personally visit the villages and encourage farmers' forums, farmers' associations and farmers' clubs. Secondly each village must have a co-operative society for marketing the produce of the agriculturist and also to cater to his needs. Thirdly, I agree with the Government that they should take over the wholesale trading in foodgrains either directly or through agents and handle the entire marketable surplus. With these remarks, I close.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).—ಈ ದಿನ ನಮ್ಮ ದೇಶದಲ್ಲಿರತಕ್ಕ ಆಹಾರದ ಅಭಾವದಿಂದುಂಟಾಗಿರತಕ್ಕ ಕೊರತೆ ವಿಷಯವನ್ನು ನಾವು ಚರ್ಚೆಮಾಡುತ್ತಾ ಇದ್ದೇವೆ. ಇದಕ್ಕೆ ಅನೇಕ ಕಾರಣಗಳು ಇರುತ್ತವೆ. ಇದರಲ್ಲಿ ನಿನ್ನೆ ಶ್ರೀ ಹನುಮಂತಯ್ಯನವರು ಹೇಳಿದಹಾಗೆ ಐದು-ಆರು ವರ್ಷಗಳಿಂದ ನಮ್ಮ ದೇಶದಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬೀಳದಿರುವುದು ಒಂದು ಕಾರಣ ಮತ್ತು ಅದೇರೀತಿ ನಮ್ಮ ಜನಸಂಖ್ಯೆಯೂ ಕೂಡ ಹೆಚ್ಚಾಗಿರುವುದು ಮತ್ತೊಂದು ಕಾರಣ. ಇವು natural calamities. ಇವುಗಳ ಜೊತೆಗೆ ನಮ್ಮ ಅಧಿಕಾರಿಗಳಲ್ಲೂ ಕೂಡ ಬಹಳ ನ್ಯೂನತೆಗಳಿರುವುದರಿಂದ ಈ ಆಹಾರದ ಅಭಾವ ಹೆಚ್ಚಿದೆ ಎಂದು ನಾನು ಹೇಳಬಯಸುತ್ತೇನೆ. ರೈತರಿಗೆ ಸಕಾಲದಲ್ಲಿ ಕಬ್ಬಿಣದ ಸಾಮಾನು ದೊರೆಯುತ್ತಿಲ್ಲ ಎಂಬ ಮಾತು ನಿಜವಾಗಿಯೂ ಖಂಡಿತವಾದದ್ದು, ಅದು ನನ್ನ ಸ್ವಂತ ಅನುಭವ ಎಂದು ಹೇಳಬೇಕಾಗುತ್ತದೆ. ಏಕೆಂದರೆ ನಾನು ಅನೇಕ ಸೊಸೈಟಿಗಳಲ್ಲಿ ಹೋಗಿ ನೋಡಿದ್ದೇನೆ. ರೈತರು ತಮಗೆ ಬೇಕಾದ ಕಾಲದಲ್ಲಿ ಹೋಗಿ ಗುಳ ಬೇಕೆಂದು ಕೇಳಿದರೆ ಇಲ್ಲ, ಬರುತ್ತದೆ ಎಂದು ಹೇಳುತ್ತಾರೆ. ಮಳೆ ಬಿದ್ದು, ಬೇಸಾಯ ಆದಮೇಲೂ ಕೂಡ ಗುಳ ಬಂದಿರುವುದಿಲ್ಲ. ಗೊಬ್ಬರ ಹಾಕುವ ಕಾಲದಲ್ಲಿ ಗೊಬ್ಬರ ಬಂದಿರುವುದಿಲ್ಲ. ಹೀಗಾದರೆ ರೈತ ಯಾವ ತರಹ ಬೇಸಾಯ ಮಾಡಬಲ್ಲ, ಯಾವ ತರಹ ಆಹಾರದ ಉತ್ಪನ್ನ ಮಾಡಬಲ್ಲ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ. ಕಬ್ಬಿಣದ ಸಾಮಾನು ಕೇಳಿದರೆ ಯಾವಾಗಲೂ ನಮಗೆ ಸೆಂಟ್ರಲ್ ಗವರ್ನ್‌ಮೆಂಟ್ ಅಲಾಟ್‌ಮೆಂಟ್ ಇಲ್ಲ, ಐರನ್ ಅಂಡ್ ಸ್ಟೀಲ್ ಕಂಟ್ರೋಲರಿಂದ ಪರ್ಮಿಟ್ ಬಂದಿಲ್ಲ ಎಂದು ಟೆಕ್ನಿಕಲ್ ಡಿಫಿಕಲ್ಟೀಸ್ ಹೇಳುತ್ತಾರೆಯೇ ವಿನಾ ಸಕಾಲದಲ್ಲಿ ರೈತರಿಗೆ ಸಾಮಾನು ಒದಗಿಸಬೇಕೆಂದು ಖಂಡಿತವಾಗಿಯೂ ಮನಸ್ಸು ಮಾಡಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಎರಡನೆಯದಾಗಿ ನಮ್ಮ ಕರ್ನಾಟಕದಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡಬೇಕು. ನನಗೆ ತಿಳಿದಮಟ್ಟಿಗೆ ಹಿಂದೆ ಭದ್ರಾವತಿಯಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಪ್ರಾರಂಭ ಮಾಡಬೇಕೆಂದು ಇತ್ತು. ಆ ವಿಷಯ ಏನಾಯಿತೋ; ಸರ್ಕಾರದವರು ಕೈಬಿಟ್ಟರೋ ಏನೋ ಗೊತ್ತಿಲ್ಲ.

ಮೈನರ್ ಇರಿಗೇಷನ್ ಕೆಲಸದ ಬಗ್ಗೆ ಸರ್ಕಾರದವರು ಬಹಳ ಗಮನ ಕೊಡಬೇಕು. ಸುಮ್ಮನೆ ಕೇಂದ್ರ ಸರ್ಕಾರದವರು 30-40 ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದು ಹೇಳಿದರೆ ಪ್ರಯೋಜನವಿಲ್ಲ. ಪ್ರತಿ ಜಿಲ್ಲೆಯಲ್ಲಿಯೂ ಮೈನರ್ ಇರಿಗೇಷನ್ ಬೋರ್ಡ್ ಅಂತ ಹೇಳಿ ಒಂದು ಬೋರ್ಡ್ ರಚನೆಮಾಡಿ ಅದಕ್ಕೆ ಎಕ್ಸಿಕ್ಯೂಟಿವ್ ಇಂಜನಿಯರನ್ನು ಚೇರ್ಮನ್ ಆಗಿ ಮಾಡಬೇಕು. ಆ ಬೋರ್ಡ್ ಯಾವ ತರಹ ಮೈನರ್ ಇರಿಗೇಷನ್ ವರ್ಕ್ ಆಗಬೇಕು, ಯಾವುದು ಬಹಳ ಮುಖ್ಯವಾದದ್ದು, ಯಾವ ಕೆರೆಯ ತೂಬನ್ನು ಸರಿಮಾಡಬೇಕು, ಯಾವ ಕೆರೆಯ ಅಂಗಳವನ್ನು ರಿಪೇರಿ ಮಾಡಬೇಕು ಎನ್ನುವುದನ್ನು ಪರಿಶೀಲನೆಮಾಡಿ ಆಯಾಯ ಕೆಲಸ ಮಾಡಿಸುವುದು ಸೂಕ್ತ ಎಂದು ಕಾಣುತ್ತದೆ. ಅದನ್ನು ಬಿಟ್ಟು ಈಗಿನ ಮಾರ್ಗವನ್ನು ಅನುಸರಿಸಿದರೆ ರೈತರಿಗೆ ಯಾವ ಸೌಲಭ್ಯವೂ ದೊರೆಯುವುದಿಲ್ಲ. ಏಕೆಂದರೆ ರೈತರಿಗೆ ಅರ್ಜಿ ಕೊಡಿ ಎನ್ನುತ್ತಾರೆ. ಅರ್ಜಿಕೊಟ್ಟು ಆರು ತಿಂಗಳಾದರೂ ಏನೂ ಕೆಲಸ ಆಗಿರುವುದಿಲ್ಲ. ಕೆರೆಯಲ್ಲಿ ಹೂಳು ತುಂಬಿ ಎಷ್ಟು ನೀರು ನಿಲ್ಲಬೇಕೋ ಅಷ್ಟು ನೀರು ನಿಲ್ಲುವುದಿಲ್ಲ. ಸಕಾಲದಲ್ಲಿ ತೂಬು ರಿಪೇರಿ ಮಾಡಿದರೆ ಬೇಕಾದಷ್ಟು ನೀರು ನಿಂತು ಎರಡನೆಯ ಬೆಳೆ ತೆಗೆಯುವುದಕ್ಕೂ ಸಹ ಅನುಕೂಲವಾಗುತ್ತದೆ. ಇಲಾಖೆಯವರ ಒಂದು ಆಲಸ್ಯದಿಂದ ಆಗಬೇಕಾದ ಕೆಲಸಗಳು ಆಗದೆ ರೈತರಿಗೆ ಅನಾನುಕೂಲವಾಗುತ್ತಾ ಇದೆ. ಆದ್ದರಿಂದ ಖಂಡಿತವಾಗಿಯೂ ಡಿಸ್ಟ್ರಿಕ್ಟ್ ಮೈನರ್ ಇರಿಗೇಷನ್ ಬೋರ್ಡ್ ರಚನೆಮಾಡಿ ಅದಕ್ಕೆ ಎಕ್ಸಿಕ್ಯೂಟಿವ್ ಇಂಜನಿಯರನ್ನು ಚೇರ್ಮನ್ ಆಗಿ ಹಾಕಿ ಅವಮೂಲಕ ಕೆಲಸಕಾರ್ಯಗಳನ್ನು ಮಾಡಿಸಬೇಕೆಂದು ಹೇಳುತ್ತೇನೆ.

ನಮ್ಮ ಪ್ರಾಂತ್ಯದಲ್ಲಿ ಅನೇಕ ಜಮೀನುಗಳು ಪಾಳು ಬೀಳುತ್ತಾ ಇವೆ. ಆದ್ದರಿಂದ ಇದನ್ನು ತಪ್ಪಿಸಲು ಸರ್ಕಾರದವರು ಒಂದು ಆರ್ಡರ್ ಮಾಡಬೇಕು. ಏನೆಂದರೆ ಜಮೀನು ಯಾರು ಪಾಳುಬಿಟ್ಟಿದ್ದಾರೋ ಅವರೇ ಅದನ್ನು ಸಾಗುವಳಿ ಮಾಡಬೇಕು ಇಲ್ಲದೇ ಇದ್ದರೆ ಸರ್ಕಾರದವರಿಗೆ ವಹಿಸಬೇಕು ಎಂದು. ನೂರಾರು ಎಕರೆ ಜಮೀನು ಪಾಳುಬಿಡುವುದು ದೇಶದ ಹಿತದೃಷ್ಟಿಯಿಂದ ಬಹಳ ಅನ್ಯಾಯ ಎಂದು ಹೇಳಬೇಕಾಗುತ್ತದೆ.

ನಮ್ಮ ದೇಶದಲ್ಲಿ ಬ್ಯಾಲೆನ್ಸ್ಡ್ ಡೈಯಟ್ ಮತ್ತು ಮಿಕ್ಸ್‌ಡ್ ಫಾರ್ಮಿಂಗ್ ಎನ್ನುವುದು ನಮ್ಮ ಜನರಿಗೆ ಗೊತ್ತೇಇಲ್ಲ, ಸರ್ಕಾರ ಈ ವಿಷಯದಲ್ಲಿ ಪ್ರಚಾರ ಮಾಡಿಯೇ ಇಲ್ಲ ಎಂದು ಹೇಳಬೇಕಾಗುತ್ತದೆ. ಮಿಕ್ಸ್‌ಡ್ ಫಾರ್ಮಿಂಗ್, ಬ್ಯಾಲೆನ್ಸ್ಡ್ ಡೈಯಟ್ ವಿಷಯದಲ್ಲಿ ಸರ್ಕಾರ ತಕ್ಕ ಪ್ರಚಾರಕಾರ್ಯ ಮಾಡಬೇಕು. ಪೌಲ್ಟ್ರಿ, ಫಿಷರೀ, ಡೈರೀಯಿಂಗ್ ಇದಕ್ಕೆ ಹೆಚ್ಚು ಉತ್ತೇಜನ ಕೊಡಬೇಕು. ಕೊನೆಯ ಪಕ್ಷ ಮಾಡಲ್ ಫಾರಂಸ್‌ನ್ನು ತೆಗೆದು ರೈತರಿಗೆ ಉತ್ಸಾಹ ಬರುವಂತೆ ಕೆಲಸಕಾರ್ಯಗಳನ್ನು ಮಾಡಬೇಕೆಂದು ಹೇಳುತ್ತೇನೆ. ಆದರೆ ರೈತನಿಗೆ ತಾನು ಬೆಳೆದ ಪದಾರ್ಥಕ್ಕೆ ಸರಿಯಾದ ಬೆಲೆ ಸಿಕ್ಕದೆ ಇರುವುದರಿಂದ ಆತನಿಗೆ ವ್ಯವಸಾಯದಲ್ಲಿ ನಿರಾಸೆಯುಂಟಾಗಿದೆ. ರೈತನಿಗೆ ಸರಿಯಾದ ಬೆಲೆ ದೊರೆಯುವಂತೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

2-30 P.M.

ಕೊನೆಯದಾಗಿ ಸರ್ಕಾರದವರು ಈಗ Five-Year Plan periodನಲ್ಲಿ ಎರಡು ವರ್ಷಗಳಲ್ಲಿ ಸುಮಾರು

(ಶ್ರೀ ಎ. ಎಂ. ಬಸವೇಗೌಡ)

ಐದು ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ರಫ್ತು ಮಾಡಿದ್ದಾರೆ ಎಂದು ಒಪ್ಪಿಕೊಂಡರೆ ಆಹಾರದ ಕೊರತೆ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ನಮ್ಮಲ್ಲಿ ಆಹಾರದ ಕೊರತೆ ಎಷ್ಟಿದೆ, ಜನಗಳು ಹುಟ್ಟುವುದು ಎಷ್ಟು ಜಾಸ್ತಿಯಾಗಿದೆ ಎಂದು ತಿಳಿದುಕೊಂಡಲ್ಲಿ ಫ್ಯಾಮಿಲಿ ಪ್ಲಾನಿಂಗ್ ಜಾರಿಗೆ ತರಬೇಕಾದ ಅವಶ್ಯಕತೆಯೂ ಗೊತ್ತಾಗುತ್ತದೆ. ಸರ್ಕಾರ ಇತ್ತಕಡೆಯೂ ಗಮನ ಕೊಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

*ಶ್ರೀಮತಿ ರುಕ್ಮಿಣಿಯಮ್ಮ (ಹೊಸಕೋಟೆ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಮಹಾ ಸಭೆಯಲ್ಲಿ ಚರ್ಚೆ ನಡೆಯುತ್ತಿರುವ ಈ ಆಹಾರ ಸಂಬಂಧದ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಹೇರಳವಾದ ಭೂಮಿಯು ಕೆಲವೇ ಜನರ ಸ್ವತ್ತಾಗಿರುವುದು ಆಹಾರಧಾನ್ಯಗಳ ಕೊರತೆಗೆ ಇರುವ ಕಾರಣಗಳಲ್ಲಿ ಒಂದು ಮಹತ್ವವಾದದ್ದು. ದೊಡ್ಡ ಜಮೀನುದಾರರು ಈ ದಿವಸ ಆಹಾರ ಪದಾರ್ಥಗಳ ಬೆಳೆಗಿಂತ ಹಣ ಬರುವ ಬೆಳೆಗಳನ್ನು ಬೆಳೆಯುವುದು ಹೆಚ್ಚಾಗಿದೆ. ಕಷ್ಟಜೀವಿಯಾದ ವ್ಯವಸಾಯ ಕೂಲಿ ದುಡಿತಕ್ಕಾಗಿಯೇ ಹುಟ್ಟಿರುವ ಹರಿಜನರ ಕೈಯಲ್ಲಿ ಈ ದಿವಸ ಭೂಮಿ ಇಲ್ಲ. ಭೂಮಿಯು ಇವರ ವಶಕ್ಕೆ ಹೋದ ಹೊರತು ನಮ್ಮ ದೇಶದಲ್ಲಿ ಆಹಾರದ ಕೊರತೆ ಖಂಡಿತ ಸಿಕ್ಕಲಾರದು. ಟ್ರ್ಯಾಕ್ಟರುಗಳು, ಬುಲ್ ಡೋಜರುಗಳು, ಕಬ್ಬಿಣದ ನೇಗಿಲುಗಳು, ಸೀಮೆ ಗೊಬ್ಬರ, ರಸಾಯನ ಗೊಬ್ಬರ ಇವೆಲ್ಲವೂ ಶ್ರೀಮಂತರ ಸಾಮಗ್ರಿಗಳು. ಇವುಗಳ ಪ್ರಯೋಜನ ಬಡರೈತನಿಗೆ ದೊರೆಯುತ್ತಿಲ್ಲ.

ಸ್ವಾಮಿ, ನಮ್ಮ ದೇಶದಲ್ಲಿ ಬೇಕಾದಷ್ಟು ಗೋಮಾಳವಿದೆ. ಅನೇಕ ಎಕರೆಗಳು ಉತ್ತಮವಾದ ಜಮೀನು ಗೋಮಾಳದ ಹೆಸರಿನಲ್ಲಿ ಹಾಳು ಬಿದ್ದಿವೆ. ಹರಿಜನರು ಜಮೀನು ಕೇಳಿದರೆ ಗೋಮಾಳ ಸಾಲದು ಎಂದು ಹೇಳುತ್ತೀರಿ. ಆ ಗೋಮಾಳದಲ್ಲಿ ಒಳ್ಳೆಯ ಬೆಳೆ ಬೆಳೆದು ದನಗಳಿಗೆ ಪುಷ್ಟಿಯಾದ ಆಹಾರವೇನಾದರೂ ಗ್ರಾಮಸ್ಥರು ಬೆಳೆಯುತ್ತಿದ್ದಾರೆಯೇನು ? ಇಲ್ಲ, ಇಂಥ ಗೋಮಾಳದಲ್ಲಿ ದನಗಳು ಮೇದರೆ ಅವು ಎಷ್ಟು ಮಾತ್ರ ಏಳಿಗೆಯಾದಾವು ಎಷ್ಟು ಹಾಲು ಕರೆದಾವು ಎಂಬುದನ್ನು ಯೋಚನೆಮಾಡಿ. ಗೋಸಂಪತ್ತಿರುವುದು ಶ್ರೀಮಂತರಿಗೆ ಈ ದಿವಸ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ—ಇವುಗಳು ಯಥೇಷ್ಟವಾಗಿ ದೊರೆಯಲು ಇದನ್ನು ತಿನ್ನುವವರೂ ಸಹ ಅವರೇ. ಬೇಕಾದಷ್ಟು ಭೂಮಿ ಅವರ ವಶದಲ್ಲಿದೆ. ಅವರು ತಮ್ಮ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಗೋಸಂಪತ್ತಿನ ಬೆಳೆಗಾಗಿ ಮೀಸಲಾಗಿಡಲಿ. ಗೋಮಾಳವನ್ನು ಸಾಗುವಳಿಗೆ ಕೊಡಿ, ಅದರಲ್ಲೂ ಮುಖ್ಯವಾಗಿ ಹರಿಜನರಿಗೆ ಕೊಡಿ.

ವ್ಯವಸಾಯವನ್ನು ಚೆನ್ನಾಗಿಮಾಡಲು ನಾನಾ ವಿಧವಾದ ಸಹಕಾರಗಳನ್ನು ಸರ್ಕಾರ ನೀಡುತ್ತಿದೆ. ಆದರೆ ಯಾರಿಗೆ ಅದರ ಉಪಯೋಗವಾಗಬೇಕೋ ಅವರಿಗೆ ಸರಿಯಾಗಿ ಉಪಯೋಗವಾಗುತ್ತಿಲ್ಲ. ಬಾವಿಗಳಿಗೆ ಸಬ್ಸಿಡಿ, ಆಬಾದು, ಸಾಲ, ತಕಾವಿಸಾಲ, ಇವುಗಳೆಲ್ಲ ಯಾರಿಗೆ ಸಿಕ್ಕುತ್ತಿದೆ ಎನ್ನುವುದನ್ನು ಸರ್ಕಾರ ಗಮನದಲ್ಲಿಡಬೇಕು. ನಾನಾ ರೀತಿಯಲ್ಲಿ ಸರ್ಕಾರ ಸಹಾಯವನ್ನು ನೀಡುತ್ತಿದೆ. ಆದರೆ ಯಾರಿಗೆ ಉಪಯೋಗವಾಗಬೇಕೋ ಅವರಿಗೆ ಸರಿಯಾಗಿ ಉಪಯೋಗ ಸಿಕ್ಕುತ್ತಿಲ್ಲ. ಆದುದರಿಂದ ಸರ್ಕಾರದವರು ಇವನ್ನೆಲ್ಲ ಸರಿಯಾದರೀತಿಯಿಂದ ಗಮನದಲ್ಲಿಡಬೇಕು. ರೈತನಿಗೆ ಸಕಾಲದಲ್ಲಿ ಗೊಬ್ಬರ, ಬೀಜವಗೈರೆ ಸಿಕ್ಕುವಂತೆ ಅವಕಾಶಮಾಡಿಕೊಡಬೇಕು.

ಸ್ವಾಮಿ, ಈಗ ನನ್ನ ಕ್ಷೇತ್ರವಾದ ಹೊಸಕೋಟೆ ತಾಲ್ಲೂಕಿನ ಸ್ಥಿತಿಯನ್ನು ಸಭೆಯ ಅವಗಾಹನೆಗೆ ತರುತ್ತೇನೆ. ದೇಶದಲ್ಲಿ ಚುನಾವಣೆಗಳು ನಡೆಯುವಾಗ ಪಾರ್ಟಿಗಳಾಗುತ್ತವೆ, ಅನಂತರ ಅದರ ಪ್ರಭಾವ ಕಡಮೆಯಾಗುತ್ತದೆ. ಆದರೆ ನನ್ನ ಕ್ಷೇತ್ರದ ಸ್ಥಿತಿಯೇ ಬೇರೆ. ಇಲ್ಲಿ ಪಾರ್ಟಿ ಎಂದರೆ ಶತಮಾನಗಳವರೆಗೂ ಇರುವ ಪಾರ್ಟಿ. ಈ ಪಾರ್ಟಿಗಳ ಮಧ್ಯೆ ಬಡರೈತನು ಸಿಕ್ಕಿ ಚಟ್ನಿಯಾಗುತ್ತಿದ್ದಾನೆ. ಹೊಸಕೋಟೆ ತಾಲ್ಲೂಕಿನಲ್ಲಿ ಕೊಲೆ, ದರೋಡೆ, ಮಾರಾಮಾರಿ, ಹೊಡೆದಾಟ, ಹರಿಜನರ ಮೇಲೆ ದೌರ್ಜನ್ಯ, ಇವೆಲ್ಲ ಒಂದು ಕಲೆಯಾಗಿ ಹೋಗಿದೆ. ಈ ಸಂಬಂಧದಲ್ಲಿ ನೊಂದವರ ಗೋಳು ಅರಣ್ಯರೋದನವಾಗಿದೆ. ಅದು ಹಾಗಿರಲಿ, ನನ್ನ ಕ್ಷೇತ್ರವಾದ ಹೊಸಕೋಟೆ-ದೇವನಹಳ್ಳಿ ತಾಲ್ಲೂಕುಗಳು ಸರ್ಕಾರದವರ ಗಮನದಲ್ಲಿಲ್ಲದ ಹಾಗೆ ಕಾಣುತ್ತದೆ. ಇಲ್ಲಿ ಕೈಗಾರಿಕೆಗಳಿಲ್ಲ. ವ್ಯಾಪಾರಕ್ಕೆ ಅನುಕೂಲಗಳಿಲ್ಲ, ನೀರಾವರಿಯಂತೂ ಇಲ್ಲವೇ ಇಲ್ಲ. ಹತ್ತನ್ನೆರಡು ವರ್ಷಗಳಾದರೂ ಕೆರೆಕಟ್ಟೆಗಳ ರಿಕಾರ್ಡುಗಳು ಈಚೆಗೆ ಬಂದಿಲ್ಲ. ಹಳೆಯ ಕೆರೆಗಳು ಹೂತುಹೋಗಿ ನೀರೇ ನಿಲ್ಲದಂತಾಗಿದೆ. ಅವುಗಳ ಕಡೆಗೆ ಸರ್ಕಾರ ಗಮನವನ್ನೇ ಕೊಟ್ಟಿಲ್ಲ. ಹೊಸಕೋಟೆ ದೊಡ್ಡ ಕೆರೆಯ ತುಂಬಾ ಸದಾ ನೀರು ಕಾಣುತ್ತಿರುವುದರಿಂದ ಈ ತಾಲ್ಲೂಕು ಚೆನ್ನಾಗಿದೆ ಎಂಬ ಭಾವನೆ ಬಂದು ಹೋಗಿದೆ ಎಂದು ಕಾಣುತ್ತದೆ. ಇಲ್ಲಿಗೆ N.E.S. ಬ್ಲಾಕನ್ನು ಕೊಡಬೇಕೆಂದು ಹಿಂದೆ ಮನವಿಮಾಡಿಕೊಂಡಿದ್ದೇನೆ. ಸರ್ಕಾರದವರು ನಮ್ಮ ತಾಲ್ಲೂಕಿಗೆ ಒಂದು N.E.S. ಬ್ಲಾಕನ್ನು ಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಅದನ್ನು ಈಗ ಕೈಬಿಟ್ಟಿದ್ದಾರೆಂದು ಕಾಣುತ್ತದೆ. ಈಗಲಾದರೂ ಈ ಎರಡು ತಾಲ್ಲೂಕುಗಳಿಗೆ N.E.S. ಬ್ಲಾಕ್ ಕೊಡಬೇಕು ಎಂದು ಹೇಳುತ್ತೇನೆ.

ಗೋಮಾಳಗಳನ್ನು ಕೂಡ ಸಾಗುವಳಿಗೆ ಕೊಡಿ. ಖಂಡಿತವಾಗಿಯೂ ಈ ದಿವಸ ಗೋಮಾಳದ ಅವಶ್ಯಕತೆ ಸರ್ಕಾರ ಭಾವಿಸಿರುವಷ್ಟು ಇಲ್ಲ. ಹರಿಜನರಿಗೆ ಜಮೀನುಗಳನ್ನು ಕೊಡಲಾರದ ದುಃಖವೇ ಗೋಮಾಳದ ತಂತ್ರವೇ ಹೊರತು ಬೇರೆ ಏನೂ ಅಲ್ಲ.

ಮೊದಲು ಕೊಡುತ್ತಿದ್ದಂತೆ ಬಾವಿಗಳಿಗೆ ಸಬ್ಸಿಡಿ ಧಾರಾಳವಾಗಿ ಕೊಡಿ. ಗ್ರೋಮೋರ್ ಫುಡ್ ಸ್ಕೀಮನ್ನು ಹೆಚ್ಚುಮಾಡಿ. ಮುಖ್ಯವಾಗಿ ರಾಗಿ, ಜೋಳ, ಭತ್ತ, ಗೋಧಿ ಇವನ್ನು ಬೆಳೆಯುವುದಕ್ಕೆ ಅನುಕೂಲಮಾಡಿಸಿಕೊಡಿ. ಕೂಡಲೇ ಆಹಾರ ಪದಾರ್ಥಗಳ ಬೆಲೆಯನ್ನು ನಿಗದಿಮಾಡಿ, ಹೆಚ್ಚು ಡಿಪೋಗಳನ್ನು ತೆರೆಯಿರಿ, ಹೋಟಲುಗಳ ಸಂಖ್ಯೆಯನ್ನು ಸಾಧ್ಯವಾದಷ್ಟು ಕಡಮೆಮಾಡಿ. ಗ್ರೋಮೋರ್ ಫುಡ್ ಸ್ಕೀಮನ್ನು ಸರಿಯಾಗಿ ಕಾರ್ಯಗತ ಮಾಡಿ ಮತ್ತು ಜನರಿಗೆ ಅನುಕೂಲವಾಗುವಂತೆ ಡಿಪೋಗಳನ್ನು ತೆರೆದು ಅವರಿಗೆ ಆಹಾರಧಾನ್ಯಗಳನ್ನು ಒದಗಿಸಿಕೊಟ್ಟು ಆಹಾರದ ಕೊರತೆಯನ್ನು ನೀಗುವಂತೆ ಮಾಡಬೇಕೆಂದು ತಿಳಿಸಿ, ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ಆಹಾರ ವಿಷಯದ ಚರ್ಚೆಯನ್ನು ಸಭೆಯ ಮುಂದಿಟ್ಟು

ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕೆ ಕುತೂಹಲಪಟ್ಟಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಈಗ ನಮ್ಮ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಸುಮಾರು ಹನ್ನೊಂದು ವರ್ಷಗಳಾದುವು. ಹಿಂದೆ ಅವರು ಆಡಳಿತ ವಹಿಸಿಕೊಂಡಾಗ ನಾವು ಪ್ರತಿಯೊಬ್ಬರಿಗೂ ಆಹಾರದ ಕೊರತೆ ಇಲ್ಲದ ಹಾಗೆ ಮಾಡುತ್ತೇವೆ, ಪ್ರತಿಯೊಬ್ಬರಿಗೂ ಆಹಾರವನ್ನೊದಗಿಸುತ್ತೇವೆಂದು ಭರವಸೆ ಕೊಟ್ಟರು. ಇಷ್ಟಾದರೂ ಇನ್ನೂ ಆಹಾರದ ಕೊರತೆ ತಪ್ಪಿಲ್ಲ. ಆಹೊತ್ತು ಯಾವ ಸ್ಥಿತಿಯಲ್ಲಿದ್ದೆವೋ ಅದಕ್ಕಿಂತ ಹೆಚ್ಚಿನ ಆಹಾರದ ಕೊರತೆಯುಳ್ಳ ಸ್ಥಿತಿಯಲ್ಲಿ ಇವೊತ್ತಿನ ದಿವಸ ಇದ್ದೇವೆ. ಇಲಾಖೆಯವರು ಕೊಟ್ಟಿರುವ ಸ್ಟೇಟ್‌ಮೆಂಟಿನಲ್ಲಿ ನಮ್ಮ ದೇಶದಲ್ಲಿ ನಾಲ್ಕು ಲಕ್ಷ ಟನ್ ಅಕ್ಕಿಯ ಕೊರತೆ ಇದೆ ಎಂದು ಹೇಳುತ್ತಾರೆ. ಭತ್ತದ ವ್ಯವಸಾಯ ಉತ್ತಮ ರೀತಿಯಲ್ಲಿ ಆಗಬೇಕು, ಜಪಾನ್ ಮಾದರಿಯನ್ನು ಆಚರಣೆಗೆ ತರಬೇಕು ಎಂದು ಇಲಾಖೆಯವರು ಎಲ್ಲ ಕಡೆಯೂ ಪ್ರಚಾರಮಾಡುತ್ತಿದ್ದಾರೆ. ಅವರು ಎಷ್ಟರಮಟ್ಟಿಗೆ ಪ್ರಚಾರಮಾಡುತ್ತಿದ್ದಾರೆ, ಎಷ್ಟರಮಟ್ಟಿಗೆ ಸಕಾಲದಲ್ಲಿ ಸಾಕಾದಷ್ಟು ಗೊಬ್ಬರ ವಗೈರೆಗಳನ್ನೊದಗಿಸುತ್ತಿದ್ದಾರೆನ್ನುವುದನ್ನು ಸರಿಯಾಗಿ ಯೋಚನೆಮಾಡಿದರೆ ಗೊಬ್ಬರ ಕಾಲಕ್ಕೆ ಸರಿಯಾಗಿ ಸಿಕ್ಕುತ್ತಿಲ್ಲ. ಕಂಪೋಸ್ಟ್ ಗೊಬ್ಬರವನ್ನು ಮಾಡುವುದಕ್ಕೆ ಹಳ್ಳಿಗಳಲ್ಲಿ ಅವಕಾಶವಿದೆ; green manure seeds ರೈತನಿಗೆ ಮುಫತ್ತಾಗಿ ಒದಗಿಸಬೇಕು. ಜಮೀನಿನಲ್ಲಿ ಹಸುರು ಗೊಬ್ಬರವನ್ನು ಉಪಯೋಗಿಸಿದರೆ ಆ ಗೊಬ್ಬರದಿಂದ ಬೆಳೆ ಬಹಳ ಫಲವತ್ತಾಗಿ ಬರುತ್ತದೆ.

ಹೆಚ್ಚು ಗೊಬ್ಬರವನ್ನೊದಗಿಸುವುದಕ್ಕೆ ತಾತ್ಕಾಲಿಕವಾಗಿ ಸಾಧ್ಯವಿಲ್ಲವಾದುದರಿಂದ ಹೆಚ್ಚು ಹಸುರು ಗೊಬ್ಬರದ ಬೀಜವನ್ನು ರಿಯಾಯಿತಿ ದರದಲ್ಲಿ ಒದಗಿಸಿದರೆ ರೈತ ಜಮೀನಿನಲ್ಲಿ ಹಸುರು ಗೊಬ್ಬರದ ಗಿಡಗಳನ್ನು ಬೆಳೆಯುವುದಕ್ಕೂ ಹೆಚ್ಚು ಫಸಲು ಪಡೆಯುವುದಕ್ಕೂ ಅವಕಾಶವಾಗುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟು ಆಚರಣೆಗೆ ತರಬೇಕು. ಈಗ ಮೂರು ಲಕ್ಷ ಚಿಲ್ಲರೆ ಎಕರೆಗಳಲ್ಲಿ ಜಪಾನ್ ಕ್ರಮದಲ್ಲಿ ಬತ್ತ ಬೆಳೆಯುತ್ತಿದ್ದೇವೆಂದು ಹೇಳಿದ್ದಾರೆ. ಇದನ್ನು ಹೆಚ್ಚುಮಾಡಬೇಕು. ಈ ಸಂದರ್ಭದಲ್ಲಿ ಇನ್ನೊಂದು ಸೂಚನೆಕೊಡಬೇಕಾಗಿದೆ. ಸರ್ಕಾರದಲ್ಲಿ ಬೇಕಾದಷ್ಟು waste lands ಇವೆ. ಇವನ್ನೆಲ್ಲಾ ತಕ್ಷಣ ಅಧಿಕಾರಿಗಳಿಗೆ ಸೂಚನೆಕೊಟ್ಟು ವಿಲೇ ಮಾಡಬೇಕು, ದರಖಾಸ್ತು ಅರ್ಜಿಗಳು ಬಂದರೆ ವರ್ಷಗಟ್ಟಲೆ ತಾಲ್ಲೂಕು ಕಚೇರಿಯನ್ನು ಬಿಡುವುದಿಲ್ಲ. ಈ ಕೆಲಸವನ್ನು ಜಾಗ್ರತೆ ಮಾಡಿ ಭೂಮಿ ವಿಲೇವಾರಿ ಮಾಡಿದರೆ ಆಹಾರೋತ್ಪತ್ತಿ ಹೆಚ್ಚುತ್ತದೆ.

ಮೈನರ್ ಕೆರೆಗಳ ಜೀರ್ಣೋದ್ಧಾರ ಬಹು ಮುಖ್ಯವಾದುದು, ದೇಶದಲ್ಲಿ ಬೇಕಾದಷ್ಟು ಕೆರೆಗಳು ಒಡೆದು ಹೋಗಿವೆ. ಅವುಗಳನ್ನು ಜೀರ್ಣೋದ್ಧಾರಮಾಡಿಕೊಡಿ ಎಂದು ಎಷ್ಟೋ ವೇಳೆ ಜನ ಕೇಳುತ್ತಿದ್ದಾರೆ. ವರ್ಷಗಟ್ಟಲೆ ಜೀರ್ಣೋದ್ಧಾರವಾಗುವುದಿಲ್ಲ, ಹೀಗಾದರೆ ಹೇಗೆ ಆಹಾರ ಹೆಚ್ಚಾಗುತ್ತದೆ ! ಪಾಂಡವಪುರ ತಾಲ್ಲೂಕಿನ ಚಿನಕುರುಳಿ ಮತ್ತು ಮೇಲುಕೋಟೆ ಹೋಬಳಿಗಳಲ್ಲಿ ಎಷ್ಟೋ ಕೆರೆಗಳು ಒಡೆದುಹೋಗಿವೆ. ಒಂದೂ ಜೀರ್ಣೋದ್ಧಾರವಾಗಿಲ್ಲ, ಹೀಗಾದರೆ ಹೇಗೆ ಹೆಚ್ಚು ಆಹಾರ ಬೆಳೆಯುವುದು ! ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಆಯಾ ಜಿಲ್ಲೆಯಲ್ಲಿ ಒಂದೊಂದು ಸಮಿತಿಯನ್ನು ಮಾಡಬೇಕು, ಶ್ರೀ ಬಸವೇಗೌಡರು ಈ ವಿಚಾರ ಹೇಳಿದ್ದಾರೆ. ಜಿಲ್ಲೆಯ ಎಗ್ಸಿಕ್ಯೂಟೀವ್ ಇಂಜಿನಿಯರು ಅಥವ ಡೆಪ್ಯುಟಿ ಕಮೀಷನರು ಯಾರನ್ನಾದರೂ ಅಧ್ಯಕ್ಷರನ್ನಾಗಿ ನೇಮಕಮಾಡಬಹುದು. ಅವರ ಸಲಹೆ ಪಡೆದು ನಿರ್ದಿಷ್ಟಕಾರ್ಯಕ್ರಮದಂತೆ ಯಾವ ಯಾವ ಕೆರೆಗಳನ್ನು ಜೀರ್ಣೋದ್ಧಾರ ಮಾಡಬಹುದೋ ಮಾಡಿ, ಪಿಕಪ್‌ಗಳನ್ನು ಸಾಧ್ಯವಾದೆಡೆಯಲ್ಲೆಲ್ಲಾ ಹಾಕಿ ರೈತರಿಗೆ ನೀರು ಒದಗಿಸಿದರೆ, ದೇಶದಲ್ಲಿ ಆಹಾರದ ಕೊರತೆ ಹೆಚ್ಚು ಕಾಲವಿರುವುದಿಲ್ಲ. ಇದನ್ನು ಮಾಡಬೇಕು.

ಒಳ್ಳೆಯ ಬೀಜಗಳನ್ನು ಪಡೆಯಲು ಈ ವರ್ಷ 56 ಸೀಡ್ ಫಾರಮುಗಳನ್ನು ಏರ್ಪಡಿಸುವುದು ಸರ್ಕಾರದ ಉದ್ದೇಶವೆಂದು ಹೇಳಿದ್ದಾರೆ. ಈಗಾಗಲೇ 45 ಫಾರಮುಗಳು ತಯಾರಾಗಿವೆಯೆಂದೂ ಬಾಕಿ 11 ಫಾರಮುಗಳನ್ನು ಮಾಡುವುದಾಗಿಯೂ ಹೇಳಿದ್ದಾರೆ. ಈ ಫಾರಮುಗಳನ್ನು ಬೇಗ ಏರ್ಪಾಡುಮಾಡಬೇಕು. ಈಗ ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್‌ನಿಂದ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ, ಇವರು ಅಷ್ಟು ಶಾಸ್ತ್ರೀಯವಾಗಿ ಬೆಳೆಯುವುದಿಲ್ಲ; ಇದರಿಂದಲೇ ದೇಶದಲ್ಲಿ ಬೆಳೆಗೆ ರೋಗ ಹೆಚ್ಚಾಗುತ್ತಿದೆ. ಶ್ರೀರಂಗಪಟ್ಟಣದ ಕಡೆ ಎಷ್ಟೋ ಬೆಳೆ ಹುಳು ಬಿದ್ದು ಹಾಳಾಗುತ್ತಿದೆ. ಆದಕಾರಣ ಸೀಡ್ ಫಾರಮು ಮಾಡಿ ಉತ್ತಮವಾದ ಬೀಜದ ಕೊರತೆಯನ್ನು ನಿವಾರಿಸಬೇಕು. ರಿಜಿಸ್ಟರ್ಡ್ ಗ್ರೋಯರ್ಸ್‌ನಿಂದ ತೆಗೆದುಕೊಳ್ಳುವುದು ಅಷ್ಟು ಒಳ್ಳೆಯದಲ್ಲ. ಫಾರಮುಗಳಿಂದಲೇ ಸರಬರಾಜು ಮಾಡಿದರೆ ಉತ್ತಮ ಬೀಜ ಸಿಕ್ಕುತ್ತದೆ, ಇದರಿಂದ ಉತ್ತಮ ಫಸಲು ಬರುತ್ತದೆ, ಆದಕಾರಣ ಇದನ್ನು ಏರ್ಪಾಡು ಮಾಡಬೇಕು. ಆಹಾರ ಬೆಳೆಗೆ ಬರುವ ರೋಗವನ್ನು ನಿವಾರಣೆ ಮಾಡುವುದೇನೋ ಅಗತ್ಯ. ಆದರೂ ಇನ್ನೊಂದು ರೀತಿಯಲ್ಲಿ ಆಹಾರ ಪೋಲಾಗುತ್ತಿದೆ; ಇಲಿ, ಕೋತಿ ಇವುಗಳ ಕಾಟದಿಂದಾಗುತ್ತಿದೆ. ಸುಮಾರು ಕಾಲು ಭಾಗವನ್ನು ಈ ಪ್ರಾಣಿಗಳು ತಿಂದು ಹಾಕುತ್ತಿವೆ, ಅವನ್ನು ನಿರ್ಮೂಲ ಮಾಡಲು ಕಾರ್ಯ ಕ್ರಮ ತೆಗೆದುಕೊಳ್ಳಬೇಕು. ಹಂದಿಗಳಿಂದಾಗುವ ತೊಂದರೆಗಿಂತಲೂ ಕೋತಿ ಮತ್ತು ಇಲಿಗಳಿಂದ ಆಗುವ ತೊಂದರೆ ಹೆಚ್ಚಾಗಿದೆ. ಚೈನಾ ದೇಶದಲ್ಲಿ ಹೇಗೆ ಇದನ್ನೆಲ್ಲಾ ನಿರ್ಮೂಲ ಮಾಡಿದ್ದಾರೆಯೋ ಹಾಗೆ ಇಲ್ಲಿಯೂ ಮಾಡಬೇಕು.

ರೈತ ಬಡವ, ಅವನ ವ್ಯವಸಾಯಕ್ಕೆ ಅಗತ್ಯವಾದ ಎತ್ತುಗಳನ್ನು ಕೊಳ್ಳುವುದಕ್ಕೆ, ವ್ಯವಸಾಯದ ಸಲಕರಣೆಗಳನ್ನು ಕೊಳ್ಳುವುದಕ್ಕೆ ಅವನಲ್ಲಿ ಹಣ ಇರುವುದಿಲ್ಲ, ಇದಕ್ಕೆ ಅವನಿಗೆ ಸಾಲ ಕೊಡಬೇಕು, ಹೀಗೆ ಮಾಡಿ ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರದವರು ಇನ್ನೊಂದು ಉದ್ದೇಶವನ್ನಿಟ್ಟುಕೊಂಡಿರುವ ಹಾಗೆ ಕಾಣುತ್ತದೆ. ಆಹಾರಧಾನ್ಯಗಳನ್ನು ಹಿಂದೆ ಕಂಟ್ರೋಲ್ ಮಾಡಿ, ಬತ್ತವನ್ನು ಕೊಂಡು ಶೇಖರಿಸಿ ಮಿಲ್ಲುಗಳಲ್ಲಿಡುತ್ತಿದ್ದರು. ಅಧಿಕಾರಿಗಳಿಗೆ ಇದರ ಅನುಭವವಿದೆ, ಮಿಲ್ಲುಗಳಲ್ಲೇ ಗೋಡೌನ್ ಮಾಡಿ ಹಲ್ ಮಾಡಿಸುವ ಪದ್ಧತಿ ಇತ್ತು. ಕೆಳಗಿರುವ ಬತ್ತ ಕೊಳೆತು ಮುಗ್ಗಿ ಹೋಗುತ್ತದೆಂದು ಹೇಳಿ, ಅಧಿಕಾರಿಗಳು ಮಿಲ್ಲು ಮಾಲೀಕರೂ ಜೊತೆಯಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಆದಕಾರಣ ಸರ್ಕಾರಕ್ಕೆ ನಾನು ಹೇಳುತ್ತೇನೆ, ಇಂಥ ಪ್ರಯತ್ನ ಮಾಡಬೇಡಿ; ಕೊಂಡು ದಾಸ್ತಾನು ಮಾಡಬಾರದು, ಹಾಗೆ ಮಾಡಿದರೆ ಮಿಲ್ ಮಾಲೀಕರು ಲಾಭ ಪಡೆಯುತ್ತಾರೆ, ಅಧಿಕಾರಿಗಳನ್ನು ಕೈಯಲ್ಲಿ ಹಾಕಿಕೊಂಡು ಇಷ್ಟು ಏನು ಮಾಡುವುದಕ್ಕೂ

(ಶ್ರೀ ಬಿ. ಚಾಮಯ್ಯ)

ಸಿದ್ಧ. ಸುಗ್ಗಿ ಕಾಲದಲ್ಲಿ ಹಳೆಯ ಬತ್ತವನ್ನು ಮಾರಿಕೊಂಡು ಹೊಸ ಬತ್ತವನ್ನು ಕೊಂಡು ಸೇರಿಸುತ್ತಾರೆ, ಹಳೆಯದು 40 ರೂಪಾಯಿ ಇದ್ದರೆ ಹೊಸ ಬತ್ತ 25 ರೂಪಾಯಿ ಇರುತ್ತದೆ. ಹೀಗೆ ಒಂದೊಂದು ಪಲ್ಲ ಬತ್ತಕ್ಕೆ ಮಿಲ್ಲುಗಳಿಗೆ 15 ರೂಪಾಯಿ ಲಾಭ ಸಿಕ್ಕುತ್ತದೆ. ಇದಕ್ಕೆ ಅವಕಾಶ ಕೊಡಬಾರದು.

ಇನ್ನೊಂದು ವಿಷಯ, ಹಳ್ಳಿಗಳಲ್ಲಿ amenities ಹೆಚ್ಚು ಮಾಡಿಲ್ಲ. ಆದಕಾರಣ ಎಲ್ಲರೂ ಪಟ್ಟಣ ಸೇರುತ್ತಿದ್ದಾರೆ. ಆದಕಾರಣ ಹಳ್ಳಿಗಳಲ್ಲಿ ಅನುಕೂಲಗಳನ್ನು ಹೆಚ್ಚಿಸಿ ಅಲ್ಲೇ ಜನ ವಾಸಮಾಡಲು ಅವಕಾಶ ಮಾಡಬೇಕು. ರಾಗಿ ತಿನ್ನುತ್ತಿದ್ದ ಜನ ಪಟ್ಟಣಕ್ಕೆ ಬಂದು ಅಕ್ಕಿ ಬೇಕೆಂದು ಹೇಳುತ್ತಾರೆ. ಆದುದರಿಂದ ಹಳ್ಳಿಗಳಲ್ಲಿ ಅನುಕೂಲತೆಗಳನ್ನು ಹೆಚ್ಚು ಮಾಡಿದರೆ ಈ ತೊಂದರೆ ಇರುವುದಿಲ್ಲ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಾನು ಚಿರಋಣಿಯಾಗಿದ್ದೇನೆ.

*ಶ್ರೀ ಟಿ. ಕೆ. ಕಂಬಳಿ (ಕುಂದಗೋಳ್).—ಸ್ವಾಮಿ, ಆಹಾರ ಪರಿಸ್ಥಿತಿಯ ಬಗ್ಗೆ ಎರಡು ದಿವಸ ಚರ್ಚೆಯಾಗಿದೆ. ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತು ಮಂದಿ ಭೂಮಿಯಲ್ಲಿ ವ್ಯವಸಾಯ ಮಾಡುವವರಿದ್ದರೂ ಕೂಡ, ಇನ್ನು ಮೂವತ್ತು ಜನರಿಗೆ ಅನ್ನ ಹಾಕಲಾರದೆ ಇರುವ ಪರಿಸ್ಥಿತಿ ಇದೆ. ಯಾರು ಬೇಸಾಯ ಮಾಡುತ್ತಾರೋ ಅವರಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು, ಇದರಿಂದ ರಾಷ್ಟ್ರಕ್ಕೆ ಒಳ್ಳೆಯದಾಗುತ್ತದೆ. ಭೂಮಿಯಲ್ಲಿ ಉತ್ಪನ್ನವಾಗಬೇಕಾದರೆ ನೀರು ಮತ್ತು ಗಾಳಿ ಅವಶ್ಯಕ. ಭೂಮಿ ನೀರು ಕೊಡುತ್ತದೆ, ಗಾಳಿಯಿದ್ದರೆ ಚೆನ್ನಾಗಿ ಬೆಳೆಯುತ್ತದೆ, ಆದರೆ ಇವೆರಡೇ ಇದ್ದರೆ ಸಾಲದೇ ಇರುವ ಪರಿಸ್ಥಿತಿ ಕಂಡುಬರುತ್ತಿದೆ, ಗೋಧಿ ಗಾಳಿಯಿಂದ ಬೆಳೆಯುತ್ತದೆ, ಗಾಳಿ ಇಲ್ಲದಿದ್ದರೆ ಬೆಳೆ ನಷ್ಟವಾಗುತ್ತದೆ. ಬಿಳಿಯ ಜೋಳ ಹಿಂಗಾರು ಆದನಂತರ ಬಹಳ ಮಟ್ಟಿಗೆ ಗಾಳಿಯಿಂದ ಬೆಳೆಯುತ್ತದೆ, ಭೂಮಿ ಸರಿಯಾಗಿದ್ದರೆ ಚೆನ್ನಾಗಿ ಬೆಳೆ ಬರುತ್ತದೆ. ಭೂಮಿ ಸಾಧಾರಣವಾಗಿದ್ದರೆ ಅಷ್ಟು ಚೆನ್ನಾಗಿ ಬರುವುದಿಲ್ಲ. ಆದಕಾರಣ ಭೂಮಿಯನ್ನು ಚೆನ್ನಾಗಿಟ್ಟುಕೊಂಡರೆ ಒಳ್ಳೆಯದು. ಭೂಮಿ ಕಣಗಲು, ಜಾಗು ಇಂಥಾದ್ದಿದ್ದರೆ ಉತ್ಪತ್ತಿ ಕಡಮೆಯಾಗುತ್ತದೆ. ಇವೆಲ್ಲಾ ಕಾರಣದಿಂದ ಭೂಮಿ ಉಳುವ ರೈತನಿಗೆ ಸರಿಯಾದ ಸೌಕರ್ಯ ಕೊಡದಿದ್ದರೆ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಇದನ್ನು ಎದಷ್ಟು ತೀವ್ರವಾಗಿ ಮಾಡಿ. ಹತ್ತು ವರ್ಷವಾದರೂ ಪ್ರಜಾಪ್ರಭುತ್ವದಲ್ಲಿ ಭೂಸುಧಾರಣೆಯಾಗಲಿಲ್ಲ. ಅದಾಗದಿದ್ದರೆ ಆಹಾರ ಧಾನ್ಯಗಳ ಕೊರತೆ ಬರುವುದು ನಿಶ್ಚಿತ. ಆದ್ದರಿಂದ ಮೊದಲು ಭೂಸುಧಾರಣೆ ಜಾರಿಗೆ ತಂದು ಉಳುವವನೇ ಭೂಮಿಯ ಮಾಲೀಕ ಎಂದು ಸಾರಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ರೈತ ಏಕೆ ಹೆಚ್ಚು ಆಹಾರ ಧಾನ್ಯವನ್ನು ಬೆಳೆಯುವುದಿಲ್ಲವೆಂದರೆ ಅವನಿಗೆ ಅದರಿಂದ ಹೆಚ್ಚಿನ ರೊಕ್ಕ ಬರುವುದಿಲ್ಲ, ಅದಕ್ಕೆ ಬೆಲೆ ಕಡಮೆ. ಅವನಿಗೆ ನಿಶ್ಚಿತ ಪರಿಸ್ಥಿತಿಯಿಲ್ಲ. ರೈತರಿಗೆ ಎಷ್ಟು ಬೇಕೋ ಅಷ್ಟು ಉತ್ಪತ್ತಿ ಆಹಾರ ಪದಾರ್ಥಗಳನ್ನು ಬೆಳೆದರೆ ಬರುವುದಿಲ್ಲ. ಜೋಳದ ಬೆಲೆ ಪಲ್ಲಕ್ಕೆ 30 ರೂಪಾಯಿಗಳಾದರೂ ರೈತನಿಗೆ ಅದರಿಂದೇನೂ ಸಹಾಯವಾಗುವುದಿಲ್ಲ, ಅವನ ಕೈಗೆ ಬರುವುದು ಬಹಳ ಕಡಮೆ. ಸಾಗುವಳಿ ಮಾಡಲು ಕಷ್ಟವಿದೆ. ರೈತನಿಗೆ ಸರಿಯಾಗಿ ಕಾಲ ಸಿಕ್ಕುವುದಿಲ್ಲ. ಅವನಿಗೆ ತಿಳಿವಳಿಕೆ ಕಡಮೆ. ಆದ್ದರಿಂದ ತಗಾದೆ ಮಾಡಲು ತಿಳಿಯುವುದಿಲ್ಲ. ಅವನು ಹೇಳುವುದರಲ್ಲಿ ಸತ್ಯವಿದೆ. ರೈತರಿಗೆ ಎಷ್ಟು ಕೊಡಬೇಕೋ ಅಷ್ಟನ್ನು ಒದಗಿಸಿ ಅದು ನೇರವಾಗಿ ಅವರಿಗೆ ಮುಟ್ಟುವ ಹಾಗೆ ಮಾಡಬೇಕು. ಅವರಿಗೆ ತಕಾವಿ ವಗೈರೆ ಸಾಲ ಸರಿಯಾಗಿ ಸಿಕ್ಕಬೇಕು. ಬೆಳೆಯುವುದಕ್ಕೆ ಬೆಲೆ ವಗೈರೆ ನಿರ್ದಿಷ್ಟವಾಗಿ ಗೊತ್ತುಪಡಿಸಿದರೆ ಅನುಕೂಲ. ಬೆಳಗಾಂ, ಬಿಜಾಪುರ ಮತ್ತು ಹೈದರಾಬಾದು ಕರ್ಣಾಟಕ ಜಿಲ್ಲೆಗಳಲ್ಲಿ ಜೋಳ ಮತ್ತು ಗೋಧಿ ಪೀಕು ಜಾಸ್ತಿ. ಅದಕ್ಕೆ ರೋಗ ಬರುತ್ತದೆ. ಅದು ಬಂದರೆ ಪೀಕು ಹಾಳಾಗುತ್ತದೆ. ಕ್ರಾಪ್ ಪ್ರೊಟೆಕ್ಷನ್ ಬಗ್ಗೆ ಸರ್ಕಾರದ ಯೋಜನೆಯಿದೆ. ಸರ್ಕಾರದವರು ರೋಗ ಬಾರದಂತೆ ಮಾಡಬೇಕು. ಪೀಕಿನ ದೆಸೆಯಿಂದ ವಿಮೆಗೆ ಅವಕಾಶ ಮಾಡಬೇಕು, ಬೆಳೆಯುವುದಕ್ಕೆ ವಿಮೆ ಮಾಡುವ ವ್ಯವಸ್ಥೆ ಬೇಗ ಜಾರಿಗೆ ತರಬೇಕು ಎಂಬುದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯ. ಈಗ ಕರಿಕೆ ಹೆಚ್ಚುತ್ತಿದೆ. ಅದನ್ನು ತಡೆಗಟ್ಟಲು ಸರ್ಕಾರದವರು ತಾವೇ ಕರಿಕೆ ತೆಗೆಸಿ ಭೂಮಿ ಹಸನು ಮಾಡಿ ಕೊಡಬೇಕು. ಹಾಗೆ ಮಾಡಿದರೆ ದುಪ್ಪಟ್ಟು ಬೆಳೆ ಬರುತ್ತದೆ. ಸರ್ಕಾರದವರು ಎಲ್ಲಾ ಭೂಮಿಗಳಲ್ಲೂ ಟ್ರ್ಯಾಕ್ಟರಿನಿಂದ ಕರಿಕೆ ತೆಗೆಸಿ ಅನಂತರ ಹಂಚಿದರೆ ಅನುಕೂಲವಾಗುತ್ತದೆ.

ರೈತರಿಗೆ ಟ್ರ್ಯಾಕ್ಟರ್ ಸೌಲಭ್ಯ ಸುಲಭವಾಗಿ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಈಗ ದರ್ಜಿ ಕೆಲಸ ಮಾಡುವವರಿಗೆ ಕಂತಿನ ಪ್ರಕಾರ ಹಣ ತೆಗೆದುಕೊಂಡು ಹೊಲಿಗೆ ಯಂತ್ರವನ್ನು ಕೊಡುವ ಹಾಗೆ ಟ್ರ್ಯಾಕ್ಟರನ್ನೂ ಒದಗಿಸುವುದನ್ನು ವಿಚಾರ ಮಾಡಬೇಕು. ರೈತರು 80 ಸಾವಿರ ರೂಪಾಯಿ ಕೊಟ್ಟು ತೆಗೆದುಕೊಳ್ಳುವುದು ಕಷ್ಟ.

ರೈತರಿಗೆ ಕುಂಟೆ, ಕೂರಿಗೆ, ಚಕ್ಕಡಿ, ಕಬ್ಬಿಣದ ಸಾಮಾನು ಅವಶ್ಯಕ. ಕಟ್ಟಿಗೆ ಸಾಮಾನು ಸಿಕ್ಕುವುದಿಲ್ಲ, ಗುಡ್ಡಗಾಡುಗಳಲ್ಲಿ ಬೇಕಾದಷ್ಟು ಸಿಕ್ಕುತ್ತದೆ. ಅದರ ಬೆಲೆ ಇಲ್ಲಿ ನಾಲ್ಕು ರೂಪಾಯಿ ಇದ್ದರೆ, ಗುಡ್ಡಗಾಡಿನಲ್ಲಿ ಎರಡು ರೂಪಾಯಿ ಇರುತ್ತದೆ. ಆದ್ದರಿಂದ ತಾಲ್ಲೂಕುಗಳಲ್ಲಿ ಒಂದೊಂದು ಸಂಸ್ಥೆಯ ಮೂಲಕ ರೈತರಿಗೆ ಬೇಕಾದ ಸಾಮಾನುಗಳನ್ನು ದಾಸ್ತಾನು ಮಾಡಿ ಮುಟ್ಟಿಸಬೇಕು. ನೊಗ, ನೇಗಿಲು ಮುಂತಾದುವನ್ನೂ ಸರಿಯಾಗಿ ಒದಗಿಸಬೇಕು. ಈಗ ಕಬ್ಬಿಣದ ಸಾಮಾನು ಕೊಡುತ್ತಾರೆ. ಆದರೆ ಯಾವುದು ಬೇಕೋ ಅದು ಸಕಾಲದಲ್ಲಿ ಸಿಕ್ಕುವುದಿಲ್ಲ. ಹೋದ ಸಲ ಹೇಳಿದರೂ ವ್ಯವಸ್ಥೆ ಮಾಡಿಲ್ಲ. ಈಗಲಾದರೂ ತಾಲ್ಲೂಕುವಾರು ಸಣ್ಣ ಸಂಸ್ಥೆ ಮಾಡಿ ರೈತರಿಗೆ ಬೇಕಾದ್ದನ್ನು ಮೊದಲು ಮುಟ್ಟಿಸಬೇಕು.

ಹೆಚ್ಚು ಆಹಾರ ಬೆಳೆಯಿರಿ ಎಂದು ಪ್ರಚಾರ ಮಾಡುತ್ತಿದ್ದೀರಿ ಅದಕ್ಕೆ ತಕ್ಕಂತೆ ಉತ್ತೇಜನ ಅವಶ್ಯಕ. ಉದ್ದು, ಹಲಸಂದೆ ಮುಂಗಾರಿನಲ್ಲಿ ನಮ್ಮ ಕಡೆಯ ಮುಖ್ಯವಾದ ಪೀಕು. ಅದಕ್ಕೆ ಬೇಕಾದ ಸಹಾಯ ನೀಡಿ ವಿಮೆಗೆ ಅವಕಾಶ ಮಾಡಿದರೆ ರೈತರಿಗೆ ಹೆಚ್ಚಿನ ಅನುಕೂಲ ಮುಟ್ಟಿದಂತಾಗುತ್ತದೆ. ರೈತರಿಗೆ ಬೇಕಾದ ಕಾಂಪ್ರೋಸ್ಟ್ ಗೊಬ್ಬರ ಸಾಕಷ್ಟು ಒದಗುವುದಕ್ಕೆ ವ್ಯವಸ್ಥೆ ಮಾಡಬೇಕು. ಜಂಗಲ್ ಕ್ಲಿಯರ್ ಮಾಡಬೇಕು. ಭೂಮಿ ಮಟ್ಟ ಮಾಡಬೇಕು. ಇದೆಲ್ಲಾ ಮಾಡಿದರೆ ಲಗೂನ ತೊಂದರೆ ತಪ್ಪಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಭೂಸುಧಾರಣೆ ಕಾಯಿದೆ ಬೇಗ ಬಂದರೆ ಒಳ್ಳೆಯದು. ಅದು ಬಂದಾಗ ಆ ವಿಚಾರದ ಮೇಲೆ ಮಾತನಾಡುತ್ತೇನೆ.

3 P.M.

ಅನೇಕ ದಿವಸಗಳಿಂದ ಆಗಬೇಕಾಗಿದ್ದ ಭೂಸುಧಾರಣೆಯು ಈಗ ಬಂದಿದೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಬೆಳೆಯುವ ಆಹಾರಧಾನ್ಯಗಳು 18 ತಿಂಗಳುಗಳಿಗೆ ಸಾಕಾಗುವಷ್ಟು ಇದೆ. ಈ ರೀತಿಯಾಗಿ ಎಲ್ಲಾ ಕಡೆಗೂ ವ್ಯವಸಾಯ ಮಾಡಿದರೆ ಸಮೃದ್ಧಿಯಾಗುತ್ತದೆ. ಆದುದರಿಂದ ಈ ವ್ಯವಸಾಯದ ವಿಚಾರದಲ್ಲಿ ನಮ್ಮಲ್ಲಿರತಕ್ಕಂಥಾ ತಪ್ಪುಗಳನ್ನೂ ದೋಷಗಳನ್ನೂ ಸರಿಪಡಿಸಬೇಕಾದದ್ದು ಅಗತ್ಯವಾಗಿದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

[SRI S. D. KOTHAVALE in the Chair]

MR. CHAIRMAN (SRI S. D. KOTHAVALE).—In order to accommodate as many members as possible I think we are going without recess. Such of the members who want may have their own time for recess. We are continuing the debate from now onwards. I call upon Sri K. V. Byre Gowda to speak.

(Sriyuts D. T. Seetharama Rao and Thalwalkar rose when Sri K. V. Byre Gowda was about to begin his speech).

MR. CHAIRMAN.—Hon'ble Members will see that we are governed by a certain set of rules. When one member speaks others are expected to take their seats and hear the debate very carefully.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ಎಲ್ಲರಿಗೂ ಬೇಕಾಗಿರತಕ್ಕ ಆಹಾರ ವಿಷಯದ ಬಗ್ಗೆ ನಾವು ಇವತ್ತಿನ ದಿವಸ ಚರ್ಚೆ ಮಾಡುತ್ತಿದ್ದೇವೆ. ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ದೇವರ ಅನುಗ್ರಹ ಮತ್ತು ಬಾಕಿ ಸಹಾಯ ಬೇಕಾಗುತ್ತದೆ. ನಮ್ಮ ದೇಶದಲ್ಲಿ ಅತಿವೃಷ್ಟಿ ಅನಾವೃಷ್ಟಿಯಿಂದ ತೊಂದರೆಯಾಗುತ್ತದೆ. ನೀರಾವರಿ ಯೋಜನೆಗಳಿಂದ ಅನುಕೂಲ ಮಾಡಿಕೊಂಡು ವ್ಯವಸಾಯ ಮುಂದುವರಿಸಿಕೊಂಡು ಬರಬೇಕಾಗಿದೆ. ಹತ್ತಾರು ವರ್ಷಗಳ ಹಿಂದೆ ವ್ಯವಸಾಯಕ್ಕೆ ಸಾಕಷ್ಟು ಮಾನ್ಯತೆ ದೊರೆಯದೆ ನಿಕೃಷ್ಟ ಭಾವನೆ ಬಂದು ಕೈಬಿಟ್ಟು ಹೋಗಿತ್ತು. ಆದರೆ ವ್ಯವಸಾಯದಲ್ಲಿ ಕೆಲಸ ಮಾಡತಕ್ಕಂಥ ಜನರಿಗೆ ಮಾನ್ಯತೆ ಇರಬೇಕು. ಅಂದರೆ ಹೆಚ್ಚು ಆಹಾರಧಾನ್ಯ ಬೆಳೆಯುವುದಕ್ಕೆ ಸಹಾಯವಾಗುತ್ತದೆ. ಮತ್ತು ಆಹಾರದ ಕೊರತೆ ಹೋಗುತ್ತದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಇಂಥ ಒಳ್ಳೆಯ ಭಾವನೆ ಬಂದಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜ್ಯಸರ್ಕಾರ ವ್ಯವಸಾಯಗಾರರಿಗೆ ಉತ್ತೇಜನ ಕೊಟ್ಟಿದ್ದಾರೆ. ರೈತರಿಗೆ ಅನೇಕ ಮೂಲಭೂತ ಕಷ್ಟಗಳು ಇವೆ. ಇತ್ತೀಚೆಗೆ ಉತ್ಪತ್ತಿಯ ಖರ್ಚು ಜಾಸ್ತಿಯಾಗಿದೆ. ಉತ್ಪತ್ತಿಯ ಖರ್ಚು ಎಂದರೆ cost of production ಜಾಸ್ತಿಯಾಗದ ಹಾಗೆ ಅದನ್ನು ನಿಗದಿ ಮಾಡತಕ್ಕ ಒಂದು ವ್ಯವಸ್ಥೆಯು ಇರಬೇಕಾದುದು ಅಗತ್ಯ. ಸರ್ಕಾರದವರು ಆ ರೀತಿಯಾಗಿ ಧೈರ್ಯದಿಂದ ನಿಗದಿಮಾಡದೆ ಹಿಂದೆ ಇದ್ದುದು ಬಹಳ ವಿಷಾದಕರ. ವ್ಯವಸಾಯಕ್ಕೆ ರಕ್ಷಣೆ ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ. ನಮ್ಮ ದೇಶದಲ್ಲಿ ಶೇಕಡ 75ರಷ್ಟು ಜನರು ವ್ಯವಸಾಯವನ್ನು ಅವಲಂಬಿಸಿಕೊಂಡು ಇದ್ದಾರೆ. ಆಹಾರ ಅಭಾವದ ಕೂಗು ಈಗ ಎಲ್ಲ ಕಡೆಗೂ ಇದೆ. ರೈತರಿಗೆ ಇರತಕ್ಕ ತೊಂದರೆಗಳನ್ನು ನಿವಾರಣೆ ಮಾಡಬೇಕಾದದ್ದು ಮೂಲಭೂತವಾದ ಪ್ರಶ್ನೆಯಾಗಿದೆ. ಹತ್ತು ವರ್ಷಗಳಿಂದ Grow More Food campaign ಸಲುವಾಗಿ ಎಷ್ಟು ಹಣ ಖರ್ಚು ಮಾಡಬಹುದೋ ಅಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಆದರೂ ಸಹ ದೇಶದಲ್ಲಿ ಕೊರತೆಯಿದೆ, ಆಹಾರ ಅಭಾವವು ಇದೆ. ವ್ಯವಸಾಯಗಾರರಿಗೆ ತಾನು ಬೆಳೆದ ಧಾನ್ಯವನ್ನು ಮಾರಾಟ ಮಾಡುವುದಕ್ಕೆ ಒಂದು ಸರಿಯಾದ ವ್ಯವಸ್ಥೆಯಿಲ್ಲ. ಮಾರಾಟ ಮಾಡುವುದು ಒಂದು powerful section ಕೈಯಲ್ಲಿ ಇರುವುದರಿಂದ ಅವರು artificial scarcityಯನ್ನು ಉಂಟುಮಾಡಿ ಬರತಕ್ಕ ಲಾಭವನ್ನು ತಾವೇ ತೆಗೆದುಕೊಳ್ಳುತ್ತಾರೆ. ರೈತನಿಗೆ ಯಾವ ಲಾಭವೂ ಇಲ್ಲ. ಒಂದು ಸರಿಯಾದ ಬೆಲೆಯೂ ದೊರೆಯುವುದಿಲ್ಲ. ಇಂಥ ಪರಿಸ್ಥಿತಿಯನ್ನು ನಿವಾರಣೆ ಮಾಡುವುದು ಅವಶ್ಯವಾಗಿದೆ. ಆಹಾರಧಾನ್ಯಗಳ ಮಾರಾಟವನ್ನು ಸಹಕಾರ ಸಂಘಗಳ ಮುಖಾಂತರ ಮಾಡುವುದರಿಂದ ಇದನ್ನು ನಿವಾರಿಸಬಹುದು. Co-operative Institutions ಭದ್ರಪಡಿಸಿ ಅವುಗಳ ಮುಖಾಂತರ ಆಹಾರಧಾನ್ಯಗಳನ್ನು ಕೊಂಡು ಮಾರುವುದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಮನಸ್ಸು ಮಾಡಿದರೆ ಬಹಳ ಸಹಾಯವಾಗುತ್ತದೆ. ಇನ್ನು ವ್ಯವಸಾಯಕ್ಕೆ ಬೇಕಾದ ಸಾಮಾನುಗಳನ್ನು ರೈತರಿಗೆ ಸಕಾಲದಲ್ಲಿ ಯೋಗ್ಯ ಬೆಲೆಗೆ ಒದಗಿಸಿಕೊಡಬೇಕು. ಸಾಮಾನುಗಳನ್ನು ಒದಗಿಸಿ ಕೊಡುವುದಕ್ಕೆ ಪ್ರಥಮ ಪ್ರಾಧಾನ್ಯತೆಯನ್ನು ಕೊಡಬೇಕು. ಸಕಾಲದಲ್ಲಿ ಸಿಕ್ಕುವಹಾಗೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಈ ಸಾಮಾನುಗಳನ್ನು ಕೊಳ್ಳುವುದಕ್ಕೆ ಮಾರ್ಕೆಟ್ಟಿಗೆ ಹೋದರೆ ಒಂದಕ್ಕೆ ನಾಲ್ಕರಷ್ಟು ಬೆಲೆ ಕೊಡಬೇಕಾಗುತ್ತದೆ. ಆದುದರಿಂದ ಈ ವ್ಯವಸ್ಥೆಯ ಬಗ್ಗೆ ಕೋ-ಆಪರೇಟಿವ್ ಸೊಸೈಟಿಗಳು ಜವಾಬ್ದಾರಿ ತೆಗೆದುಕೊಂಡರೆ ಸರಿಯಾಗುತ್ತದೆ. ಈ ಕೆಲಸವನ್ನು ಸಹಕಾರಿ ಸಂಘಗಳಿಗೆ ಒಪ್ಪಿಸಬೇಕು. ಅದು ಸರ್ಕಾರದಿಂದ ಸಾಧ್ಯವಿಲ್ಲ. ಈ ಸಹಕಾರಿ ಸಂಘಗಳಲ್ಲಿ ಪ್ರಾಮಾಣಿಕ ಜನರು ಮುಂದೆ ಬಂದು ತ್ಯಾಗ ಬುದ್ಧಿಯಿಂದ ಕೆಲಸ ಮಾಡಬೇಕು. ಅಂದರೆ ಸಹಕಾರಿ ಸಂಘಗಳ ಕೆಲಸ ಸರಿಯಾಗಿ ನಡೆಯುತ್ತದೆ ಎಂಬುದು ಅನುಭವದಿಂದ ತಿಳಿದಿರತಕ್ಕ ವಿಷಯ. ಈ ರೀತಿಯಾಗಿ ಸಹಕಾರಿ ಸಂಘಗಳನ್ನು ಸುಧಾರಿಸಬೇಕು.

ಹಿರಿಯರೂ, ಅನುಭವಿಗಳೂ ರೈತರ ಉದ್ಧಾರವಾಗದೇ ದೇಶ ಮುಂದಕ್ಕೆ ಬರುವುದಿಲ್ಲ, ಬರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಇದು ಎಲ್ಲರಿಗೂ ಮನವರಿಕೆಯಾಗಿದೆ. ಇವೊತ್ತಿನ ದಿವಸ ದೇಶದ ಹಣ ಖರ್ಚಾಗುತ್ತಾ ಇದೆ. ಒಂದು ಉದಾಹರಣೆ ಹೇಳುವುದಾದರೆ, ಕುಡಿಯುವ ನೀರಿಗಾಗಿ ಸಿಟಿಗಳು, ಮುನಿಸಿಪಾಲಿಟಿಗಳು ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ವಿಶೇಷವಾಗಿ ಹಣ ಮೀಸಲಾಗಿಟ್ಟಿದ್ದೀರಿ. ಅದೇ ವ್ಯವಸಾಯಗಾರರಿಗಾಗಿ ಎಷ್ಟು ಹಣ ಖರ್ಚು ಮಾಡುತ್ತಾ ಇದ್ದೀರಿ ಎಂದರೆ ಅರ್ಥಾರ್ಥ ಸಂಬಂಧವಿಲ್ಲದ ರೀತಿಯಲ್ಲಿ ಆಗುತ್ತಾ ಇದೆ. ಇಲ್ಲದ ಒಂದು ಸೋಗು ಹಾಕಿಕೊಂಡು ಎಲ್ಲಕಡೆಗೂ ನೀರಿನ ಅನುಕೂಲದ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಈ ಮೂಲಭೂತವಾದ ವ್ಯವಸಾಯಕ್ಕೆ ಪ್ರಮಾಣಿಕತೆಯಿಂದ ಕೊಟ್ಟ ಹಣವನ್ನ ಎಷ್ಟು ಖರ್ಚುಮಾಡಬೇಕಾಗಿತ್ತೋ ಅಷ್ಟು ಮಾಡದೇ ಈಗಿನ ಆಹಾರಕ್ಕೆ ಧಕ್ಕೆ ಬಂದಿದೆ

(ಶ್ರೀ ಕೆ. ಪಿ. ಬೈರೇಗೌಡ)

ಎಂದು ಹೇಳಿದರೂ ತಪ್ಪಾಗಲಾರದು. ಮದರಾಸಿನಲ್ಲಿ ಅದರಲ್ಲೂ ಕೊಯಮತ್ತೂರಿನಲ್ಲಿ ಹೇರಳವಾಗಿ ಲಿಫ್ಟ್ ಇರಿಗೇಷನ್ ವ್ಯವಸ್ಥೆ ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಮಳೆ ಹೆಚ್ಚಾಗಿ ಬೀಳದ ಜಾಗ ಬಯಲು ಸೀಮೆ ಯಾವುದಿದೆ ಅದನ್ನು ಸುಧಾರಣೆ ಮಾಡಲಿಕ್ಕೆ ಲಿಫ್ಟ್ ಇರಿಗೇಷನ್ ವ್ಯವಸ್ಥೆ ಬಹುಮಟ್ಟಿಗೆ ಸಹಕಾರಿಯಾಗುತ್ತದೆ, ಆದ್ದರಿಂದ ಅದನ್ನು ಮಾಡಲು ಮನಸ್ಸು ಮಾಡಬೇಕು. ತ್ವರಿತವಾಗಿ ಕೆಲಸ ಮಾಡಬೇಕಾಗಿದೆ.

ಸ್ವಾಮಿ, ಇನ್ನೊಂದು ವಿಷಯ, ಇಲ್ಲಿ ನಮ್ಮ ಇತರ ಸ್ನೇಹಿತರು ಬೆಳೆಯ ಬೆಲೆ ಅಷ್ಟಾಗಿದೆ, ಇಷ್ಟಾಗಿದೆ ಎಂದು ಕೂಗು ಹಾಕಿದರು, ಅಷ್ಟೋ ಇಷ್ಟೋ ಗಮನ ಕೊಡುತ್ತೀರಿ. ತಮಗೆಲ್ಲಾ ಗೊತ್ತಿರಬಹುದು ಈಗ್ಗೆ ಒಂದೆರಡು ವರ್ಷಗಳ ಹಿಂದೆ ಬೆಲ್ಲದ ಧಾರಣೆ ಬಹಳವಾಗಿ ಬಿದ್ದುಹೋಯಿತು. ಆಗ ರೈತರಿಗೆ ರಕ್ಷಣೆ ಕೊಡಲು ಯಾರು ಮುಂದೆ ಬಂದರು ! ಆದರೂ ಸಹ ಕಷ್ಟವೋ ನಷ್ಟವೋ ಅದನ್ನು ಅವರು ಮಾಡಬೇಕಾಯಿತು. ಅಂತ ಸಂದರ್ಭದಲ್ಲಿ ಬಾಕಿವಸ್ತುಗಳಿಗೆ ರಕ್ಷಣೆ ಕೊಟ್ಟಂತೆ ಇದನ್ನು ಮಾಡುವವರಿಗೂ ರಕ್ಷಣೆ ಕೊಡಬೇಕು. ಇವೊತ್ತಿನ ದಿವಸ ಆಹಾರದ ಅಭಾವವುಂಟಾಯಿತು, ಆಹಾರ ಪದಾರ್ಥದ ಉತ್ಪಾದನೆ ಇಲ್ಲ ಎಂದು ಹೇಳಬೇಕಾಗಿದ್ದರೆ ಅದಕ್ಕೆ ಮೂಲಭೂತವಾದ ಒಂದು ಕಾರಣ ಏನೋ ಇರಬೇಕು. ಇವೊತ್ತು ಸಾಮಾನ್ಯ ಪ್ರಜೆ ವಾಸಮಾಡುತ್ತಾ ಇರತಕ್ಕ ಮಟ್ಟ ಯಾವುದು, ಆ ಮಟ್ಟಕ್ಕೆ ತಕ್ಕಂತೆ ಆಹಾರ ಪದಾರ್ಥಗಳು ದೊರೆಯುತ್ತಾ ಇವೆಯೋ ಇಲ್ಲವೋ ಎಂಬುದನ್ನು ಆಲೋಚನೆ ಮಾಡಬೇಕು. ಗ್ರಾಮಾಂತರಗಳಲ್ಲಿ ರಿಸರ್ಚ್ ವರ್ಕ್ ನಡೆಯಬೇಕು. ಅದರ ಪ್ರತಿಫಲ ವ್ಯವಸಾಯಗಾರರಿಗೆ ಉಂಟಾಗಬೇಕಾದರೆ ಈ ಇಲಾಖೆಯ ಅಧಿಕಾರವರ್ಗ ಏನಿದೆ ಅದು ಜಾಸ್ತಿಯಾಗಬೇಕು, ಈಗಿರುವುದು ಸಾಲದು. ಸೂಪರ್‌ವೈಸರಿ ವರ್ಕ್ ಮತ್ತು ಇಂಪ್ಲಿಮೆಂಟೇಷನ್‌ಗೆ ಸಾಕಾದಷ್ಟು ವ್ಯವಸ್ಥೆ ಇಲ್ಲ. ಅಲ್ಲದೆ ರಿಸರ್ಚ್ ಮಾಡತಕ್ಕ ಅಧಿಕಾರಿಗಳಿಗೆ ಪರಿಪೂರ್ಣವಾದಂಥ ಒಂದು ಗ್ರೇಡು ಇಲ್ಲದೆ ರಿಸರ್ಚ್ ವರ್ಕ್ ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಇದಕ್ಕೆ ಎಷ್ಟು ಹಣ ಬೇಕೋ ಅಷ್ಟನ್ನು ಒದಗಿಸಲು ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡಿ ಈ ಇಲಾಖೆಗೆ ಮಾನ್ಯತೆ ಕೊಡಬೇಕು. ಅಷ್ಟು ಮಾಡಿದರೆ ನಿಜವಾಗಿಯೂ ಆಹಾರದ ಉತ್ಪನ್ನ ಜಾಸ್ತಿಯಾಗುತ್ತದೆ, ಆಹಾರದ ಅಭಾವವನ್ನು ನಿವಾರಿಸಬಹುದು ಎಂದು ಪೂರ್ಣ ನಂಬಿಕೆ ನನಗಿದೆ.

ಶ್ರೀ ಬಿ. ಜಿ. ಜೋತ್ (ಸದಲ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ವ್ಯವಸಾಯ ಮಂತ್ರಿಗಳು ನಮ್ಮ ಈ ಸಭೆಗೆ ಆಹಾರಕ್ಕೆ ಸಂಬಂಧಪಟ್ಟ ವಿಷಯವನ್ನು ಅವಲೋಕನ ಮಾಡುವುದಕ್ಕೆ ಎರಡು, ಮೂರು ಸ್ಟೇಟ್‌ಮೆಂಟುಗಳನ್ನು ಒದಗಿಸಿಕೊಟ್ಟಿದ್ದಾರೆ. ಮೊದಲನೆಯ ಒಂದು ಸ್ಟೇಟ್‌ಮೆಂಟ್ ಅಂದರೆ ಸ್ಟೇಟಿನಲ್ಲಿ food situation ಯಾವ ರೀತಿ ಅದೆ ಅನ್ನುವುದು. ಎರಡನೆಯದು food situation improve ಆಗುವ ದೆಶೆಯಿಂದ ಏನು ಮಾಡಿದೆ ಅನ್ನುವುದು ಇನ್ನೊಂದು. ಮೂರನೆಯದು ರ್‍ಯಾಬಿ ಕ್ಯಾಂಪೇನ್ ಎಂದರೆ ಹಿಂಗಾರಿ ಬೆಳೆ ಏನಿದೆ ಅದರ ಬಗ್ಗೆ ಒಂದು ; ಹೀಗೆ ಸ್ಟೇಟ್‌ಮೆಂಟು ಕೊಟ್ಟಿದ್ದಾರೆ. ಈ ಸ್ಟೇಟ್‌ಮೆಂಟ್‌ಗಳನ್ನು ಅವಲೋಕನ ಮಾಡಿ ನೋಡಲಾಗಿ ಹೀಗೆ ನಿಶ್ಚಿತವಾಗಿ ತಿಳಿಯಬರುತ್ತದೆ—that we are in deficit, and particularly in rice 19 ಜಿಲ್ಲೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಇವೆ. ಈ 19 ಜಿಲ್ಲೆಯೊಳಗೆ ಯಾವ ಜಿಲ್ಲೆಯದು ಯಾವ ಭಾಗದಲ್ಲಿ ಡಿಫಿಸಿಟ್ ಇದೆ ಮತ್ತು ಆ ಭಾಗದಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಖರ್ಚು ಮಾಡಲ್ಪಟ್ಟಿತು ಎಂಬ ವಿವರ ಇಲ್ಲ; ಮತ್ತು ಪ್ರಾಂತ್ಯದ ಯಾವ ಭಾಗ (area) ದಲ್ಲಿ ಯಾವ food grain ಎಷ್ಟು ಡಿಫಿಸಿಟ್ ಇದೆ, ಏನು ಕಾರ್ಯಕ್ರಮ ಕೈಕೊಂಡಿದ್ದಾರೆ ಎನ್ನುವುದನ್ನು ಸಹ ತಿಳಿಯಲಿಕ್ಕೆ ಸಾಧ್ಯವಿಲ್ಲ. ಆದರೂ ಒಂದು ಮಾತು ನಿಶ್ಚಯ. ಅದು ಯಾವುದೆಂದರೆ ನಮ್ಮ ಸ್ಟೇಟ್‌ನಲ್ಲಿ food deficit ಇದೆ ಎಂಬ ಮಾತು ನಿಶ್ಚಯ. ಈ ಆಹಾರ ಸಮಸ್ಯೆ ಒಂದು national question, ಎಲ್ಲಾ ದೇಶಕ್ಕೂ ಸಂಬಂಧಪಟ್ಟದ್ದು. ಈ ಅನ್ನದ ಪ್ರಶ್ನೆ ಹೇಗೆ ಬಿಡಿಸಬೇಕು ಎಂಬುದು ಮೂಲ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಬಿಡಿಸಲು ನನಗೆ ತಿಳಿದಂತೆ ಎರಡು ಮಾರ್ಗಗಳಿವೆ. ಆ ಎರಡರ ಪೈಕಿ ಮೊದಲನೆಯ ಮಾರ್ಗ ವ್ಯವಸಾಯಗಾರ ಮುಖ್ಯತಃ money cropಗಿಂತ food crop ಹೆಚ್ಚು ಮಾಡಬೇಕು ; ಮತ್ತು ಅದನ್ನು ಇಂತಿಷ್ಟು ಸರಾಸರಿ ಪ್ರಮಾಣದಲ್ಲಿ ಬೆಳೆಸಲೇಬೇಕೆಂದು ನಿರ್ಬಂಧಬೇಕು ; ಮತ್ತು ವ್ಯವಸಾಯಗಾರ ಯಾವ ಫುಡ್ ಕ್ರಾಪ್ ಹಾಕುತ್ತಾನೆಯೋ ಆ ಫುಡ್ ಕ್ರಾಪ್‌ಗೆ ಆಗತಕ್ಕ ಖರ್ಚೆಷ್ಟು ಎಂಬುದು ನಿರ್ಣಯ ಆಗಬೇಕು. ನಿರ್ಣಯ ಆಗಿ ದುಡ್ಡು ಎಷ್ಟನ್ನು ಅವಶ್ಯಕವಾಗಿ ಒದಗಿಸಬೇಕೋ ಅಷ್ಟನ್ನೂ ಒದಗಿಸುವ ಜವಾಬ್ದಾರಿ ಸರ್ಕಾರ ವಹಿಸಿಕೊಂಡು ಆ ಹಣ ಅವರಿಗೆ ಮುಟ್ಟುತ್ತದೆಯೋ ಇಲ್ಲವೋ ಮತ್ತು ಆ ಹಣ ಅದಕ್ಕಾಗಿಯೇ ಖರ್ಚು ಆಗುತ್ತದೆಯೋ, ಇಲ್ಲವೋ ಎಂಬುದನ್ನು ಪ್ರತ್ಯಕ್ಷವಾಗಿ ಪರೀಕ್ಷೆಮಾಡಿ ಅವರಿಗೆ ಮುಟ್ಟಿಸುವ ಹಾಗೆ ವ್ಯವಸ್ಥೆ ಮಾಡಬೇಕು. ಇದು ಮೊದಲನೆಯ ಕೆಲಸ; ಮತ್ತು ಇದರ ಜೊತೆಗೇನೇ ಅವನು ಯಾವ ಫುಡ್ ಕ್ರಾಪ್ ಬೆಳೆಯುತ್ತಾನೆಯೋ ಆ ಫುಡ್ ಕ್ರಾಪ್‌ನಿಂದ ಅವನಿಗೆ ಸಾಕಷ್ಟು ಹಣ ಬರಬೇಕು. ಅದು ಬರುತ್ತದೆಯೋ ಇಲ್ಲವೋ, ಇಲ್ಲದೆ ಹೋದಪಕ್ಷದಲ್ಲಿ ಅದರ ಭರ್ತಿ ಮಾಡುವುದನ್ನು ಕುರಿತು ಬೆಲೆ ಜಾಸ್ತಿ ಮಾಡಬೇಕು ಎನ್ನುವ ಪ್ರಶ್ನೆ ಬಂದೇ ಬರುತ್ತದೆ. ಇದರ ಬೆಲೆ ಜಾಸ್ತಿ ಆಗುವುದಕ್ಕೆ ಅವಕಾಶಕೊಟ್ಟ ಭಾಗದಲ್ಲಿ ಇತರ ಸಾಮಾನ್ಯ ವ್ಯವಹಾರಕ್ಕೆ ಉಪಯೋಗಮಾಡುವ ಪದಾರ್ಥಗಳ ಬೆಲೆಯೂ ತನ್ನಷ್ಟಕ್ಕೆ ತಾನೇ ಹೆಚ್ಚಾಗುತ್ತಾ ಹೋಗುತ್ತದೆ. ಹೀಗೆ ಆದ ಪಕ್ಷದಲ್ಲಿ ಹಣದುಬ್ಬರ ಎಂದರೆ ಚಲನದ ಪ್ರಶ್ನೆ ಮುಂದೆ ಬರುತ್ತದೆ. ಆದ್ದರಿಂದ ವ್ಯವಸಾಯಗಾರನಿಗೆ ಅವನ ಉತ್ಪಾದನಾಶಕ್ತಿಗನುಸರಿಸಿ ಎಷ್ಟು ಹಣ ಕೊಡಬೇಕೋ ಅಷ್ಟನ್ನು ಪರೀಕ್ಷೆಮಾಡಿಕೊಡಬೇಕು ಮತ್ತು ಆಹಾರ ಪದಾರ್ಥಗಳ ಬೆಲೆಗಿಂತ ಇತರ ಪದಾರ್ಥಗಳ ಬೆಲೆಯನ್ನು down ಮಾಡುವುದಕ್ಕೆ ಎಂದರೆ ಆಹಾರ ಪದಾರ್ಥಗಳ ಬೆಲೆಗಳ ಮೇಲೆ ಪರಿಣಾಮ ಆಗದ ಹಾಗೆ ಪ್ರಯತ್ನ ಮಾಡಬೇಕು. ಎಂದರೆ ಈ ಆಹಾರ ಸಮಸ್ಯೆ ಪರಿಹಾರವಾಗುವುದಕ್ಕೆ ಅವಕಾಶವಿದೆ.

ಎರಡನೆಯ ವಿಚಾರವೆಂದರೆ ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ Socialistic Pattern of Society ಬಗ್ಗೆ ಠರಾವು ಅಂಗೀಕಾರವಾಯಿತು. ಇದನ್ನು ಅಂಗೀಕಾರ ಮಾಡಿದ ನಂತರ ಇದರ ತತ್ವವನ್ನು ಜಾರಿಯಲ್ಲಿ ತರುವ ದೆಸೆಯಿಂದ ಮತ್ತು ಆಹಾರ ಸಮಸ್ಯೆ ಬಿಡಿಸುವ ದೆಸೆಯಿಂದ ಈಗ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ಟೆನೆನ್ಸಿ ಕಾಯಿದೆಯನ್ನು ಮಾಡಿತು ; ಹಾಗೂ Rent Act ವಗೈರೆ ಇಂಥ ಇನ್ನೂ ಎಷ್ಟೋ ಕಾಯಿದೆಗಳನ್ನು ಮಾಡಿತು. ಈ ಕಾಯಿದೆಗಳನ್ನೆಲ್ಲ ಮಾಡಬೇಕಾಗಿತ್ತೆಂದು ತಿಳಿದು ಟೆನೆನ್ಸಿ ಕಾಯಿದೆಯನ್ನು 1938ರಲ್ಲಿ ಮೊದಲು ಬೊಂಬಾಯಿ ರಾಜ್ಯದಲ್ಲಿ

ಮಾಡಿ 1941ರಲ್ಲಿ ಅದನ್ನು ಜಾರೀ ಮಾಡಿದರು. ಹೀಗೆ ಮಾಡಿದನಂತರ ದೇಶದ ಪರಿಸ್ಥಿತಿ, ಮುಖ್ಯವಾಗಿ ಬೊಂಬಾಯಿ, ಮೈಸೂರು ಇವುಗಳ ಪರಿಸ್ಥಿತಿ ಬದಲಾಯಿಸಿತು. ಏಕೆಂದರೆ ಆಸ್ತಿಪಾಸ್ತಿಗಳು ಅನಿಶ್ಚಿತವೆಂದು ಯಾರಿಗೂ ಅದರಲ್ಲಿ ಆಸಕ್ತಿ ಉಳಿಯಲಿಲ್ಲ. ಹೊಲ-ಮನೆಯನ್ನು ಕಾಯಬೇಕೆನ್ನುವ ಪರಿಸ್ಥಿತಿ ಉಳಿಯಲಿಲ್ಲ. ದನಕಾಯಬೇಕೆನ್ನುವ ಪರಿಸ್ಥಿತಿ ಉಳಿಯಲಿಲ್ಲ. ದುಡ್ಡಾಗಲಿ ಭೂಮಿಯಾಗಲಿ ಹಣವಾಗಲಿ, ಇವೆಲ್ಲ ಅನಿಶ್ಚಿತ ವಸ್ತುಗಳೆಂದು ತಿಳಿದು, ರೈತನಿರಲಿ, ಮಾಲಿಕನಿರಲಿ ಅವರೆಲ್ಲರೂ ಭೂಮಿಯಲ್ಲಿ ಬೆಳೆ ಬೆಳೆಸುವ ದೃಷ್ಟಿಯಿಲ್ಲದೆ ಭೂಮಿಯನ್ನು ಉದಾಸೀನ ಮಾಡಿದರು. ಭೂಮಿಯಲ್ಲಿ cultivation, sowing and growing ಇವುಗಳನ್ನೆಲ್ಲ ವ್ಯವಸ್ಥಿತ ರೀತಿಯಿಂದ ಮಾಡದೆ, ಸಹಜವಾಗಿ ಅನಾಯಾಸವಾಗಿ ಬಂದಷ್ಟನ್ನೇ ತೆಗೆದುಕೊಂಡು ಉತ್ಪಾದನೆಯನ್ನು ಹೆಚ್ಚು ಮಾಡದೆ ಉದಾಸೀನ ಮಾಡಿಬಿಟ್ಟರು. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುವುದೇನೆಂದರೆ ಪುನಃ ಪುನಃ ಇಂಥ ಕಾಯಿದೆಗಳನ್ನು ತರುವ ಪ್ರಯತ್ನವನ್ನು ಮಾಡಬೇಡಿ, ನಿಶ್ಚಿತ ಸ್ವರೂಪದಲ್ಲಿ ಒಂದು ಕಾಯಿದೆಯನ್ನುಮಾಡಿ. ರೈತನು ಜಮೀನಿನ ಮಾಲೀಕನೋ, ಮಾಲೀಕ ಮಾಲೀಕನೋ ಎಂಬುದು ಅನಿಶ್ಚಿತವಾಗಿದೆ. 1938 ರಿಂದ ಹಿಡಿದು ಇಂದಿನವರೆಗೂ ಸುಮಾರು ಇಪ್ಪತ್ತು ವರ್ಷಗಳಾಗಾಯ್ತು, ಮಾಲೀಕತೆಯ ವಿಚಾರದಲ್ಲಿ ಎಲ್ಲೆಲ್ಲೂ ಅನಿಶ್ಚಿತತೆಯೇ ಉಳಿದಿದೆ. ಇಂಥ ಅನಿಶ್ಚಿತತೆಯಲ್ಲಿ ಜಮೀನಿಗೆ ನಾನು ಏಕೆ ಖರ್ಚು ಮಾಡಬೇಕು, ಎಂದು ಭೂಮಾಲೀಕ ಹೇಳುತ್ತಾನೆ. ರೈತನಾದವನು ನನಗೆ ಮಾಲೀಕತೆ ಇನ್ನೂ ಬಂದಿಲ್ಲ; ಹಾಗೆ ಭೂ ಒಡೆತನ ಬಂದವೇಳೆಗೆ ನೋಡೋಣ ಎಂದು ಅವನು ಹೇಳುತ್ತಾನೆ. ಇಂಥ ಅನಿಶ್ಚಿತತೆಯೊಳಗೆ ಈ ಸಮಸ್ಯೆ ಇನ್ನೂ ಅತ್ಯಂತ ಕ್ಲಿಷ್ಟ ಮತ್ತು ಕಠಿಣವಾಗಿ ಉಳಿದಿದೆ. ಆದುದರಿಂದ ಭೂಮಾಲೀಕತೆಯ ವಿಷಯದಲ್ಲಿ ನಿಶ್ಚಿತ ಸ್ವರೂಪದ ಒಂದು ಕಾಯಿದೆಯನ್ನು ಆದಷ್ಟು ತೀವ್ರ, ಜಾರಿಗೆ ತಂದ ಹೊರತು, ಎಂದರೆ ಸರಿಪಡಿಸದ ಹೊರತು ಟೆನೆಂಟ್‌ಗೇ ಕೊಡಿರಿ, ಮಾಲೀಕನಿಗೇ ಕೊಡಿರಿ, ನಮ್ಮ ದೇಶದ ಆಹಾರ ಪರಿಸ್ಥಿತಿ ಸುಧಾರಿಸುವುದಿಲ್ಲ. ದೇಶದಲ್ಲಿ ಸುಖ ಸಮೃದ್ಧಿಯನ್ನು ಬೆಳೆಸುವ ದೆಸೆಯಿಂದ ಪ್ರತಿಯೊಂದನ್ನೂ ಮಾಡಿರಿ. ಮುಖ್ಯತಃ ಭೂಮಿ ಎಷ್ಟಿದೆಯೋ, ಆ ಭೂಮಿಗೆ ನೀರಾವರಿ ಸೌಲಭ್ಯಗಳು ಎಷ್ಟಿವೆಯೋ, ಅವುಗಳ ಮೇಲೆ ಭೂಮಿಯ ಉತ್ಪಾದನೆಯು ಅವಲಂಬಿಸಿದೆ. ಭೂಮಿಯಲ್ಲಿನ ಉತ್ಪಾದನೆಯು ಮೇಲೆ ಭೂಮಾಲೀಕನ ಸ್ಥಿತಿಗತಿಗಳು ಅವಲಂಬಿಸಿವೆ. ಭೂಮಿಯನ್ನು ಭೂಮಾಲೀಕನು ತನ್ನ ಸ್ಥಿತಿಗಳು ಸರಿಯಾಗಿದ್ದರೆ ಪಾಲಿಸುತ್ತಾನೆ ಅಥವ ಭೂಮಿಯನ್ನು ಸುಧಾರಣೆ ಮಾಡುತ್ತಾನೆ, ಅದರಿಂದ ಭೂಮಿಯಲ್ಲಿ ಉತ್ಪಾದನೆಯು ಜಾಸ್ತಿಯಾಗಿ ರೈತನಿಗೆ ಮತ್ತು ಮಾಲೀಕನಿಗೆ ಸುಖ ಸಮೃದ್ಧಿಯುಂಟಾಗುವುದು ಮತ್ತು ಆಹಾರ ಸಮಸ್ಯೆಗೆ ಸಹಾಯವಾಗುವುದು. ಇದಕ್ಕೆ ಇವರಿಬ್ಬರ ಅನ್ಯೋನ್ಯ ಸಂಬಂಧವೇ ಕಾರಣ. ಆದುದರಿಂದ ಸರ್ಕಾರದವರು ಈ ಅನಿಶ್ಚಿತ ತನವನ್ನು ತೆಗೆದುಹಾಕಿ ಒಂದು ನಿಶ್ಚಿತ ಸ್ವರೂಪದಲ್ಲಿ ಕಾಯಿದೆಯನ್ನು ತಂದು ಭೂಮಿಯಲ್ಲಿನ ಉತ್ಪಾದನೆ ಹೆಚ್ಚು ಬರುವಂತೆ ಮಾಡಬೇಕು. ಭೂಮಿಯಲ್ಲಿ ಉತ್ಪಾದನ ಹೆಚ್ಚಾಗಲು ಸರಿಯಾಗಿ ಮಳೆ ಬರಬೇಕು ಅಥವ irrigation facilities ಬೇಕು. ಸಣ್ಣಪುಟ್ಟ ಉತ್ಪಾದನೆ ಮಾಡಬೇಕಾದರೂ ವರ್ಷಾಕಾಲದಲ್ಲಿ ಸರಿಯಾಗಿ ವರ್ಷ ಬರುವುದರ ಜೊತೆಗೆ irrigation pumps ಇವಕ್ಕೆ ವಿದ್ಯುಚ್ಛಕ್ತಿ ಬೇಕು. ಇದರ ಸಂಗಡ fertilisers, manure, implements ವಗೈರೆ ಎಲ್ಲ ಬೇಕು. ಇದರ ಜೊತೆಗೆ ಕ್ರಿಮಿಕೀಟಗಳನ್ನು ನಾಶಮಾಡಲು ಕ್ರಿಮಿನಾಶಕಗಳು (pesticides) ಬೇಕು. ಆದುದರಿಂದ ವ್ಯವಸಾಯ ಮಾಡುವುದು ಹೆಚ್ಚು ಕಷ್ಟವಿದೆ. ಮೈಮುರಿದು ವ್ಯವಸಾಯದ ಕೆಲಸವನ್ನು ಮಾಡಬೇಕಾಗುತ್ತದೆ. ಸಾಮಾನ್ಯ ರೀತಿಯಿಂದ ಮಾಡಿದರೆ ಆಗುವುದಿಲ್ಲ. ಕೇವಲ ಕುರ್ಚಿಯ ಮೇಲೆ ಕುಳಿತುಕೊಂಡು ಹೋಗುವ ಹಾಗೆ ಮಾಡಿದರೆ ವ್ಯವಸಾಯದ ಕೆಲಸವಾಗುವುದಿಲ್ಲ. ಶರೀರದೊಳಗಿನ ಎಲುಬು ಮುರಿಯಬೇಕಾಗುತ್ತದೆ; ಹಾಗೆ ಮಾಡಿದ ಹೊರತು ವ್ಯವಸಾಯ ನೆಟ್ಟಗಾಗುವುದಿಲ್ಲ. ವ್ಯವಸಾಯಕ್ಕೆ ಎಷ್ಟು ಸೌಲಭ್ಯ ಸೌಕರ್ಯಗಳಾದರೂ ಕಡಮೆ. ಇನ್ನೂ ಎಲ್ಲ ಕಡೆಗಳಲ್ಲಿ ಈಗಲೂ ಮಟ್ಟಿ ಹೊಡೆದು, ಏತದಿಂದ ನೀರನೆತ್ತಿ ಬೆಳೆಯನ್ನು ತೆಗೆಯುತ್ತಾರೆ. ಇದಕ್ಕಿಂತಲೂ ಸುಲಭವಾದುದು ಡೀಸೆಲ್ ಅಥವ ಕ್ರೂಡ್ ಆಯಿಲ್ ಇಂಜಿನ್ ಉಪಯೋಗಿಸಿ ನೀರನ್ನು ಎತ್ತುವುದು. ಇದಕ್ಕಿಂತಲೂ ಹಗುರವಾದುದು ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಬಳಸುವುದು, ಇದಕ್ಕಿಂತಲೂ ಸಹಜ ಸುಲಭವಾದ ವ್ಯವಸಾಯವೆಂದರೆ canal irrigation system. ವ್ಯವಸಾಯಗಾರನಿಗೆ canal irrigation ಅಥವ ವಿದ್ಯುಚ್ಛಕ್ತಿಯಿಂದ ನಡೆಯುವ ಪಂಪ್‌ಸೆಟ್ ಮುಖೇನ ವ್ಯವಸಾಯ ಮಾಡುವುದರಿಂದ ಲಾಭವಿದೆ. ಇದರಿಂದ ಎಲ್ಲರಿಗೂ ಖರ್ಚಿನ ಅತಿ ಉಳಿತಾಯವಾಗುತ್ತದೆ. ಅಂಥ ಅನುಕೂಲಗಳನ್ನೊದಗಿಸಲು ಪ್ರಯತ್ನಮಾಡಿ ಎಂದು ಸೂಚಿಸುತ್ತೇನೆ. ದೊಡ್ಡ ನದಿ ಇರಲಿ, ಸಣ್ಣ ಹೊಳೆ ಇರಲಿ, ಅಥವಾ ದೊಡ್ಡ ನಾಲಾ ಇರಲಿ, ಪ್ರತಿಯೊಂದು ನದಿಯನ್ನೂ ನಾಲಾವನ್ನೂ ಸರ್ವೆ ಮಾಡಿಸಿ ಅದರಿಂದ ದೊರೆಯುವ ಪ್ರತಿಹನಿ ನೀರನ್ನೂ ಬಳಸಿಕೊಳ್ಳಲು ಸಾಧ್ಯವಾಗುವಂತೆ ಸಣ್ಣ ದೊಡ್ಡ, ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕು. See that every drop of water is used and not a single drop of water is left unused. ಈ ರೀತಿಯಾಗಿ ಮಾಡದೆ ಬೇರೆ ಮಾರ್ಗವೇ ಇಲ್ಲ.

3-30 P. M.

*ಶ್ರೀ ಬಿ. ರಾಚಯ್ಯ (ಚಾಮರಾಜನಗರ).—ಮಾನ್ಯ ಸಭಾಧ್ಯಕ್ಷರೆ, ನಿನ್ನೆಯದಿವಸದಿಂದ ನಡೆಯುತ್ತಿರುವ ಆಹಾರ ಸಮಸ್ಯೆಯ ಮೇಲಿನ ಚರ್ಚೆಯನ್ನು ಕೇಳಿದ್ದೇನೆ. ಇದರಲ್ಲಿ ಭಾಗವಹಿಸಿದ ಹೆಚ್ಚು ಮಂದಿ ಸದಸ್ಯರು ಸರ್ಕಾರ ಇದುವರೆಗೆ ಏನೇನು ಯೋಜನೆಗಳನ್ನು ಹಾಕಿಕೊಂಡಾಗ್ಯೂ ಕೂಡ ಆಹಾರ ಪರಿಸ್ಥಿತಿಯನ್ನು ಇನ್ನೂ ಸುಧಾರಿಸಲು ಸಾಧ್ಯವಾಗಿಲ್ಲವೆಂದು ತಿಳಿಸಿದರು. ಮತ್ತೆ, ಅನೇಕ ಮಾನ್ಯ ಸದಸ್ಯರು ಆಹಾರವನ್ನು ಹೆಚ್ಚು ಬೆಳೆಯಬೇಕಾದರೆ, ಬರಿಯ ಮನುಷ್ಯ ಪ್ರಯತ್ನದಿಂದ ಮಾತ್ರ ಸಾಧ್ಯವಿಲ್ಲ, ಪ್ರಕೃತಿ ನಿಯಮಕ್ಕೊಳಗಾಗಿದ್ದೇವೆ, ಪ್ರಕೃತಿ ಸಕಾಲದಲ್ಲಿ ಸಾಕಷ್ಟು ತನ್ನ ಕರುಣೆಯನ್ನು ಬೀರಿದ ಹೊರತು ಎಷ್ಟು ಬೆಳೆಯಬೇಕೆಂದು ನಿರೀಕ್ಷಿಸಬಹುದೋ ಅಷ್ಟು ಬೆಳೆಯಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ.

ಆಹಾರೋತ್ಪತ್ತಿಯನ್ನು ಹೆಚ್ಚಿಸುವ ದಾರಿಯಲ್ಲಿ ಸರ್ಕಾರ ಎಷ್ಟು ಮಟ್ಟಿಗೆ ಫಲಕಾರಿಯಾಗಿದೆ ಎನ್ನುವುದು ನಮಗೆ ಅವರು ಒದಗಿಸಿರುವ ಸಾಹಿತ್ಯದಿಂದ ಗೊತ್ತಾಗುತ್ತದೆ. ಎಷ್ಟು ಎಕರೆಯಲ್ಲಿ ಬತ್ತ, ರಾಗಿ, ಜೋಳ ಮತ್ತು ಇತರ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದೇವೆಂಬುದನ್ನು ಇದುವರೆಗೆ ಇಟ್ಟುಕೊಂಡಿರುವ ಯೋಜನೆಯ ಪ್ರಕಾರ ಅಂಕಿ ಅಂಶ

(ಶ್ರೀ ಬಿ. ರಾಚಯ್ಯ)

ಗಳನ್ನೊದಗಿಸಿ ತಿಳಿಸಿದ್ದಾರೆ. ಇದನ್ನು ನೋಡಿದರೆ, ನಮ್ಮ ದೇಶದಲ್ಲಿ ಜೋಳ ಮತ್ತು ರಾಗಿಯನ್ನು ಹೆಚ್ಚು ಭಾಗದಲ್ಲಿ ಬೆಳೆಯುತ್ತಿದ್ದೇವೆಂಬುದು ವ್ಯಕ್ತವಾಗುತ್ತದೆ. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಯವರು ಎಷ್ಟುಮಟ್ಟಿಗೆ ಸಂಶೋಧನೆ ವಿಭಾಗಕ್ಕೆ ಗಮನ ಕೊಟ್ಟಿದ್ದಾರೆಂಬುದನ್ನು ಗಮನಿಸಿದರೆ ಸಂತೋಷವಾಗುತ್ತದೆ. ಡಾ|| ಕೋಲ್‌ಮನ್ ಅವರು ಈಚೆಗೆ ಇಲ್ಲಿ ಬಂದಿದ್ದಾಗ ರಾಗಿ ಬಹಳ ಬೇಗ ಬೆಳೆ ಬರುವಂತೆಯೂ ಮತ್ತು ಏಕ ಕಾಲದಲ್ಲಿ ಕೊಯ್ಲಿಗೆ ಬರುವ ಒಂದು ಸಂಶೋಧನೆ ಮಾಡಿ, ಅದನ್ನು ಮಂಡ್ಯದ ವಿ.ಸಿ. ಫಾರಂನಲ್ಲಿ ಕಂಡುಹಿಡಿದು, ಮೂರು ಮಾದರಿಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಸಂತೋಷಪಡಬೇಕಾಗಿದೆ. ಆದರೆ ಈ ಸಂಶೋಧನೆಗೆ ಸಂಬಂಧಪಟ್ಟಂತೆ ಮಿಲೆಟ್ಸ್‌ಗೆ ಒಂದು ಸಂಶೋಧನಾ ಕೇಂದ್ರವನ್ನು ನಮ್ಮ ರಾಜ್ಯದಲ್ಲಿ ಇನ್ನೂ ಸ್ಥಾಪನೆ ಮಾಡದೇಯಿರುವುದು ನನಗೆ ವ್ಯಥೆಯನ್ನುಂಟುಮಾಡಿದೆ. ಜರೂರಾಗಿ ಸರ್ಕಾರ ಒಂದು ಸಂಶೋಧನಾ ಕೇಂದ್ರವನ್ನು ಹೆಸರುಘಟ್ಟ ಅಥವ ಮಂಡ್ಯದಲ್ಲಿ ಸ್ಥಾಪನೆ ಮಾಡಬೇಕಾಗಿದೆ. ಇದರಿಂದ ಮುಂದೆ ಜನ ಹೆಚ್ಚು ಬೆಳೆ ಬೆಳೆಯುವುದಕ್ಕೂ ರೋಗ ರಹಿತವಾದ ಬೀಜವನ್ನು ಮಾಡುವುದಕ್ಕೂ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಅಂಥ ಸಂಶೋಧನೆಯಲ್ಲಿ ಯಶಸ್ವಿಯಾಗಿರುವವರಿಗೆ ಸರ್ಕಾರ ಮನ್ನಣೆ ನೀಡುವುದು ಒಳ್ಳೆಯದು. ಈ ಮಾರ್ಗದಲ್ಲಿ ಇನ್ನೂ ಮುಂದುವರಿಯುವುದಕ್ಕೆ ಸೌಲಭ್ಯವನ್ನೂ ಪ್ರೋತ್ಸಾಹವನ್ನೂ ಕಲ್ಪಿಸಿಕೊಡುವುದು ಉಚಿತವಾಗಿದೆ. ಯಾರು ಈ ಕ್ಷೇತ್ರದಲ್ಲಿ ಪರಿಶ್ರಮ ಹೊಂದಿ ಸಂಶೋಧನೆ ನಡೆಸಿದ್ದಾರೋ ಅಂಥವರನ್ನು ಬೇರೆ ಇಲಾಖೆ ಅಥವ ಅವರಿಗೆ ಸಂಬಂಧಪಡದ ಒಂದು ಶಾಖೆಗೆ ವರ್ಗ ಮಾಡಿದರೆ, ಸಂಶೋಧನೆಯಲ್ಲಿ ಅವರು ಪಡೆದ ಅನುಭವವನ್ನು ಕಳೆದುಕೊಂಡ ಹಾಗಾಗುತ್ತದೆ. ಆದುದರಿಂದ ಇಂಥವರಿಗೆ ಅವರ ಕಾರ್ಯವನ್ನು ಮುಂದುವರಿಸಲು ಪ್ರೋತ್ಸಾಹ ಕೊಡಬೇಕು. ಈ ವಿಜ್ಞಾನ ಯುಗದಲ್ಲಿ ಒಂದೊಂದು ಶಾಖೆಯಲ್ಲಿಯೂ ಸಂಶೋಧನೆ ನಡೆಯುತ್ತಿದೆ. ನಮ್ಮ ದೇಶದಲ್ಲಿ ಖುಷ್ಕಿ ವ್ಯವಸಾಯ ಹೆಚ್ಚುತ್ತಿರುವುದರಿಂದ ಇಂಥ ಒಂದು ಸಂಶೋಧನೆಗೆ ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ತಜ್ಞರು ಹೇಳುತ್ತಾರೆ.

ಸಣ್ಣ ಪುಟ್ಟ ನೀರಾವರಿ ಕೆಲಸಗಳಿಗೆ, ಮೈನರ್ ಇರಿಗೇಷನ್ ಸ್ಕೀಮಿನಲ್ಲಿ ಕೆಲವು ಒಳ್ಳೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರಲ್ಲಿ ಎಲ್ಲೆಲ್ಲಿ ಖುಷ್ಕಿ ಬೆಳೆ ಬೆಳೆಯುತ್ತಾರೋ ಅಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ಒಂದು ಬಾವಿಗೆ 250 ಸಹಾಯ ದ್ರವ್ಯವನ್ನೂ 750 ರೂಪಾಯಿ ಸಾಲವನ್ನೂ ಕೊಡುತ್ತಿದ್ದಾರೆ. ಇದು ಸಾಕಾಗುತ್ತಾ ಇಲ್ಲ. ಇಂಡಿಯಾ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿ ಈಗ ಮೂರು ಸಾವಿರದವರೆಗೆ ಕೊಡಬೇಕೆಂದು ಮಾಡಿರುವುದಾಗಿ ತಿಳಿಸಿದ್ದಾರೆ. ಇದು ಸ್ವಾಗತಾರ್ಹವಾದ ವಿಷಯ. ಬಹು ಬೇಗ ಇದನ್ನು ಸಾಧಿಸರೆಂದು ಸೂಚಿಸುತ್ತೇನೆ. ಹೀಗೆ ತೆಗೆವ ಬಾವಿಗಳಿಗೆ ಎಲ್ಲೆಲ್ಲಿ ನೀರನ್ನೆತ್ತುವುದಕ್ಕೆ ವಿದ್ಯುಚ್ಛಕ್ತಿ ಬೇಕಾಗಿದೆಯೋ ಅಲ್ಲಿ ಕೈಗಾರಿಕೆಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ವ್ಯವಸಾಯಕ್ಕೆ ಕೊಟ್ಟು ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಸೂಚಿಸುತ್ತೇನೆ. ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪತ್ತಿ ಮಾಡತಕ್ಕ ಸಣ್ಣ ಪುಟ್ಟ ಯೋಜನೆಗಳೇನಿವೆಯೋ ಅವನ್ನು ಬೇಗ ಕಾರ್ಯಗತ ಮಾಡುವುದು ಸೂಕ್ತವೆಂದು ಸೂಚಿಸುತ್ತೇನೆ. ನಿನ್ನೆಯ ದಿವಸ ಶ್ರೀಮಾನ್ ಹನುಮಂತಯ್ಯನವರು ಮಾತನಾಡುವಾಗ ಈಗಾಗಲೇ ಸರ್ಕಾರಿ ಜಮೀನನ್ನು 75,000 ಎಕರೆಯಷ್ಟು ಅಮೃತ ಮಹಲ್ ಕಾವಲಿನಿಂದ ರಿಲೀಸ್ ಮಾಡಿ ಸಾಗುವಳಿಗೆ ಕೊಡಬೇಕೆಂದು ಹೇಳಿದ್ದಾರೆ. ಅಲ್ಲದೆ ಸರ್ಕಾರದವರು ಸ್ಟೇಟ್ ಅಥವ ಕೋ-ಅಪರೇಟಿವ್ ಫಾರ್ಮಿಂಗ್ ಮಾಡಲು ಏರ್ಪಾಡು ಮಾಡಬೇಕೆಂದು ಹೇಳಿದರು, ಇದು ಸ್ವಾಗತಾರ್ಹವಾಗಿ ಕಾಣುತ್ತದೆ. ಆದರೆ ಈಗಿನ ಒಂದು ರಾಜಕೀಯ ಆಂದೋಲನದಲ್ಲಿ ಆ ರೀತಿಯ ಸ್ಟೇಟ್ ಫಾರ್ಮಿಂಗ್ ಮುಂದೆ ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆ ಎಂಬುದು ಸಂಶಯಾತ್ಮಕವಾಗಿದೆ. ಆದುದರಿಂದ, ಶ್ರೀಮಾನ್ ಕಂಬಳಿಯವರು ಹೇಳಿದಹಾಗೆ, ಜಂಗಲು ಕಡಿಯುವುದನ್ನೂ ಭೂಮಿಯನ್ನು ಮಟ್ಟ ಮಾಡುವುದನ್ನೂ ಸರ್ಕಾರ ತೆಗೆದುಕೊಂಡು ಆಮೇಲೆ ದರಖಾಸ್ತು ಮೂಲಕ ಕೊಡುವುದರಿಂದ ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ತತ್ವಕ್ಕೆ ಸರಿಹೋಗುತ್ತದೆ. ಆಗ ಜನರು ಭೂಮಿ ನನ್ನದು, ಅದರಲ್ಲಿ ಬೆಳೆಯುವ ಬೆಳೆ ನನ್ನದು, ಬರುವಲಾಭ ನನ್ನದು ಎಂಬ ಮನೋಭಾವವನ್ನು ತಳೆದು ಹೆಚ್ಚು ಬೆಳೆಯುವುದಕ್ಕವಕಾಶವಾಗುತ್ತದೆಂದು ಸೂಚಿಸುತ್ತೇನೆ.

ಶ್ರೀಮಾನ್ ಕಂಬಳಿಯವರು ಮಾತನಾಡುತ್ತಾ ಇನ್ನೊಂದು ವಿಷಯವನ್ನು ಹೇಳಿದರು. ಭೂಸುಧಾರಣೆಯನ್ನು ಜಾರಿಗೆ ತಂದುದರಿಂದ ಹನ್ನೆರಡು ತಿಂಗಳಲ್ಲಿ ಉತ್ಪತ್ತಿ ಮಾಡಿದ ಆಹಾರಧಾನ್ಯ 18 ತಿಂಗಳಿಗಾಗುವಷ್ಟು ಹೆಚ್ಚು ಮಾಡಲು ಸಾಧ್ಯವಾಯಿತೆಂದೂ. ಆದುದರಿಂದ ಜರೂರಾಗಿ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದೂ ಹೇಳಿದರು. ಸುಧಾರಣೆಯನ್ನು ಜಾರಿ ಮಾಡುವಾಗ ಒಂದು ವಿಚಾರವನ್ನು ಗಮನಿಸಬೇಕು. ಈಗ ಅನೇಕ ಕಡೆ fallow ಅಥವ ಬಂಜರು ಭೂಮಿ ಇದೆ. ಇದರಲ್ಲಿ ವ್ಯವಸಾಯ ಮಾಡುತ್ತಿಲ್ಲ. ಇಂಥ ಜಮೀನು ಖಾಸಗಿ ಜನರಲ್ಲಿದ್ದರೂ ಅದನ್ನು ಸರ್ಕಾರ ವಶಪಡಿಸಿಕೊಂಡು ಯಾರು ಬೆಳೆಯುತ್ತಾರೋ ಅವರಿಗೆ ಕೊಡುವುದು ಅತ್ಯಾವಶ್ಯಕವೆಂದು ಸೂಚಿಸುತ್ತೇನೆ.

ಉಳುಮೆ ಮಾಡುವವರಿಗೆ ಬೇಕಾದ ಗೊಬ್ಬರ ವಗೈರೆ ಸಲಕರಣೆಗಳು ಸಕಾಲದಲ್ಲಿ ದೊರೆಯುತ್ತಿಲ್ಲವೆಂದು ಹೇಳಿದರು. ನನಗೆ ತಿಳಿದಮಟ್ಟಿಗೆ, ಬೆಂಗಳೂರಿನ ವ್ಯವಸಾಯ ಗೋಡೌನ್‌ನಲ್ಲಿ ಅನೇಕ ಉಪಕರಣಗಳನ್ನು ಕೊಂಡಿಟ್ಟಿದ್ದಾರೆ. ಮೂರು ನಾಲ್ಕು ಲಕ್ಷರೂಪಾಯಿಗಳ ಸಾಮಾನುಗಳಿರಬಹುದು. ಇವುಗಳಲ್ಲಿ ಕೆಲವು ತುಕ್ಕು ಹಿಡಿದು ಹೋಗಿವೆ ಎಂದು ತಿಳಿದುಬಂದಿದೆ. ಇವುಗಳನ್ನು ಕಡಮೆ ಬೆಲೆಗೆ ಕೊಡಲು ಮನಸ್ಸು ಮಾಡಿದರೆ ಮಾರಾಟವಾಗುತ್ತವೆಯೋ ಹೊರತು ಈಗಿನ ಪೇಟೆ ಬೆಲೆಗೆ ಯಾರೂ ಕೊಂಡುಕೊಳ್ಳುವುದಿಲ್ಲ. ಕಡಮೆ ಬೆಲೆಗೆ ಕೊಡಬೇಕು. ಅಲ್ಲದೆ ಇಂಡಿಯಾ ಸರ್ಕಾರಕ್ಕೆ ಬರೆಯುವಾಗ ನಮಗೆ ಬೇಕಾದುದರ ಎರಡರಷ್ಟು ಸಾಮಾನುಗಳಿಗೆ ಇಂಡೆಂಟ್ ಮಾಡಿದರೆ ಸಾಕಾಗುವಷ್ಟು ಸಿಕ್ಕುತ್ತದೆ.

ಕಂಪೋಸ್ಟ್ ಮತ್ತು ಹಸರು ಗೊಬ್ಬರದ ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ಈ ದಿವಸ ಖಾಸಗಿ ಫಾರೆಸ್ಟ್‌ಗಳಿಲ್ಲ. ಕಾಡುಗಳನ್ನು ಸೌದೆಗಾಗಿ, ಕೂಪ್ ಮಾಡಿ ಕೊಡುವುದರಿಂದ ಹೆಚ್ಚುಗಿಡಗಳನ್ನು

ನೆಡಬೇಕಾಗಿದೆ. ಖಾಸಗಿ ಫಾರೆಸ್ಟ್ ಬೆಳೆಸುವುದಕ್ಕೆ ಯಾವ ರೀತಿಯ ಉತ್ಸಾಹವನ್ನೂ ಜನರಲ್ಲಿ ತುಂಬುತ್ತಿಲ್ಲ. ಹೆಚ್ಚು ಕಾಡನ್ನು ಬೆಳೆಸುವುದರಿಂದ ಮೋಡವನ್ನು ಆಕರ್ಷಿಸಿ ಸಕಾಲದಲ್ಲಿ ಮಳೆಯಾಗುವುದಕ್ಕೆ ಅವಕಾಶವಾಗುತ್ತದೆ.

ಈಗ ಅನೇಕರನ್ನು ಪಾಶ್ಚಾತ್ಯದೇಶಗಳಿಗೆ ಟ್ರೈನಿಂಗಿಗಾಗಿ ಕಳುಹಿಸುತ್ತಿದ್ದಾರೆ. ಆದರೆ ಅಲ್ಲಿ ಅವರು ವಿಶೇಷ ಪರಿಶ್ರಮ ಕೊಂಡು ಬಂದಮೇಲೆ ಅವರನ್ನು ಯಾವ ಉದ್ದೇಶಕ್ಕಾಗಿ ಹೊರದೇಶಕ್ಕೆ ಕಳುಹಿಸಲಾಗಿತ್ತೋ ಆ ಉದ್ದೇಶಕ್ಕಾಗಿ ಉಪಯೋಗಿಸುತ್ತಿಲ್ಲ. ಫಿಷರಿ ಟ್ರೈನಿಂಗ್ ಮಾಡಿಕೊಂಡು ಬಂದವರನ್ನು ಕಾಲೇಜ್ ಲೆಕ್ಚರರ್ ಮಾಡಿದ್ದಾರೆ. ಹೀಗೆ ಮಾಡಿದರೆ ಹೊರಗಡೆ ಪರಿಶ್ರಮ ಪಡೆದು ಬಂದವರಿಂದ ಸರಿಯಾದ ಪ್ರಯೋಜನ ಪಡೆದಂತಾಗುವುದಿಲ್ಲ, ಉದ್ದೇಶಸಾಧನೆಯಾಗುವುದಿಲ್ಲ. ಆದ್ದರಿಂದ ಯಾವ ಉದ್ದೇಶಕ್ಕಾಗಿ ಕಳುಹಿಸಿತ್ತೋ ಆ ಉದ್ದೇಶಕ್ಕೇ ಅವರ ಜ್ಞಾನ ಮತ್ತು ಅನುಭವ ಉಪಯೋಗಿಸಿಕೊಳ್ಳಬೇಕೆಂದು ತಿಳಿಸುತ್ತೇನೆ.

ಜಪಾನ್ ಮೆಥಡ್ ಪ್ರಕಾರ ಬತ್ತ ಬೆಳೆದರೆ ಒಂದಕ್ಕೆ ಮೂರರಷ್ಟು ಉತ್ಪತ್ತಿಯಾಗುತ್ತದೆಂದು ಪ್ರಚಾರ ಮಾಡುತ್ತಿದ್ದಾರೆ. ಬರೀ ಪ್ರಚಾರದಿಂದ ಹೆಚ್ಚು ಬೆಳೆಯುವುದಕ್ಕಾಗುವುದಿಲ್ಲ. ಹಿಂಗಾರು, ಮುಂಗಾರು ಬೆಳೆಗಳಿಗೆ ಹೆಚ್ಚು ಪ್ರೋತ್ಸಾಹಬೇಕು. ಮೈನರ್ ಕೆರೆ ಸಾಲಾಬಾದು ಕಾಮಗಾರಿ ರೈತರೇ ಮಾಡಿಕೊಳ್ಳಬೇಕೆಂದು ಹೇಳುವುದರಿಂದ ರೈತರು ಈ ದಿವಸ ಆಲಸ್ಯದಿಂದ ಏನೂ ಮಾಡುತ್ತಿಲ್ಲ. ಬೇಕಾದರೆ ಸೆಸ್ ಅಥವಾ ತೆರಿಗೆ ಹೆಚ್ಚಾಗಿ ಹಾಕಿ ಕೆರೆಗಳ ಜೀರ್ಣೋದ್ಧಾರ ಮಾಡುವ ಜವಾಬ್ದಾರಿ ಮತ್ತು ರಿಪೇರಿಮಾಡುವ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಈಗ ಪಬ್ಲಿಕ್‌ವರ್ಕ್ಸ್ ಇಲಾಖೆ ಮೇಜರ್ ಕೆರೆಗಳ ಉಸ್ತುವಾರಿಯನ್ನು ತಾನಿಟ್ಟುಕೊಂಡು ಬಾಕಿಯಾದವನ್ನು ರೆವೆನ್ಯೂ ಇಲಾಖೆಗೆ ವಹಿಸಿದೆ. ರೆವೆನ್ಯೂ ಇಲಾಖೆಯಲ್ಲಿ ಟ್ಯಾಂಕ್ ಪಂಚಾಯಿತಿಯಿಲ್ಲ. ಹೀಗಾಗಿ ಸಣ್ಣಪುಟ್ಟ ಕೆರೆಗಳನ್ನು ಯಾರೂ ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಆದ್ದರಿಂದ ಅವುಗಳ ರಿಪೇರಿವಗೈರೆಗೆ ಸರಿಯಾಗಿ ಅಂದಾಜುಮಾಡಿ, ಬೇಕಾದರೆ ಹೆಚ್ಚು ತೆರಿಗೆ ಹಾಕಿ ಒಂದು ಬೆಳೆಗೆ ಬದಲಾಗಿ ಎರಡು ಬೆಳೆ ಬೆಳೆಸಲು ಪ್ರಯತ್ನ ಮಾಡಿದರೆ ಆಹಾರ ಪರಿಸ್ಥಿತಿಯನ್ನು ಸ್ವಲ್ಪ ಸುಧಾರಿಸಬಹುದೆಂದು ಈ ಸಂದರ್ಭದಲ್ಲಿ ಸೂಚಿಸುತ್ತಿದ್ದೇನೆ. ಬುಲ್‌ಡೋಜರ್ ಮತ್ತು ಟ್ರಾಕ್ಟರುಗಳಿಂದ ಈಗ ಸಣ್ಣ ಹಿಡುವಳಿದಾರರಿಗೆ ಉಪಯೋಗವಾಗುತ್ತಿಲ್ಲ. ಅವನ್ನು ಸ್ಟೇಟ ಲೆವಲ್ ನಲ್ಲಿಟ್ಟು ಜನರಿಗೆ ಸುಲಭವಾಗಿ ದೊರೆಯುವಂತೆಮಾಡಬೇಕು ಮತ್ತು ಭೂಮಿ ಮಟ್ಟ ಮಾಡುವುದಕ್ಕೆ ಬೇಕಾದವರಿಗೆ ಕೊಡಬೇಕು ಖಾಸಗಿ ರೈತರಿಗೆ ಬೇಕಾದಾಗ ಹೈರ್ ಪರ್ಚೇಸ್ ಸಿಸ್ಟಂ ಪ್ರಕಾರ ಕೊಡಬಹುದು.

ರಿಕ್ಲಮೇಷನ್ ಆಫ್ ಸಾಯಿಲ್ ಎಂಬುದು ಈಗ ಕೊಡಗಿನಲ್ಲಿ ಮಾತ್ರ ಜಾರಿಯಲ್ಲಿದೆ. ಇತರ ಕಡೆಗಳಿಗೂ ಅದರ ಸೌಲಭ್ಯ ಒದಗಿಸಬೇಕು. ಯಾವ ಭೂಮಿಯಲ್ಲಿ ಯಾವಬೆಳೆ ಸರಿಯಾಗಿ ತೆಗೆಯಬಹುದು ಎಂಬುದನ್ನು ಬೆಂಗಳೂರು ಲ್ಯಾಬೊರೇಟರಿಯಲ್ಲಿ ತಿಳಿದುಕೊಳ್ಳಿ ಎಂದು ಹೇಳುತ್ತಾರೆ. ಸ್ಪೆಷಲಿಸ್ಟ್‌ಗಳು ಅಲ್ಲಿರುವುದು, ಅಲ್ಲಿ ಪರೀಕ್ಷೆ ಮಾಡುವುದು ಬಹಳ ಮಂದಿಗೆ ಗೊತ್ತಾಗುವುದಿಲ್ಲ. ಇದು ಗೊತ್ತಾಗಬೇಕು. ಸಾಯಿಲ್ ರಿಸರ್ಚ್ ವ ಮುಂದುವರಿಸಬೇಕು. ಈ ರೀತಿ ಸಂಶೋಧನಾಲಯ ಹೆಚ್ಚಿಸುವುದರಿಂದ ಹೊಸಕ್ರಮ ಕೈಕೊಂಡು ಹೊಸ ರೀತಿಯ ಬೀಜ ಒದಗಿಸುವುದರಿಂದ ದೇಶದಲ್ಲಿ ಹೆಚ್ಚಾಗಿ ಆಹಾರ ಪದಾರ್ಥ ಬೆಳೆಯಬಹುದು. ದೇಶದಲ್ಲಿರುವ ಜನಸಂಖ್ಯೆ ಹೆಚ್ಚುತ್ತಿರುವಾಗ ಎಷ್ಟು ಬೆಳೆದರೂ ಸಾಧ್ಯವಾಗುವುದಿಲ್ಲ. ಒಂದಕ್ಕೆ ಮೂರರಷ್ಟು ಬೆಳೆಯುವುದಕ್ಕೆ ಪ್ರಯತ್ನ ಮಾಡಿದರೆ ಆಹಾರದ ಅಭಾವ ಪರಿಸ್ಥಿತಿಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ಇಷ್ಟು ಅವಕಾಶಕೊಟ್ಟದ್ದಕ್ಕಾಗಿ ವಂದನೆಗಳನ್ನರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. CHAIRMAN.—I know that many Hon'ble Members want to participate in the debate. With a view to accommodate as many Hon'ble Members as possible, I think it would be necessary to reduce the time from 15 minutes to 10 minutes. If all members are agreeable, it will be helpful. This debate has got to be concluded today and some Hon'ble Members are likely to be left out. I shall be guided by the House.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಸಂಸ್ಥಾನದ ಆಹಾರ ಪರಿಸ್ಥಿತಿ ವಿಷಯದಲ್ಲಿ ಸರ್ಕಾರ ತಯಾರುಮಾಡಿರುವ ಹೇಳಿಕೆ ನೋಡಿದ ಮೇಲೆ ಬಾಲ್ಯದಲ್ಲಿ ಓದಿರುವ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತಿದೆ. "Water water everywhere, but not a drop to drink." ಎಂದು ಹೀಗೆ ಓದಿದ್ದೆ. ನೀರು ಸಮೃದ್ಧಿಯಾಗಿದ್ದರೂ ಕುಡಿಯಲು ಒಂದು ತೊಟ್ಟು ನೀರೂ ಇಲ್ಲ ಎಂದುಹೇಳುವ ಹಾಗೆ ನಮ್ಮ ದೇಶದ ಇಂದಿನ ಪರಿಸ್ಥಿತಿಯಿದೆ. ಮಾನ್ಯ ಸಚಿವರು ಹೇಳಿರುವಂತೆ ದೇಶದಲ್ಲಿ ಆಹಾರದ ಅಭಾವವಿಲ್ಲ. ದೇಶದಲ್ಲಿ ಯಾವ ಬೆಳೆಯಾದರೂ ಸಹ ಪುಣ್ಯವಂತರಿಗೆ ಮಾತ್ರ ಅನುಕೂಲವಾಗಿ ಮಧ್ಯಮ ವರ್ಗದವರಿಗೆ ಮತ್ತು ಬಡವರಿಗೆ ಬಹಳ ಕಷ್ಟವಾಗುತ್ತಿದೆ. 'ಮೈಸೂರಿನ ಬತ್ತದ ಕಣಜ' ಎಂದು ಶಿವಮೊಗ್ಗಾಕ್ಕೆ ಹೆಸರಿದೆ. ಅಂಥ ಶಿವಮೊಗ್ಗ ಜಿಲ್ಲೆಯಲ್ಲೂ ಮತ್ತು ನಗರದಲ್ಲೂ ಕೂಡ ವಾಸಮಾಡುವವರಿಗೆ, ಬಡವರಿಗೆ ಬಹಳ ಕಷ್ಟವಿದೆ. ಸುಗ್ಗಿ ಸಾಮಾನ್ಯವಾಗಿ ಆದರೂ ಹಳೆಯ ಅಕ್ಕಿ ಶಿವಮೊಗ್ಗಾದಲ್ಲಿ ರೂಪಾಯಿಗೆ $1\frac{1}{4}$ ಸೇರಿನಂತೆ ಮಾರಾಟವಾಗುತ್ತಿದೆ. ಬತ್ತ ಪಲ್ಲಾಕ್ಕೆ 50 ರೂಪಾಯಿನಂತೆ ಮಾರಾಟವಾಗುತ್ತಿದೆ; ಕಳೆದ ವರ್ಷ ಈ ದಿವಸದಲ್ಲಿ ಪಲ್ಲಾಕ್ಕೆ 22 ರೂಪಾಯಿನಂತೆ ಮಾರಾಟವಾಗುತ್ತಿತ್ತು. ಅಂಕಿ ಅಂಶ ಒದಗಿಸಿರುವ ಮಂತ್ರಿಗಳು ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡ ಹಾಗಿಲ್ಲ. ಆಹಾರದ ಅಭಾವ ಜನಸಾಮಾನ್ಯರಿಗೆ ಉಂಟಾದ ಕೂಡಲೆ ಅಧಿಕಾರಿಗಳು ಸೂಕ್ತಕ್ರಮ ಕೈಕೊಳ್ಳುವುದಿಲ್ಲ. ನಮ್ಮ ದೇಶದಲ್ಲಿ ಕೊರತೆಬೀಳುವ ಸೂಚನೆ ಕಂಡ ತಕ್ಷಣ ನಮ್ಮಲ್ಲಿಂದ ಹೊರಕ್ಕೆ ಇರುವ ದವಸ ಸಾಗಿಹೋಗುವುದನ್ನು ತಡೆಗಟ್ಟದಿದ್ದರೆ ಆಗ ಸಾಮಾನ್ಯವಾಗಿ ಜನರಿಗೆ ಅಭಾವವುಂಟಾಗುತ್ತದೆ. ಬ್ಯಾಂಕಿನಲ್ಲಿ ಕೋಟ್ಯಾಂತರ ರೂಪಾಯಿ ಇರಬಹುದು. ಎಲ್ಲಿಯವರೆಗೆ ಅದರ ಉಪಯೋಗ ಜನರಿಗೆ ಲಭಿಸುವುದಿಲ್ಲವೋ ಅಲ್ಲಿಯವರೆಗೆ ಬಡತನ ನೀಗಲು ಸಾಧ್ಯವಿಲ್ಲ. ಬತ್ತದ ಕಣಜವಾದ ಶಿವಮೊಗ್ಗದಲ್ಲಿ ಬತ್ತ ಬೇಕಾದಷ್ಟು ಬೆಳೆದು ಹೊರದೇಶಕ್ಕೆ ಸಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಮಿಲ್ಲುಗಳಿವೆ. ಅಲ್ಲಿ ಕುಸುಬಲಕ್ಕಿ ತಯಾರು ಮಾಡಿ ಹೊರಕ್ಕೆ ಕಳುಹಿಸುತ್ತಾರೆ, ದಿನಕ್ಕೆ ಸಾವಿರ ಪಲ್ಲ ಅಕ್ಕಿ ತಯಾರಾಗಿ ಹೊರಗೆ ಮಾರಾಟವಾಗುತ್ತದೆ. ಈ ಮಾಲು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಅಲ್ಲಿಂದ ಗೋವಾ ಕಡೆಗೆ ಕಳ್ಳಸಾಗಾಣಿಕೆಯಾಗುತ್ತದೆ. ಇದನ್ನು

(ಶ್ರೀಮತಿ ರತ್ನಮ್ಮ ಮಾಧವರಾವ್)

ಅನೇಕಸಲ ಗಮನಕ್ಕೆ ತಂದರೂ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲದಿರುವುದನ್ನು ನೋಡಿ ವಿಷಾದವಾಗುತ್ತಿದೆ. ಇದನ್ನು ಗಮನಿಸಿ ಈಗ ಲಾದರೂ ಸೂಕ್ತ ಕಾರ್ಯಕ್ರಮ ಕೈಕೊಂಡು ಕಳ್ಳ ಸಾಗಾಣಿಕೆಯನ್ನು ಆದಷ್ಟು ಮಟ್ಟಿಗೆ ತಡೆಗಟ್ಟಬೇಕು. ನಿರ್ದಿಷ್ಟ ಪ್ರಮಾಣವನ್ನಾದರೂ ಗೊತ್ತುಮಾಡಿ ಅಷ್ಟನ್ನು ಸಾಗಿಸಲು ಅವಕಾಶ ಕೊಡಬಹುದು. ಸರ್ಕಾರದವರು ಅನೇಕ ವರ್ಷಗಳಿಂದ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಅವರ ಕಾರ್ಯಕ್ರಮ ಎಷ್ಟು ಯಶಸ್ವಿಯಾಗಿದೆಯೆಂದರೆ ಬರೀ ಪ್ರಚಾರ ಮಾಡುವುದು ಮಾತ್ರ ಯಶಸ್ವಿಯಾಗಿದೆಯೆಂದು ಹೇಳಬಹುದು.

ಆಹಾರವನ್ನು ಬೆಳೆಯುವುದಕ್ಕಾಗಿ ಪ್ರತಿವರ್ಷ ಸರ್ಕಾರದವರು ಜಮೀನನ್ನು ಹಂಚುತ್ತಿದ್ದಾರೆ. ಜಮೀನು ಆಬಾದಿಗೆ ತರಲು ಹಣ ಸಹಾಯವಿದೆ. ಆದರೆ ಪ್ರಭಾವವಿರುವ ಜನರಿಗೆ ಮಾತ್ರ ಸರ್ಕಾರದಿಂದ ಅನುಕೂಲವಾಗುತ್ತಿದೆಯೇ ಹೊರತು ಇತರರಿಗೆ ಆಗುತ್ತಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹೆಚ್ಚು ಆಹಾರ ಬೆಳೆಯುವುದಕ್ಕೆ ಸಾಲಕೊಡುವುದು ಸರಿಯಾಗಿ ರೈತರ ಕೈಗೆ ಹೋಗುತ್ತಿಲ್ಲ. ಇದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೂ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಮುಂದಾದರೂ ತೆಗೆದುಕೊಳ್ಳಬೇಕೆಂಬುದು ನನ್ನ ವಿನಂತಿ. ಆಹಾರ ಬೆಳೆಯುವ ಭೂಮಿಯ ವಿಸ್ತೀರ್ಣವನ್ನು ಹೆಚ್ಚಿಸಬೇಕೆಂದು ಸರ್ಕಾರದ ಒಂದು ಉದ್ದೇಶವಿದೆ. ಇದಕ್ಕಾಗಿ ಒಂದು ನಿರ್ದಿಷ್ಟ ಕ್ರಮ ಸರ್ಕಾರ ಕೈಕೊಂಡಿದೆ. ಪ್ರತಿ ವರ್ಷ ಸಾಗುವಳಿಯಾಗದೇ ಇರತಕ್ಕ ಒಂದು ಸಾವಿರ ಎಕರೆ ಭೂಮಿಯನ್ನು ಸಾಗುವಳಿಗೆ ತರತಕ್ಕ ಒಂದು ಕಾರ್ಯಕ್ರಮ ಕೈಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ಉದಾಸೀನ ಮಾಡದೆ ಮುಂದುವರಿಸಬೇಕೆಂದು ನನ್ನ ವಿನಂತಿ ಇದೆ. ಹಲ್ಲು ಇದ್ದವನಿಗೆ ತಿನ್ನುವುದಕ್ಕೆ ಕಡಲೆಯಿಲ್ಲ, ಕಡಲೆ ಇದ್ದವನಿಗೆ ಹಲ್ಲು ಇಲ್ಲ ಎಂಬಂತೆ ಪರಿಸ್ಥಿತಿಯು ಇದೆ. ಭೂಮಿಯಿದ್ದವನಿಗೆ ಸಹಾಯ ದೊರೆಯುತ್ತಿಲ್ಲ. ದುಡಿಯುವವನಿಗೆ ಸರ್ಕಾರದ ಪ್ರೋತ್ಸಾಹವಿಲ್ಲ, ಪ್ರಭಾವ ಬೀರುವ ವ್ಯಕ್ತಿಗಳು ಸರ್ಕಾರದ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಆದರೆ ಬಡವರಿಗೆ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಸ್ಥಳೀಯ ಅಧಿಕಾರಿಗಳಲ್ಲಿಯೂ ಸಹ ತಾತ್ಸಾರ ಮನೋಭಾವನೆ ಇದೆ. ಸರ್ಕಾರದಿಂದ ಸಾಲ ಪಡೆಯುವುದಕ್ಕೆ ಹಳ್ಳಿಯಿಂದ ರೈತನು ಕಚೇರಿಗೆ ಬರಬೇಕು. ಅಧಿಕಾರಿಗಳ ತಾತ್ಸಾರ ಮನೋಭಾವನೆಯ ಮೂಲಕ ನೂರು ರೂಪಾಯಿ ಸಾಲತೆಗೆದುಕೊಳ್ಳಲು ಬಂದರೆ ಅವನಿಗೆ 80 ರೂಪಾಯಿ ಅಷ್ಟೇ ಸಿಕ್ಕುತ್ತದೆ. 20 ರೂಪಾಯಿ ಅವನ ಕೈಬಿಡುತ್ತದೆ. ಈ ರೀತಿಯಾಗುವುದನ್ನು ತಡೆಗಟ್ಟುವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ಇನ್ನು ಬಂಜರು ಭೂಮಿಯನ್ನು ಹಂಚುವ ಒಂದು ನೀತಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ವ್ಯವಸಾಯ ಮಾಡುವವನಿಗೆ ಭೂಮಿಯಿಲ್ಲ. ಪ್ರಭಾವ ಬೀರುವ ವ್ಯಕ್ತಿಗೆ ಸಾವಿರಾರು ಎಕರೆ ಭೂಮಿ ಕೊಡುತ್ತಾರೆ. ಹಿಂದುಳಿದ ಜನರಾದ ಹರಿಜನರು ಭೂಮಿ ಕೊಡಬೇಕೆಂದು ಕೇಳುತ್ತಾರೆ. ಆದರೆ ಹರಿಜನರಿಗೆ ಭೂಮಿ ಸಿಕ್ಕುವುದು ಬಹಳ ಕಷ್ಟವಾಗಿದೆ. ಈ ವಿಷಯ ಕಂದಾಯ ಮಂತ್ರಿಗಳಿಗೂ ಸಹ ಗೊತ್ತಿದೆ. ನಮ್ಮ ಜಿಲ್ಲೆಯಲ್ಲಿಯ ಶಿವಮೊಗ್ಗಾ ಷುಗರ್ ಕಂಪನಿಗೆ ಐದು ಸಾವಿರ ಎಕರೆ ಭೂಮಿ ಕೊಟ್ಟಿದ್ದಾರೆ. ಇದು ಯಾವ ನ್ಯಾಯ! ಇದನ್ನು ಖಂಡಿತವಾಗಿ ವಿಮರ್ಶೆ ಮಾಡಬೇಕು. ಐದು ಸಾವಿರ ಎಕರೆ ಭೂಮಿಯನ್ನು ಏತಕ್ಕಾಗಿ ಕೊಟ್ಟಿದ್ದಾರೆ! ಮಂಡ್ಯದ ಸಕ್ಕರೆ ಕಾರ್ಖಾನೆಗೆ ಎರಡು ಸಾವಿರ ಎಕರೆಯಷ್ಟು ಭೂಮಿಯಿದೆ. ಕಾರ್ಖಾನೆ ನಡೆಯುತ್ತಿದೆ. ಶಿವಮೊಗ್ಗಾದ ಕಾರ್ಖಾನೆಗೆ ಐದು ಸಾವಿರ ಎಕರೆ ಕೊಡುವುದು ಇದು ಯಾವ ಧರ್ಮ! ಯಾವ ನೀತಿ? ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ಎಂಬುದು ಆ ಪರಮಾತ್ಮನೊಬ್ಬನಿಗೇ ಗೊತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಭಾವಶಾಲಿ ವ್ಯಕ್ತಿಗಳಿಗೆ ಕೊಟ್ಟದ್ದು ಅಕ್ಷಮ್ಯ ಅಪರಾಧ. ಅನ್ಯಾಯವಾದದ್ದನ್ನು ಸರಿಪಡಿಸಬೇಕು. ಅದನ್ನು ಸಾವಿರಾರು ಬಡ ರೈತರಿಗೆ ಕೊಡಬೇಕು.

ಇನ್ನು ಆಹಾರಧಾನ್ಯಗಳ ಬೆಲೆ ಏರುವುದನ್ನು ತಡೆಗಟ್ಟಬೇಕು. ಸಾಗುವಳಿಯಾಗದೇ ಇರತಕ್ಕಂಥ ಬಂಜರು ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಅದನ್ನು ಬಡ ರೈತರಿಗೆ ಹಂಚಿ ಕೊಡಬೇಕು. ರೈತರಿಗೆ ವ್ಯವಸಾಯದಲ್ಲಿ ಬೇಕಾಗತಕ್ಕ ಗೊಬ್ಬರ ಕಬ್ಬಿಣ ಸಾಮಾನು ಬೀಜ ಮುಂತಾದವುಗಳನ್ನು ಸಕಾಲದಲ್ಲಿ ಕೊಡತಕ್ಕ ಏರ್ಪಾಡು ಮಾಡಬೇಕು. ರೈತರಿಗೆ ಕೊಡತಕ್ಕ ಸಾಲ ಸುಲಭವಾಗಿ ಕೂಡಲೇ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಬೇಕು. ಈ ನನ್ನ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅವಶ್ಯವಿರುವ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಭಾಷಣ ಮುಗಿಸುತ್ತೇನೆ.

Mr. CHAIRMAN.—I call upon Sri Thalwalkar to speak. I request the member to conclude his speech within ten minutes.

[Sri S. P. THALWALKAR.—began his speech in Marathi].

Sri J. B. MALLARADHYA.—I want somebody to translate it, Sir.

Mr. CHAIRMAN.—I think there is no provision in the rules. Therefore I cannot help. The other members may interpret.

Sri K. HANUMANTHAIYA.—There is provision in the electrical system.

Mr. CHAIRMAN.—I think that is not functioning.

Sri K. HANUMANTHAIYA.—It can function even now.

Mr. CHAIRMAN.—The Chair will take it into consideration hereafter.

[Sri S. P. THALWALKAR spoke in Marathi].

4 P.M.

*ಶ್ರೀ ರಾಮಕೃಷ್ಣ ಹೆಗಡೆ (ಸಿರಸಿ).—ಸ್ವಾಮಿ, ನಿನ್ನೆಯಿಂದ ಚರ್ಚೆ ಆಗುತ್ತಾ ಇರುವ ಆಹಾರ ಸಮಸ್ಯೆ ವಿಷಯದಮೇಲೆ ನನಗೆ ತಿಳಿದ ನಾಲ್ಕು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಶಹರದಲ್ಲಿ ಅನೇಕ ಕಡೆಗಳಲ್ಲಿ ಈ ಆಹಾರದ ಸಮಸ್ಯೆಯ ಮೇಲೆ ವಿವಿಧವಾಗಿ ಚರ್ಚೆ ಆಗುತ್ತ ಇದೆ. ಈ ಅಸೆಂಬ್ಲಿಯಲ್ಲೂ ಕೂಡ ಈ ಎರಡು ದಿನ ನಡೆದಂಥ

ಚರ್ಚೆ ಜನಗಳಿಗೆ ಪ್ರತ್ಯಕ್ಷವಾಗಿ ಯಾವುದೋ ಒಂದು ಮಾರ್ಗದರ್ಶನ ಮಾಡುವುದು ಹೇಗೆಯೇ ಇರಲೀ, ಸರ್ಕಾರಕ್ಕೆ ಒಂದು ಹೊಸ ದಾರಿ ಸೂಚನೆ ಮಾಡುವುದರಲ್ಲಿ ಯಶಸ್ವಿಯಾಗುತ್ತದೆ ಎಂದು ನಾನು ತಿಳಿದಿದ್ದೇನೆ. ಆಹಾರ ಉತ್ಪಾದನೆ ಮಾಡಬೇಕು ಎನ್ನುವ ವಿಷಯದಲ್ಲಿ ಯಾರಿಗೂ ಮತಭೇದವಿಲ್ಲ. ಕಳೆದ ಹತ್ತು ವರ್ಷಗಳಿಂದಲೂ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರಗಳು ಅನೇಕ ಬಗೆಯಿಂದ ಈ ವಿಷಯದಲ್ಲಿ ಪ್ರಯತ್ನ ಮಾಡುತ್ತಲೇ ಇವೆ. ಈ ಪ್ರಯತ್ನ ಇನ್ನುವರೆಗೂ ಸಂಪೂರ್ಣ ಯಶಸ್ವಿಯಾಗಿಲ್ಲ. ಮತ್ತು ನಮ್ಮ ದೇಶ ಆಹಾರದ ವಿಷಯದಲ್ಲಿ ಇನ್ನೂ ಸ್ವಾವಲಂಬನೆಯನ್ನು ಪಡೆದಿಲ್ಲ ಎಂಬುದು ನಮ್ಮೆಲ್ಲರ ಒಂದು ಅನುಭವದ ವಿಷಯವಾಗಿದೆ. ಆದರೆ ಕೇವಲ ಪ್ರತಿ ವರ್ಷ ಹೆಚ್ಚಾಗುತ್ತಾ ಇರುವ ಜನಸಂಖ್ಯೆಯ ಕಾರಣದಿಂದಲೇ ಈ ಆಹಾರ ಸಮಸ್ಯೆಯನ್ನು ಬಗೆಹರಿಸಲು ಆಗಿಲ್ಲ ಎಂದು ಹೇಳುವುದು ಅಷ್ಟೇನೂ ಸರಿಯಲ್ಲ. ಆಹಾರ ಬೆಳೆಯುವವರು ಹಳ್ಳಿಗಳಲ್ಲಿ ವಾಸ ಮಾಡುವಂಥ ಕೋಟ್ಯಾನುಕೋಟಿ ರೈತರು. ಈ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಮೊಟ್ಟಮೊದಲು ಆ ರೈತರಿಗೆ ಇರತಕ್ಕ ಸಮಸ್ಯೆಯನ್ನು ಬಗೆಹರಿಸಬೇಕಾದದ್ದು ಅತ್ಯಂತ ಅವಶ್ಯಕ. ರೈತರಿಗೆ ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೀಜ, ಆರ್ಥಿಕ ನೆರವು, ಸಾಧನೆ ಮತ್ತು ಸಲಕರಣೆಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯ ಮತ್ತು ಆ ಬಗ್ಗೆ ಯಾವ ರೀತಿ ಸರ್ಕಾರ ಇನ್ನೂ ತೃಪ್ತಿಕರವಾದ ಕೆಲಸವನ್ನು ಮಾಡಬೇಕೆನ್ನುವ ವಿಷಯದಲ್ಲಿ ಅನೇಕ ಸದಸ್ಯರು ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಇನ್ನೊಂದು ವಿಷಯಕ್ಕೆ ತಮ್ಮ ಮುಖಾಂತರ ಸರ್ಕಾರದ ಮತ್ತು ಇನ್ನಿತರರ ಗಮನವನ್ನು ಸೆಳೆಯಲು ಬಯಸುತ್ತೇನೆ. ಅದೇನೆಂದರೆ ರೈತರ ಆರ್ಥಿಕ ಪರಿಸ್ಥಿತಿ. ರೈತನಿಗೆ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಯಾವಾಗ ಸಾಧ್ಯವಾಗುತ್ತದೆ ಎಂದರೆ ಅವನಲ್ಲಿ ಒಂದು ಆರ್ಥಿಕ ಚೈತನ್ಯವುಂಟಾಗಬೇಕು ಮತ್ತು ಅವನ ಕೆಲಸದಲ್ಲಿ ಅವನಿಗೆ ಹೆಚ್ಚಿನ ಆಸಕ್ತಿ ಬೆಳೆಯಬೇಕು. ಇನ್ನು ನಾವು ಈ ಭೂಸುಧಾರಣೆಯ ಕಾಯಿದೆಯನ್ನು ತರುವುದರಲ್ಲಿದ್ದರೂ ಕೂಡ ಈ ಕಾಯಿದೆ ಈಗಾಗಲೇ ಒಂದು ಒಂದೂವರೆ ವರ್ಷದಿಂದಲೂ ಕೂಡ ಅನೇಕ ಬಗೆಯ ಚರ್ಚೆಗೆ ಒಳಗಾಗಿದೆ. ನಾಳೆ ಕಾಯಿದೆ ಆಗಿ ರೈತನು ಬೆವರನ್ನು ಸುರಿಸಿ ಖುದ್ದು ದುಡಿಯಬೇಕಾದರೂ ಕೂಡ ಅವನಿಗೆ ಜಮೀನಿನಲ್ಲಿ ಯಾವುದಾದರೂ ಒಂದು ರೀತಿಯ ಆಸಕ್ತಿ ಇರಬೇಕು. ಅದು ಇಲ್ಲದೇ ಇದ್ದರೆ ಯಾರದೋ ಭೂಮಿ, ಯಾರದೋ ಶ್ರಮ, ಯಾರೋ ಬೆಳೆ ತೆಗೆದುಕೊಳ್ಳುತ್ತಾರೆ ಎನ್ನುವುದು ಸಾಮಾಜಿಕ ತತ್ವವಾಗುತ್ತದೆ. ಅದು ಸಾಮಾಜಿಕ ಬೆಳವಣಿಗೆಗೆ ವಿರೋಧವಾದ ಮಾತು. ಆದುದರಿಂದ ಈ ಆಹಾರ ಸಮಸ್ಯೆಯನ್ನು ನಿಜವಾಗಿಯೂ ಬಗೆಹರಿಸಬೇಕಾದರೆ ಮೊಟ್ಟಮೊದಲು ಭೂಸಮಸ್ಯೆಯನ್ನು ಬಿಡಿಸಬೇಕು. ಎಷ್ಟು ಶೀಘ್ರವಾಗಿ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಯೋ, ಕಾರ್ಯಗತ ಮಾಡುತ್ತೇವೆಯೋ ಅಷ್ಟೂ ಶೀಘ್ರವಾಗಿ ಆಹಾರ ಸಮಸ್ಯೆ ಬಗೆಹರಿಯುತ್ತದೆ ಎಂದು ಆಶೆ ಮಾಡುತ್ತೇನೆ.

ಶ್ರೀ ಎಂ. ಸಿ. ನರಸಿಂಹನ್.—ಎಂದರೆ ಶ್ರೀಘ್ರವಾಗಿ ಆಗಿಲ್ಲ, ಆಗುವ ಭರವಸೆ ಇಲ್ಲ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾಡಬೇಕೆಂದು ನನ್ನ ಸೂಚನೆ, ಅದಕ್ಕೆ ತಮ್ಮ ಬೆಂಬಲ ಕೊಡುತ್ತೀರೆಂದು ನನ್ನ ನಂಬಿಕೆ.

ಇನ್ನೊಂದು ವಿಷಯ ಏನೆಂದರೆ ನಮ್ಮ ದೇಶದಲ್ಲಿ ಭೂಮಿಯ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗಿದೆ. ಕೆಲವು ಕಡೆ ಅಂದರೆ ಮೈದಾನ ಪ್ರದೇಶದಲ್ಲಿ ಭೂಮಿಯ ಬಗ್ಗೆ ಜನರಿಂದ ಹಾಹಾಕಾರ ಬರುತ್ತಿದೆ; ಅವರು ಸಾಗು ಮಾಡಲಿಕ್ಕೆ ಒಂದು ಕುಟುಂಬಕ್ಕೆ ಸಾಕಷ್ಟು ಭೂಮಿ ಇರುವುದಿಲ್ಲ ಎಂದು ಹೇಳುತ್ತಾರೆ. ಅದೇ ಮತ್ತೊಂದು ಪ್ರದೇಶ ತೆಗೆದುಕೊಂಡರೆ ಮಲೆನಾಡಿನಲ್ಲಿ ಅಪಾರವಾದ ಕ್ಷೇತ್ರ ಸಾಗುವಳಿಗೆ ಯೋಗ್ಯವಾದ್ದದು, ಫಲವತ್ತಾದ ಕ್ಷೇತ್ರ ಸಾಗುವಳಿ ಆಗದೆ ಬಿದ್ದಿದೆ. ಈ ಸಮಸ್ಯೆಯನ್ನು ಸರ್ಕಾರದವರು ಸ್ವಲ್ಪ ಹೆಚ್ಚು ಗಂಭೀರವಾಗಿ ಯೋಚನೆ ಮಾಡಬೇಕು. ನಾನು ನಮ್ಮದೇ ಒಂದು ಜಿಲ್ಲೆಯ ಉದಾಹರಣೆ ಕೊಡಬಯಸುತ್ತೇನೆ. ಇದು ಇನ್ನೂ ಅನೇಕ ಮಲೆನಾಡಿನ ಜಿಲ್ಲೆಗಳಿಗೂ ಅನ್ವಯಿಸುತ್ತದೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ 100ರಲ್ಲಿ 83ರಷ್ಟು ಭೂಮಿ ಅರಣ್ಯ ಪ್ರದೇಶ, ಇದನ್ನು ಮಾನ್ಯ ಸಚಿವರಾದ ಶ್ರೀಮಾನ್ ಪಾಟೀಲ್ ಅವರು ಬಹಳ ಚೆನ್ನಾಗಿ ಬಲ್ಲರು. ಅವರಿಗೆ ಹಿಂದೆ ಮುಂಬೈ ರಾಜ್ಯದಲ್ಲೂ ಕೂಡ ಇದೇ ಸಂಬಂಧದಲ್ಲಿ ಪೋರ್ಟ್‌ಫೋಲಿಯೋ ಇತ್ತು. ಈ ವಿಷಯವನ್ನು ಅವರು ಚೆನ್ನಾಗಿ ಅರಿತಿದ್ದಾರೆ. ಯಾವ ಜಿಲ್ಲೆಯಲ್ಲಿ ಶೇಕಡ 85 ರಷ್ಟು ಅರಣ್ಯ ಇದೆ, ಆ ಜಿಲ್ಲೆಯಲ್ಲಿ ಮತ್ತು ಎಲ್ಲಿ ಅಪಾರವಾದ ಕ್ಷೇತ್ರ ಸಾಗುವಳಿಗೆ ಯೋಗ್ಯವಾದದ್ದು ಸಿಕ್ಕುತ್ತದೆ ಅದನ್ನು ಆದಷ್ಟು ಶೀಘ್ರವಾಗಿ ಸಾಗುವಳಿಗೆ ತರಲಿಕ್ಕೆ ಪ್ರಯತ್ನ ಮಾಡಬೇಕು. ನಾನು ಅರಣ್ಯದ ಮಹತ್ವವನ್ನು ತಿಳಿದಂಥ ಮನುಷ್ಯ. ಈ ಅರಣ್ಯ ರಾಷ್ಟ್ರದ ಒಂದು ಮಹತ್ತರವಾದ ಆಸ್ತಿ; ಅದರಿಂದ ಅಪಾರವಾದ ಉತ್ಪನ್ನ ಬರುತ್ತಾ ಇದೆ. ಈ ಅರಣ್ಯದಲ್ಲಿ ರಿಸರ್ವ್ ಫಾರೆಸ್ಟ್, ever green forest ಎಂದು ಹೇಳಿ ಮೂರು–ನಾಲ್ಕು ವಿಧ ಇದೆ. ನಮ್ಮ ಜಿಲ್ಲೆಯಲ್ಲಿ ರೈತರ ಸಂಕಷ್ಟ ಅದರಲ್ಲೂ ಈ ಅರಣ್ಯದ ಸಂಬಂಧದಲ್ಲಂತೂ ಬಹಳ ಅಪಾರವಾಗಿದೆ. ನಮ್ಮ ಜಿಲ್ಲೆಯಲ್ಲಿ ಅವರು ಈಗ ಸಾಗುಮಾಡುತ್ತಾ ಇರುವಂಥ ಭೂಮಿ ಅರಣ್ಯಕ್ಕೆ ಹೊಂದಿಕೊಂಡಿರುತ್ತದೆ. ಅರಣ್ಯಕ್ಕೆ ಹೊಂದಿಕೊಂಡಿರುವಾಗ ಕಾಡುಮೃಗಗಳಿಂದ ತಮ್ಮ ಫಸಲನ್ನು ರಕ್ಷಣೆ ಮಾಡಲಿಕ್ಕೆ ಏನಾದರೂ ಬೇಲಿ ಕಟ್ಟಿದ್ದರೆ ಫಾರೆಸ್ಟ್ ಇಲಾಖೆಯವರು ಬಂದು ಅದನ್ನು ಕಿತ್ತುಹಾಕುವುದಲ್ಲದೆ ಅವರಿಗೆ ತೊಂದರೆ ಕೊಡುತ್ತಾರೆ, ಶಿಕ್ಷೆ ಮಾಡುತ್ತಾರೆ. ಅಷ್ಟೇ ಅಲ್ಲ, ಸ್ವಲ್ಪ ಜಾಗ ಅವರಿಗೆ ಸೇರಿದ್ದು ಇದ್ದರೆ ಅದರ ಜೊತೆಗೆ ಇನ್ನಷ್ಟು ಸೇರಿಸಿಕೊಂಡುಬಿಟ್ಟು, ರೈತರು ಕೇಳಿದರೆ ಅರ್ಜಿ ಹಾಕಿ ಎಂದು ಹೇಳುತ್ತಾರೆ. ಅರ್ಜಿ ಹಾಕಿ ತೆಗೆದುಕೊಳ್ಳಬೇಕೆಂದರೆ ಅರ್ಜಿಗೆ ತೀರ್ಮಾನವೇ ಸಿಕ್ಕುವುದಿಲ್ಲ. ಅನೇಕ ಕಡೆ ಬೆಳೆದಂಥ ಕಬ್ಬಿನ ಪೀಕು, ಬತ್ತದ ಪೀಕನ್ನು ಸಹ ಅರಣ್ಯ ಖಾತೆಯವರು ನಷ್ಟಮಾಡಿದ್ದಾರೆ. ಆಹಾರಾಭಾವದ ಇಂಥ ಒಂದು ಕಾಲದಲ್ಲಿ ಬೆಳೆದ ಪೀಕನ್ನು ನಷ್ಟಮಾಡುವುದು ರಾಷ್ಟ್ರೀಯ ಅಪರಾಧ ಎಂದು ನಾನು ತಿಳಿಯುತ್ತೇನೆ. ಕೆಲವು ಕಾಲದ ಹಿಂದೆ ಎಂದರೆ ಸುಮಾರು ಎಂಟು ತಿಂಗಳ ಹಿಂದೆ ಸರ್ಕಾರದವರು ರೈತರಿಗೆ ಅರಣ್ಯಕ್ಕೆ ಸಂಬಂಧಿಸಿದಂತಹ ಅನೇಕ ಸೌಲಭ್ಯಗಳನ್ನು ಕೊಟ್ಟು ಒಂದು ಆರ್ಡರನ್ನು ಹೊರಡಿಸಿದ್ದರು. ಇನ್ನುವರೆಗೂ ಆ ಆರ್ಡರ್ ಪ್ರಕಾರ ಸೌಲಭ್ಯಗಳು ಕಾರ್ಯಗತವಾಗಿಲ್ಲ. ಅನೇಕ ಕಡೆ ಬೆಳೆದಂಥ ಫಸಲನ್ನು ಕಿತ್ತುಹಾಕುತ್ತಾ ಇದ್ದಾರೆ. ಕಟ್ಟಿದ ಮನೆಗಳನ್ನು ಕಿತ್ತುಹಾಕುತ್ತಾ ಇದ್ದಾರೆ. ಆಹಾರ, ವ್ಯವಸಾಯ ಮತ್ತು ಫಾರೆಸ್ಟು ಈ ಮೂರಕ್ಕೂ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಒಬ್ಬರೇ ಮಂತ್ರಿಗಳಿರುವುದು ನಿಜವಾಗಿಯೂ ಒಂದು ದೃಷ್ಟಿಯಿಂದ ಒಳ್ಳೆಯದು. ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳು, ಆಹಾರ ಉತ್ಪಾದನೆಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು, ಯಾವಾಗಲೂ ಒಬ್ಬರಿಗೊಬ್ಬರು ಜಗಳ ವಾಡುತ್ತಲೇ ಇರುತ್ತಾರೆ ಎಂದು ನಮ್ಮ ಮಂತ್ರಿಗಳಿಗೆ ಗೊತ್ತು. ಆದುದರಿಂದ ಮೊಟ್ಟಮೊದಲು ನಾನು ತಮ್ಮ ಮೂಲಕ ಸರ್ಕಾರಕ್ಕೆ ಬಿನ್ನೈಸಿಕೊಳ್ಳುವುದೇನೆಂದರೆ ಅರಣ್ಯ ಪ್ರದೇಶದಲ್ಲಿ ನಕಾಶೆಯಲ್ಲಿ ಅರಣ್ಯವೆಂದಿರುತ್ತದೆಯೋ ಹೊರತು ನಿಜವಾಗಿ ಅರಣ್ಯವಿರುವುದಿಲ್ಲ–ಎಲ್ಲೆಲ್ಲಿ ಭೂಮಿಯು ಸಾಗುವಳಿಗೆ ಅನುಕೂಲವಾಗಿದೆಯೋ ಅದನ್ನು ಮೊದಲು ಅರಣ್ಯದಿಂದ ಪ್ರತ್ಯೇಕಿಸಿ ಸಾಗುವಳಿಗೆ ಕೊಡಬೇಕು.

ಅಧ್ಯಕ್ಷರು ಕೊಟ್ಟಿರುವ ಅವಧಿಯಲ್ಲಿ ನನ್ನ ಮಾತನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತ ಮತ್ತೊಂದು ಸೂಚನೆಯನ್ನು ಮಾಡುತ್ತೇನೆ. ಮಾನ್ಯ ಸ್ನೇಹಿತರು ಈಗಾಗಲೇ ಅನೇಕ ಸೂಕ್ತವಾದ ಸಲಹೆಗಳನ್ನು ಆಹಾರೋತ್ಪಾದನೆಯ ಬಗ್ಗೆ ಮಾಡಿದ್ದಾರೆ. ಇಲ್ಲಿ ಸೇರಿದಂಥ ಮಾನ್ಯ ಸದಸ್ಯರಲ್ಲಿ ಅನೇಕರು ಸ್ವತಃ ರೈತರಿರಬಹುದು ಅಥವ ಅವರಿಗೆ ಜಮೀನಿರಬಹುದು. ಇಂಥವರು ಇತರರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆಂದು ತಮ್ಮ ಮೂಲಕ ಬಿನ್ನೈಸಿಕೊಳ್ಳುತ್ತೇನೆ. ಪ್ರತಿಯೊಬ್ಬ ಸದಸ್ಯರೂ ತಮ್ಮ ಜಮೀನಿನಲ್ಲಿ ಆದಷ್ಟು ಹೆಚ್ಚಿಗೆ, ಎಷ್ಟು ಶಕ್ಯವಿದೆಯೋ ಅಷ್ಟು ಆಹಾರವನ್ನು ಉತ್ಪಾದನೆಮಾಡಿ ತೋರಿಸಬೇಕು. ಪ್ರತಿಯೊಬ್ಬರೂ ಜಪಾನ್ ಪದ್ಧತಿಯಿಂದ ವ್ಯವಸಾಯಮಾಡುವುದರಿಂದ, ಆಧುನಿಕ ಸಲಕರಣೆಗಳನ್ನು ಉಪಯೋಗಿಸುವುದರಿಂದ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ಬೇರೆಯವರಿಗೆ ಮಾರ್ಗದರ್ಶನ ಮಾಡಬೇಕು.

ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್‌ಗಳು ಅನೇಕವಿವೆ. ಅವುಗಳಲ್ಲಿ ವಿಶೇಷ ಪ್ರಾಧಾನ್ಯತೆಯನ್ನು ಆಹಾರೋತ್ಪಾದನೆ ವಿಷಯಕ್ಕೆ ಕೊಡುತ್ತಿದ್ದಾರೆ. ಇದನ್ನು ತೀವ್ರಗತಿಯಿಂದ ಮಾಡಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ರೈತಾಪಿಜನರಿಗೆ ಅನೇಕ ರೀತಿಯ ಸಹಾಯವನ್ನೊದಗಿಸಿ ಹೆಚ್ಚು ಉತ್ಪಾದನೆ ಮಾಡಲಿಕ್ಕೆ ಪ್ರೋತ್ಸಾಹ ಕೊಡಬೇಕು. ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್‌ಗಳಿರುವಂಥ ತಾಲ್ಲೂಕುಗಳಲ್ಲಿ ಈ ಕೆಲಸ ಚೆನ್ನಾಗಿ ಆದರೆ ಉಳಿದ ತಾಲ್ಲೂಕುಗಳವರಿಗೆ ಅದರಿಂದ ಉತ್ತೇಜನ ಸಿಕ್ಕುತ್ತದೆ, ಪ್ರೋತ್ಸಾಹ ಸಿಕ್ಕುತ್ತದೆ, ಮಾರ್ಗದರ್ಶನ ಸಿಕ್ಕುತ್ತದೆ ಎಂದು ತಿಳಿಯುತ್ತೇನೆ.

ಅದರಂತೆಯೇ ಸಲಕರಣೆ, ಬೀಜ, ಗೊಬ್ಬರ ಇವುಗಳವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. ಅನೇಕರು ಈ ಬಗ್ಗೆ ತಮ್ಮ ತಮ್ಮ ಸೂಚನೆಗಳನ್ನು ಕೊಟ್ಟಿದ್ದಾರೆ. ಎಲ್ಲ ಕಡೆಗಳಿಂದಲೂ ದೂರುಗಳು ಬರುತ್ತವೆ. ಇವು ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ಸಿಕ್ಕುತ್ತಿಲ್ಲ. ಸಿಕ್ಕಿದರೂಕೂಡ ಸಮಯಕ್ಕೆ ಸರಿಯಾಗಿ ಸಿಕ್ಕುತ್ತಿಲ್ಲ. ಬಿತ್ತನೆಕಾಲ ಕಳೆದಮೇಲೆ ಬೀಜ ಸಿಕ್ಕಿದರೆ ರೈತ ಏನು ಮಾಡುವುದಕ್ಕಾಗುತ್ತದೆ? ಅದರಿಂದ ಏನೂ ಸಫಲವಾಗುವುದಿಲ್ಲ. ಎಷ್ಟೇ ಸಫ್ಲೈ ಇರಲಿ, ಅದನ್ನು ನಮ್ಮ ಅಧಿಕಾರಿಗಳು ಸಮಯಕ್ಕೆ ರೈತನಿಗೆ ಮುಟ್ಟುವಂತೆ ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ಮಾಡಿದರೆ ಆಹಾರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾದೀತು ಎಂದು ನನ್ನ ನಮ್ರ ಸೂಚನೆಯನ್ನು ಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಸ್ವಾಮಿ, ನಿನ್ನೆಯಿಂದ ಆಹಾರ ಸಮಸ್ಯೆಬಗ್ಗೆ ಮಾತನಾಡಿದ ಅನೇಕ ಮಿತ್ರರು ಕೆಲವು ಅಂಕಿ ಅಂಶಗಳನ್ನು ನಮ್ಮ ಮುಂದೆ ಇಟ್ಟರು. ಸರ್ಕಾರದವರೂ ಕೆಲವು ಅಂಕಿ ಸಂಖ್ಯೆಗಳನ್ನು ನಮ್ಮಮುಂದೆ ಇಟ್ಟಿದ್ದಾರೆ. ಪ್ಲಾನಿಂಗ್ ಕಮಿಷನ್‌ನವರು ಕೊಟ್ಟಿರುವ ಮತ್ತು ಮೈಸೂರು ವಾಣಿ ಮುಂತಾದ ಪತ್ರಿಕೆಗಳಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನಮ್ಮಮುಂದೆ ಇಟ್ಟಿದ್ದಾರೆ. ಈ ಅಂಕಿ ಅಂಶಗಳು ಹೇಗೆ ಉದ್ಭವಿಸಿದುವು ಎಂದು ನೋಡಿದರೆ ಇವು ಕಚೇರಿಗಳಲ್ಲಿ ಉದ್ಭವಿಸಿದುವೇ ವಿನಾ ವಸ್ತುತಃ ಅಷ್ಟು ಆಹಾರ ಬೆಳೆದಿದೆಯೇ ಎಂದರೆ ಇಲ್ಲವೆಂದೆನಿಸುತ್ತದೆ. ನಾನು ಈ ವ್ಯವಸಾಯದ ಅಂಕಿ ಅಂಶಗಳನ್ನು ಹೋಲಿಕೆಮಾಡಿ ನೋಡಿದ್ದರಲ್ಲಿ ಬೇಕಾದಷ್ಟು ವ್ಯತ್ಯಾಸಗಳು ಕಂಡುಬಂದಿವೆ. ಅನೇಕರು ಅಮೇರಿಕಾದಲ್ಲಿ ಹಾಗಿದೆ, ರಷ್ಯಾದಲ್ಲಿ ಹಾಗಿದೆ, ಜಪಾನ್ ಮತ್ತು ಚೈನಾ ದೇಶದಲ್ಲಿ ಹೀಗಿದೆ ಕೇರಳದಲ್ಲಿ ಹೀಗಿದೆ ಎಂದು ನಮ್ಮನ್ನು ತೆಗೆದುಕೊಂಡುಹೋಗಿ ನಮಗೆ ಕಾಣದ್ದನ್ನು ತೋರಿಸಿದರೇ ವಿನಾ ನಮ್ಮಲ್ಲಿರತಕ್ಕ ಸ್ಥಿತಿಗತಿಗಳೇನು, ರೈತರ ಕಷ್ಟವೇನು, ಅದನ್ನೆಲ್ಲ ಹೇಗೆ ನಿವಾರಿಸಬೇಕು ಎಂಬುದನ್ನು ತಿಳಿಸಲಿಲ್ಲ.

ಕೈಗಾರಿಕೆಗೂ ಕೃಷಿಗೂ ಬಹಳ ವ್ಯತ್ಯಾಸವಿದೆ. ಕೈಗಾರಿಕೆಗಳಲ್ಲಿ ಇವೊತ್ತಿನ ದಿವಸ ಇತರ ದೇಶಗಳ ಹೋಲಿಕೆಯನ್ನು ಇಟ್ಟುಕೊಂಡರೆ ಹೊಂದಿಕೆಯಾಗಲಾರದು. ಆದರೆ ಕೃಷಿಯ ವಿಷಯದಲ್ಲಿ ಹಾಗಾಗಲಾರದು. ಏಕೆಂದರೆ ಕೃಷಿಮಾಡುವವರಿಗೆ ಅಮೆರಿಕಾ ದೇಶಕ್ಕೆ ಹೋಗುವುದಕ್ಕೆ ರಷ್ಯಾದೇಶಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿಯ ಸ್ಥಿತಿಗತಿಗಳಿಗೂ, ಇಲ್ಲಿಯ ಸ್ಥಿತಿಗತಿಗಳಿಗೂ ಬಹಳ ವ್ಯತ್ಯಾಸಗಳಿವೆ. 50-60 ವರ್ಷಗಳಿಂದ ಸ್ವಾತಂತ್ರ್ಯವನ್ನು ಪಡೆದು, ಅಲ್ಲಿಯ ಪರಿಸ್ಥಿತಿಯನ್ನು ಬದಲಾಯಿಸಿಕೊಂಡು, ಸ್ವಯಂಪರಿಪೂರ್ಣರಾಗಿ ನಮ್ಮ ದೇಶಕ್ಕೆ ಆಹಾರವನ್ನು ಕಳುಹಿಸುವ ಸ್ಥಿತಿಗೆ ಬಂದಿದ್ದಾರೆ. ಅವರ ಆರ್ಥಿಕ ವ್ಯವಸ್ಥೆಯೇ ಬೇರೆಯಾಗಿದೆ. ನಮ್ಮ ಆರ್ಥಿಕ ವ್ಯವಸ್ಥೆ ಬಹಳ ಕಷ್ಟವಾಗಿದೆ. ನಮಗೆ ಆ ದೇಶದ ರೀತಿಯಲ್ಲಿ ವ್ಯವಸಾಯ ಮಾಡಬೇಕೆಂದರೆ ಸದ್ಯಕ್ಕೆ ಸಾಧ್ಯವಿಲ್ಲ. ಕೆಲವರು ದೊಡ್ಡ ಜಮೀನ್ದಾರರಿರಬಹುದು, ಕೆಲವರು ಹಣವಂತರೂ, ಆರ್ಥಿಕಸ್ಥಿತಿಯಲ್ಲಿ ಉತ್ತಮವಾಗಿರತಕ್ಕವರೂ ಇರಬಹುದು. ಅಂಥವರಿಗೆ ಮಾತ್ರ ಇತರ ದೇಶದ ಪದ್ಧತಿಗಳು ಅನ್ವಯಿಸಬಹುದು. ನಮ್ಮಲ್ಲಿ ನೂರಕ್ಕೆ 80 ಜನ ಸಣ್ಣ ಸಣ್ಣ ರೈತಾಪಿಜನರಿದ್ದಾರೆ. ಇವರು ಅವಿದ್ಯಾವಂತರಾಗಿದ್ದಾರೆ. ಅವರಿಗೆ ಆಧುನಿಕ ರೀತಿಯ ವ್ಯವಸಾಯಪದ್ಧತಿಯನ್ನು ಅರಿತುಕೊಳ್ಳಬೇಕಾದರೆ ಬಹಳ ಕಷ್ಟವಿದೆ. ನಮ್ಮಿಂದ ಬೇಕಾದಷ್ಟು ದೇಶದ ಅಭಿವೃದ್ಧಿ ಪ್ರಚಾರ ನಡೆಯುತ್ತಿದೆ, ಡೆವಲಪ್‌ಮೆಂಟ್ ಬ್ಲಾಕ್‌ಗಳಲ್ಲಿ ಬೇಕಾದಷ್ಟು ವ್ಯವಸ್ಥೆ ಮಾಡಿದ್ದೇವೆ, ಬೇಕಾದಷ್ಟು ತಿಳಿಸುತ್ತಿದ್ದೇವೆಂದು ಹೇಳುತ್ತಾರೆ. ಇವು ಯಾವುವೂ ರೈತನಿಗೆ ಸಾಕಾದಷ್ಟು ಮುಟ್ಟಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಇತ್ತೀಚೆಗೆ ಅಮೆರಿಕದೇಶದಿಂದ ತರಿಸಿದ ಜೋಳವನ್ನು ಬೆಳೆದು ಕೆಲವುಕಡೆ ಪ್ರಯೋಗಗಳನ್ನು ಮಾಡಿ ನೋಡಿದವರು, ಅದನ್ನು ಏಕೆ

ಕೈಬಿಟ್ಟರೋ ಗೊತ್ತಿಲ್ಲ. ನಾನು ಪ್ರಯೋಗ ನಡೆಸಿದ್ದರಲ್ಲಿ ಒಂದು ಎಕರೆಗೆ 20 ಪಲ್ಲ ಬೆಳೆದಿದ್ದೇನೆ. ಕೆಲವು ಹಳ್ಳಿಗಳಲ್ಲಿ ಹೀಗೆ ಬೆಳೆ ಬಂದುದರಿಂದ ಸ್ವಯಂಪೂರ್ಣವಾಗಿವೆ. ಈ ವಿಷಯವನ್ನು ಒಂದು ಕಾಗದದಲ್ಲಿ ಬರೆದು ಸರ್ಕಾರಕ್ಕೆ ಮನವಿಮಾಡಿದೆ. ಆಹಾರ ಮಂತ್ರಿಗಳೂ ಡೈರೆಕ್ಟರೂ ಬಂದು ನೋಡಿಕೊಂಡು ಹೋದರು. ಆ ಬಗೆಯ ಬೀಜವನ್ನು ಕೊಂಡುಕೊಂಡು ಪ್ರಯೋಗಮಾಡಿ ನೋಡುತ್ತಾರೆಂದು ತಿಳಿದಿದ್ದೆ. ಆದರೆ ಅವರು ಏನು ಮಾಡಿದ್ದಾರೆಂದು ನನಗೆ ತಿಳಿಸಲಿಲ್ಲ ಮತ್ತು ಅವರು ಏನು ಮಾಡುತ್ತಾರೆನ್ನುವುದೂ ನನಗೆ ಗೊತ್ತಿಲ್ಲ. ಅಂತೂ ಬೀಜ ತೆಗೆದುಕೊಂಡು ಹೋಗಿರುವುದನ್ನು ಉಪಯೋಗಮಾಡಿ ನೋಡುತ್ತಾರೆಂಬ ನಂಬಿಕೆ ಇದೆ. ಇದರಿಂದಲೇ ನಾವು ತೃಪ್ತರಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗೆ ನಮ್ಮ ವ್ಯವಸಾಯಾಭಿವೃದ್ಧಿಯ ಅಂಕಿ ಅಂಶಗಳನ್ನು ನೋಡಿದರೆ ನಾವು ಪರಿಪೂರ್ಣರಾಗುವುದಕ್ಕೆ ಸಾಧ್ಯವಿಲ್ಲ. ಕಾಡುಗಳು ನಾಶವಾಗಿರುವ ಕಡೆ ಲಕ್ಷಾಂತರ ಎಕರೆಗಳ ಜಮೀನನ್ನು ಸಾಗುವಳಿಗೆ ತರದೆ ಇರುವುದೂ ಸಹ ಆಹಾರದ ಕೊರತೆಗೆ ಕಾರಣವಾಗಿದೆ ಎಂದು ಹೇಳಬಹುದು. ಭಾರಿಕಟ್ಟೆಗಳ ಮತ್ತು ಜಲಾಶಯ ಪ್ರದೇಶಗಳಲ್ಲಿ ಸಾವಿರಾರು ಎಕರೆಗಳ ಜಮೀನು ಸಾಗುವಳಿಯಾಗುತ್ತಿಲ್ಲ, ಅದನ್ನು ಕೊಡಿ, ಸಾಗುವಳಿ ಮಾಡುತ್ತೇವೆ ಎಂದರೆ ಅದಕ್ಕೆ ಗಮನ ಕೊಡುತ್ತಿಲ್ಲ; ಮತ್ತು ಸಾಗುವಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ವ್ಯವಸಾಯಗಾರನಿಗೆ ಸಾಗುವಳಿ ಮಾಡುವುದಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಳ್ಳಲು ಸಾಲದರೂಪದಲ್ಲಿ ಹಣವನ್ನು ಕೊಡುತ್ತಿದ್ದಾರೆ. ಇದು ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಸುತ್ತೇನೆ. ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ಹಂಚುತ್ತಾರೆ. ಈ ಯೋಜನೆಯ ಪ್ರಕಾರ ಮೊದಲನೆಯ ವರ್ಷದಲ್ಲಿ ಬಹಳ ತೀವ್ರಗತಿಯಿಂದ ಕೆಲಸಮಾಡಿದರು. ಆಗ ಜನರು ಇನ್ನೂ ಅರಿತುಕೊಂಡಿರಲಿಲ್ಲ. ಇದ್ದುದರಲ್ಲಿ ಪ್ರಯತ್ನಪಟ್ಟವರಿಗೆ ಕೆಲಸವಾಯಿತು. ಎರಡನೆಯ ವರ್ಷದಲ್ಲಿ ಸ್ವಲ್ಪ ಕಡಮೆಯಾಯಿತು. ಇವೊತ್ತು ಬಾವಿಗಳನ್ನು ಮಾಡಿಸುತ್ತೇವೆ ಹಣ ಕೊಡಿ ಎಂದರೆ ರಿಸರ್ವ್ ಬ್ಯಾಂಕಿನವರು ಹೆಚ್ಚಿಗೆ ಹಣವನ್ನು ಕೊಡದಿದ್ದುದರಿಂದ ನಾವೂ ಸಹ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಬಾವಿ ಕೆಲಸ ಮಾಡುವುದು, ವ್ಯವಸಾಯದ ಕಸಬು, ಅಥವ ರೈತನ ಕೆಲಸ, ಆಫೀಸಿನಲ್ಲಿ ಬಂದು ಕುಳಿತುಕೊಂಡು ಮಾಡುವ ಕೆಲಸದ ಹಾಗೆ ಅಲ್ಲ. ಫೋನಿನಲ್ಲಿ ಮಾತನಾಡಿ, ಆ ಕೆಲಸ ಮಾಡು ಈ ಕೆಲಸ ಮಾಡು ಎಂದು ಹೇಳಿದರೆ ಕೈಗಾರಿಕಾ ಕೆಲಸ ನಡೆಯುತ್ತದೆ. ವ್ಯವಸಾಯದ ಕಸಬಿನಲ್ಲಿ ಜಮೀನಿನ ಯಜಮಾನನು ಸ್ಥಳದಲ್ಲಿದ್ದರೆ ವ್ಯವಸಾಯ ಸರಿಯಾಗಿ ನಡೆಯುತ್ತದೆ. ಇಲ್ಲವೆ ಇದ್ದರೆ ಖಂಡಿತವಾಗಿಯೂ ಆಗುವುದಿಲ್ಲ. ಇದನ್ನು ಅರಿತುಕೊಳ್ಳಬೇಕು. ಜಮೀನಿನಲ್ಲಿ ವ್ಯವಸಾಯಮಾಡಬೇಕಾದರೆ ಜಮೀನನ್ನು ಉತ್ತು, ಗಾಡಿಗಳಲ್ಲಿ ಗೊಬ್ಬರವನ್ನು ತಂದು ಹಾಕಿ, ಹದಮಾಡಿ ಮಳೆಗಾಗಿ ಕಾಯಬೇಕು. ನಮಗೋಸ್ಕರ ಕಾಲವೂ ಮತ್ತು ಮಳೆಯೂ ಕಾಯುವುದಿಲ್ಲ. ನಮ್ಮ ಕೃಷಿ ಯಾವೊತ್ತು ಕೆಡುತ್ತದೆಯೋ ಅವೊತ್ತು ಆಹಾರಾಭಾವ ಉಂಟಾಗುತ್ತದೆ. ವ್ಯವಸಾಯ ಮಾಡಬೇಕಾದರೆ, ನಮಗೆ ರಸ್ತೆ, ಸೌಕರ್ಯವನ್ನು ಮಾಡಿಕೊಡಿ ಎಂದರೆ ಅದಕ್ಕೆ ಗಮನ ಕೊಡುತ್ತಿಲ್ಲ. ವ್ಯವಸಾಯಗಾರನಿಗೆ ಗೊಬ್ಬರ ಸಾಗಿಸುವುದಕ್ಕಾಗುವುದಿಲ್ಲ, ಬೆಳೆದ ಪದಾರ್ಥವನ್ನು ಸಾಗಿಸುವುದಕ್ಕಾಗುವುದಿಲ್ಲ. ರಸ್ತೆ ಸೌಕರ್ಯವನ್ನು ಮಾಡಿಕೊಡಿ ಎಂದರೆ ಅದಕ್ಕೆ ಅಷ್ಟಾಗಿ ಗಮನ ಕೊಡುತ್ತಿಲ್ಲ. ವ್ಯವಸಾಯಕ್ಕೆ ತಕ್ಕಷ್ಟು ಉತ್ತೇಜನ ಸಿಕ್ಕುತ್ತಿಲ್ಲ, ಆದರೆ ಅದೇ ಕೈಗಾರಿಕೆಗಳ ವಿಷಯವನ್ನು ತೆಗೆದುಕೊಂಡರೆ ಅವರಿಗಾಗಿ ಸಿಮೆಂಟ್ ರಸ್ತೆಗಳನ್ನು ಹಾಕುತ್ತೀರಿ. ಬೇಕಾದಷ್ಟು ವ್ಯವಸ್ಥೆಯನ್ನು ಮಾಡಿಕೊಡುತ್ತೀರಿ. ಅವರಿಗೆ ವಿದ್ಯುಚ್ಛಕ್ತಿ ಸೌಕರ್ಯ ಸಿಕ್ಕುತ್ತದೆ. ತಕ್ಷಣ ಎಲ್ಲ ವ್ಯವಸ್ಥೆಗಳೂ ಆಗುತ್ತವೆ. ಅವರಿಗೆ ಕುಳಿತ ಕಡೆಯೇ ಎಲ್ಲ ವ್ಯವಸ್ಥೆಗಳೂ ಆಗುತ್ತವೆ. ಆದರೆ ವ್ಯವಸಾಯಗಾರನಿಗೆ ಅನುಕೂಲ ಮಾಡಿಕೊಡಿ ಎಂದರೆ ನಾನಾ ಅಡ್ಡಿ ಆತಂಕಗಳು ಬರುತ್ತವೆ. ಇದರ ಜೊತೆಗೆ ವ್ಯವಸಾಯಗಾರನು ಬೆಳೆದ ಪದಾರ್ಥಕ್ಕೆ ಸರಿಯಾದ ಬೆಲೆ ಸಿಕ್ಕುತ್ತಿದೆಯೇ ಎಂದರೆ ಇಲ್ಲ. ರೈತನು ಇವೊತ್ತು ಹೆಚ್ಚಿಗೆ ಬೆಳೆದರೂ ಅದಕ್ಕೆ ಬಿತ್ತನೆ ಬಿತ್ತುವಕಾಲಕ್ಕೆ ನೂರು ರೂಪಾಯಿ ಬೆಲೆ ಇದ್ದರೆ ಮಾರುವಕಾಲಕ್ಕೆ ಮೂವತ್ತು-ನಲವತ್ತು ರೂಪಾಯಿ ಬೆಲೆ ಆಗುತ್ತದೆ. ಇದರಿಂದ ಹಾಕಿದ ಬಂಡವಾಳ ಕೈಗೆ ಬರದೆ ಸಾಲಗಾರನಾಗಬೇಕಾಗುತ್ತದೆ. ಬೆಲೆಯಲ್ಲಿ ಇಷ್ಟು ವ್ಯತ್ಯಾಸ ಸಿಕ್ಕುತ್ತಿರಬೇಕಾದರೆ ವ್ಯವಸಾಯ ಮಾಡಿಕೊಂಡು ಏಕೆ ಹಳ್ಳಿಗಳಲ್ಲಿರಬೇಕು, ಬೆಂಗಳೂರಿಗೆ ಹೋಗಿ ಒಂದು ಕೆಲಸವನ್ನು ಹುಡುಕೋಣ; ಫ್ಯಾಕ್ಟರಿಗಳಲ್ಲೋ ಹೋಟಲಲ್ಲೋ ಕೆಲಸವನ್ನು ನೋಡಿಕೊಳ್ಳೋಣ ಎಂದು ಯೋಚನೆ ಮಾಡುತ್ತಾರೆ. ತೊಂದರೆಗಳಿಲ್ಲದೆ ಜೀವನ ಮಾಡಬೇಕೆಂದು ಯೋಚನೆಯಾಗುತ್ತದೆ. ನನ್ನ ಮಕ್ಕಳನ್ನು ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿಸಬೇಕು ಎಂದು ಯೋಚನೆ ಮಾಡುತ್ತಾರೆ. ಇಲ್ಲಿ ಸುಲಭವಾಗಿ ಜೀವನ ಮಾಡಿಕೊಳ್ಳಲು ಅವಕಾಶವಿರುವಾಗ ಅಲ್ಲಿ ಏಕೆ ಕಷ್ಟಪಡಬೇಕೆಂದು ಈ ಕಡೆ ಬರುತ್ತಿದ್ದಾರೆ. ರೈತರಲ್ಲಿ ಈ ಮನೋಭಾವ ಬಂದು ಅನೇಕರು ಪಟ್ಟಣಗಳ ಕಡೆ ಧಾವಿಸುತ್ತಿದ್ದಾರೆಂಬುದನ್ನು ಸರ್ಕಾರ ಮನಗಾಣಬೇಕು. ಅಮೆರಿಕಾದಲ್ಲಿ ಸರ್ಕಾರದಿಂದ ವ್ಯವಸಾಯಗಾರರಿಗೆ ಸಾಕಷ್ಟು ಉತ್ತೇಜನ ಸಿಕ್ಕುತ್ತದೆ. ಅವನು ಬೆಳೆದ ಪದಾರ್ಥಗಳಿಗೆ ಬೆಲೆ ಕಡಮೆಯಾದರೆ ಬೋನಸ್ ರೂಪದಲ್ಲಿ ಕೊಟ್ಟು ಬೆಲೆ ನಿಗದಿಮಾಡಿ, ಪ್ರೋತ್ಸಾಹ ಕೊಟ್ಟು ಅಲ್ಲೇ ನೆಲಸಿರುವಂತೆ ಹೇಳುತ್ತಾರೆ. ಅಲ್ಲಿ ಹೀಗೆ ರೈತರ ನೆರವಿಗೆ ಬರುತ್ತಾರೆ. ಆ ಪರಿಸ್ಥಿತಿ ಇಲ್ಲಿಲ್ಲ. ಆಹಾರಧಾನ್ಯ ಬೆಳೆದರೆ ಅದಕ್ಕೆ ತಕ್ಕ ಬೆಲೆ ಸಿಕ್ಕುವುದಿಲ್ಲ. ಇಲ್ಲಿ ವ್ಯಾಪಾರಗಾರರು ಕೈವಾಡದಿಂದ ಬೆಲೆ ನಿಗದಿ ಮಾಡುತ್ತಾರೆ. ರೈತರ ಕೈಯಲ್ಲಿರುವಾಗ ಅಗ್ಗವಾಗಿರುವ ಧಾನ್ಯ ವರ್ತಕರಲ್ಲಿ ಹೋದರೆ ಪ್ರಿಯವಾಗುತ್ತದೆ. ಏಕೆಂದರೆ, ರೈತರಲ್ಲಿ ಹಣವಿರುವುದಿಲ್ಲವಾದ್ದರಿಂದ ಹಿಡಿದು ಮಾರಲು ಸಾಧ್ಯವಿಲ್ಲ. ಮಳೆಯ ದೆಸೆಯಿಂದ, ನಮ್ಮ ತಾಲ್ಲೂಕಿನಲ್ಲಿ ನಮ್ಮ ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಎನ್ನುವ ಹಾಗಾಗಿ ಬೆಳೆ ನಷ್ಟವಾಯಿತು. ಬಂಪರ್ ಬೆಳೆ ಆದದ್ದು ಹೋಯಿತು. ಈ ನಷ್ಟವನ್ನು ರೈತರಿಗೆ ಕೊಡುವವರು ಯಾರು ? ಇದನ್ನು ಸರ್ಕಾರ ವಿಚಾರ ಮಾಡಲಿಲ್ಲ. ಗೆಜೆಟ್ಟಿನಲ್ಲಿ ಮಾತ್ರ ಬಂಪರ್ ಬೆಳೆಯಾಗಿದೆ ಎಂಬ ಪ್ರಕಟಣೆಯನ್ನು ನೋಡುತ್ತೇವೆ. ಆಹಾರದ ಬೆಲೆ ಹೆಚ್ಚಾದರೆ ಪಟ್ಟಣಗಳಲ್ಲಿ ಮುಷ್ಕರವಾಗುತ್ತದೆ. ಹಳ್ಳಿಯಲ್ಲಿ ನಷ್ಟವಾದರೆ ಯಾರೂ ಕೇಳುವವರಿಲ್ಲ. ಉಪಕಸುಬುಗಳಿಲ್ಲದೆ ರೈತ ವ್ಯವಸಾಯದಿಂದಲೇ ಜೀವನ ನಡೆಸಲಾರ. ಬರಿಯ ವ್ಯವಸಾಯದಿಂದಲೇ ಐಶ್ವರ್ಯವಂತನಾಗಿದ್ದಾನೆ, ಹಣ ಗಳಿಸಿದ್ದಾನೆಂದರೆ, ಅದು ಶುದ್ಧ ಸುಳ್ಳು. ವ್ಯವಸಾಯದ ಜೊತೆಗೆ ಯಾವು

(ಶ್ರೀ ಎಸ್. ಆರ್. ರಾಮಯ್ಯ)

ದಾದರೂ ಉಪಕಸುಬು ಇರಬೇಕು. ಅಂಥ ಕಸುಬಿಗೆ ಉತ್ತೇಜನ ಸಿಕ್ಕುತ್ತಿಲ್ಲ. ಇದು ಶೋಚನೀಯವಾದ ಪರಿಸ್ಥಿತಿ. ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಬೇಕಾದಷ್ಟು ಕೊಡುತ್ತಿದ್ದಾರೆ. ರೈತರಿಗೆ ರಾಷ್ಟ್ರಪ್ರೇಮವನ್ನು ಬೋಧನೆ ಮಾಡುತ್ತಿದ್ದಾರೆ, ದೇಶಕ್ಕೆ ತ್ಯಾಗ ಮಾಡಬೇಕೆಂದು ಹೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಭೋಗಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಬದಲು ಹಳ್ಳಿಗಳಿಗೆ ಕೊಡಲಿ. ಒಂದೊಂದು ಪಂಪಿಗೆ ಅನುಕೂಲ ಮಾಡಿಕೊಟ್ಟರೆ ಹತ್ತು ಪಲ್ಲ ದವಸವನ್ನು ರೈತ ಕೊಡುತ್ತಾನೆ. ವ್ಯವಸಾಯದ ವಿದ್ಯುಚ್ಛಕ್ತಿ ಪೂರೈಕೆಗೆ ಅನೇಕ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಈ ಅನುಕೂಲವನ್ನು ಕೊಡಲಿ, ಅಷ್ಟು ಆಹಾರ ಧಾನ್ಯವನ್ನು ಕೊಡಲು ಸಿದ್ಧರಿದ್ದೇವೆ, ಇಲ್ಲಎಲ್ಲ ಭೋಗಗಳಿಗೂ ವಿದ್ಯುಚ್ಛಕ್ತಿ ಆಗಬೇಕು, ಹಳ್ಳಿಯಲ್ಲಿ ಮೂಲ ಅನುಕೂಲಗಳಿಲ್ಲದೆ ಬೆಳೆಯಬೇಕು ಎಂದರೆ ಹೇಗೆ ? ರಾತ್ರಿಕಾಲದಲ್ಲಿ ಪಂಪು ಉಪಯೋಗಿಸಿ ಎಂದು ಹೇಳುತ್ತಾರೆ. ರಾತ್ರಿ ಕಾಲದಲ್ಲಿ ವ್ಯವಸಾಯ ಹೇಗೆ ಮಾಡುವುದು ! ರೈತರು ಮನುಷ್ಯರಲ್ಲವೆ ? ರಾತ್ರಿ ಕಾಲದಲ್ಲಿ ಕೆಲಸ ಮಾಡುವುದಕ್ಕೆ ಅವರೇನು ಮೃಗಗಳೇ ! ನೀವು ರಾತ್ರಿ ಕೆಲಸ ಮಾಡಿ, ನಾವು ಸುಖವಾಗಿರುತ್ತೇವೆಂದು ಹೇಳುವುದು ಯಾವಧರ್ಮ, ! ಹೀಗೆ ಮಾಡಿದರೆ ಆಹಾರ ಕೊರತೆ ನಿವಾರಣೆಯಾಗುವುದೇ! ರೈತನ ಕ್ಷೇಮ ನೋಡಬೇಕು, ಅವನ ಮಕ್ಕಳ ಯೋಗಕ್ಷೇಮ ನೋಡಬೇಕು. ಎಲ್ಲೋ ಕೆಲವು ಕಡೆ ಕೊಟ್ಟು, ಅಲ್ಲಿ ಕೊಟ್ಟಿದ್ದೇವೆ ಇಲ್ಲಿ ಕೊಟ್ಟಿದ್ದೇವೆ ಎಂದು ಹೇಳಿದರೆ ರೈತರ ಸಮಸ್ಯೆ ಬಗೆಹರಿಯಲಾರದು. ರೈತರಿಗೂ ಕೈಗಾರಿಕೆಗಳಿಗೆ ದೊರೆಯುವಂತಹ ಸೌಲಭ್ಯಗಳು ಹಾಗೂ ಮಾನವ ಸಹಜವಾದ ಸಹಾನುಭೂತಿಯೂ ದೊರೆತರೆ ಮಾತ್ರ ಹೆಚ್ಚು ಆಹಾರ ಬೆಳೆಯುವ ಕಾರ್ಯಕ್ರಮ ಪೂರ್ಣವಾಗಿ ದೇಶದ ಆಹಾರದ ಕೊರತೆ ನೀಗುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈಗಾಗಲೇ ಆಹಾರ ಪರಿಸ್ಥಿತಿಯ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರು ಹೇಳಿದುದನ್ನೇ ಪುನಃ ಹೇಳಲು ನಾನು ಇಷ್ಟಪಡುವುದಿಲ್ಲ. ಮುಖ್ಯವಾಗಿ ನಮ್ಮ ದೇಶದಲ್ಲಿ ಆಹಾರೋತ್ಪತ್ತಿಯ ಕಡೆ ಸರ್ಕಾರ ಹೆಚ್ಚು ನಿಗಾ ಕೊಡಲಿಲ್ಲ. ನಾವು ಹಳ್ಳಿಯಲ್ಲಿ ಹೋಗಿ ಜನರಿಂದ ಓಟುಗಳನ್ನು ತೆಗೆದುಕೊಳ್ಳುವಾಗ ರೈತರು ದೇಶದ ಬೆನ್ನುಮೂಳೆ, ಅವರು ಮುಂದೆ ಬರಬೇಕು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೆ ಬಗ್ಗಿರುವ ರೈತರ ಬೆನ್ನುಮೂಳೆಯನ್ನು ನೆಟ್ಟಗೆ ಮಾಡುತ್ತೇವೆ ಎಂದು ಹೇಳಿ, ಅಧಿಕಾರಕ್ಕೆ ಬಂದ ನಂತರ ಸರ್ಕಾರದ ಆಡಳಿತವನ್ನು ನಡೆಸುತ್ತಾ ಕುಳಿತು ಕೊಳ್ಳುತ್ತೇವೆ. ಕಾರ್ಯರೂಪದಲ್ಲಿ ಬಹಳ ಹಿಂದಿದ್ದೇವೆ. ಅನೇಕರು ಮಾಡಿದ ಭಾಷಣಗಳಿವೆ. ಮುಖ್ಯವಾಗಿ ಆಹಾರ ಕೊರತೆಯನ್ನು ನೀಗಬೇಕಾದರೆ, ವ್ಯವಸಾಯ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು, ಹಣಕಾಸಿನ ಮಂತ್ರಿಗಳು, ಪಬ್ಲಿಕ್ ವರ್ಕ್ಸ್ ಮಂತ್ರಿಗಳು, ಈ ನಾಲ್ಕು ಜನರೂ ಒಂದಾದ ಹೊರತು ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಒಬ್ಬರು ಹಣವಿಲ್ಲ, ನೀರಾವರಿಗೆ ಸಾಕಷ್ಟು ಹಣ ಕೊಡಲು ಸಾಧ್ಯವಿಲ್ಲವೆಂದು ಹೇಳಿದರೆ, ನಮ್ಮ ರೈತರು ಮುಂದೆ ಬರುವುದು ಹೇಗೆ ? ಮುಖ್ಯವಾಗಿ ಒಂದು ವಿಷಯವನ್ನು ನಾವು ಮರೆತಿದ್ದೇವೆ. ನಮ್ಮ ದೇಶದಲ್ಲಿ ಪ್ರಜಾಸಂಖ್ಯೆ ಪ್ರತಿವರ್ಷವೂ ಶೇಕಡ ಒಂದರಷ್ಟು ಹೆಚ್ಚಾಗುತ್ತಿದೆ. ಇದನ್ನು ಸರ್ಕಾರದವರು ಬಹಳ ಎಚ್ಚರಿಕೆಯಿಂದ ನೋಡಬೇಕಾಗಿದೆ. ಪ್ರತಿ ವರ್ಷವೂ ನಮ್ಮ ರಾಜ್ಯದಲ್ಲಿ ಎರಡು ಲಕ್ಷ ಪ್ರಜಾಸಂಖ್ಯೆ ಜಾಸ್ತಿಯಾಗುತ್ತಿದೆ. ತಲೆಗೆ ಮೂರು ಪಲ್ಲ ದವಸದಂತೆ ವರ್ಷಕ್ಕೆ ಆರು ಲಕ್ಷ ಪಲ್ಲ ಹೆಚ್ಚು ಬೇಕಾಗುತ್ತದೆ. ಎಂದರೆ, ವರ್ಷ ವರ್ಷವೂ ಆರು ಲಕ್ಷ ಪಲ್ಲ ಖೋತಾ ಬರುತ್ತಿದೆ. ಎಕರೆಗೆ ಸರಾಸರಿ ಏಳೆಂಟು ಪಲ್ಲ ಬೆಳೆದರೆ, 75 ಸಾವಿರ ಎಕರೆಯಲ್ಲಿ ಬೆಳೆ ಮಾಡಬೇಕಾಗಿದೆ. ನಾವು ಈ ಖೋತಾವನ್ನು ಸರಿಪಡಿಸಬೇಕಾದರೆ ಇಷ್ಟು ಭೂಮಿಯಲ್ಲಿ ವ್ಯವಸಾಯ ಮಾಡಿ ಬೆಳೆಯಬೇಕಾಗುತ್ತದೆಂಬುದನ್ನು ಮರೆತು ಆಹಾರ ಸಾಕಾಗುವುದಿಲ್ಲವೆಂದು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇವೆ. ಪ್ರಜಾಸಂಖ್ಯೆ ಏರುವುದನ್ನು ತಡೆಯಲು ಏನು ಮಾಡಿದ್ದೇವೆಂಬುದನ್ನೂ ಯೋಚನೆ ಮಾಡಬೇಕು. ಆಹಾರ ಮಂತ್ರಿಗಳೊಬ್ಬರು ಪ್ರಯತ್ನ ಮಾಡಿದರೆ ಸಾಲದು. ಮಂತ್ರಿ ಮಂಡಲ ಪ್ರಯತ್ನಿಸಿ ಪ್ರಜಾಸಂಖ್ಯೆ ಏರುವುದನ್ನು ತಡೆಗಟ್ಟುವ ಮಾರ್ಗವನ್ನು ಕಂಡುಹಿಡಿಯದಿದ್ದರೆ ಪರದೇಶದವರನ್ನು ಪ್ರತಿವರ್ಷವೂ ಭಿಕ್ಷೆ ಕೇಳುವ ಪದ್ಧತಿಯನ್ನನುಸರಿಸಬೇಕಾಗುತ್ತದೆ. ಇದನ್ನು ತಡೆಗಟ್ಟಲು ಜನಸಂಖ್ಯೆಯ ಏರಿಕೆಯನ್ನು ತಡೆಗಟ್ಟಬೇಕು. ಮಕ್ಕಳನ್ನು ಹುಟ್ಟಿಸುವುದನ್ನು ಕಡಮೆ ಮಾಡಬೇಕು. ಇಲ್ಲದಿದ್ದರೆ ಜನಸಂಖ್ಯೆಗೂ ಆಹಾರೋತ್ಪತ್ತಿಗೂ ಸರಿದೂಗಿಸಬೇಕಾದರೆ ವ್ಯವಸಾಯವನ್ನು ಹೆಚ್ಚಿಸಿ ಉಳುಮೆಯನ್ನು ಜಾಸ್ತಿ ಮಾಡಬೇಕು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 331.38 ಕೋಟಿ ರೂಪಾಯಿಗಳನ್ನೊದಗಿಸಿದ್ದಾರೆ. ಇದರಲ್ಲಿ ನಮಗೆ ಬಹುಮುಖ್ಯವಾದ ಆಹಾರ ದವಸವನ್ನು ಬೆಳೆಯುವ ಯೋಜನೆಯನ್ನು ಮೊದಲು ಯೋಚನೆ ಮಾಡಬೇಕಾಗಿದೆ. ಪ್ರತಿವರ್ಷವೂ ಪ್ರಕೃತಿ ಬದಲಾವಣೆಯಾಗುತ್ತಿದೆ. ಮಳೆ ಪ್ರತಿ ವರ್ಷವೂ ಸಕಾಲದಲ್ಲಿ ಆಗದೇಯಿದ್ದರೆ ಆಹಾರ ಬೆಳವಣಿಗೆಗೆ ಅವಕಾಶವಿಲ್ಲ; ಮಳೆಯನ್ನೇ ನೆಚ್ಚಿಕೊಂಡಿರದೆ ಬೋರ್‌ವೆಲ್ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗಿಂತ ಇದಕ್ಕೆ ಮೊದಲ ಪ್ರಾಶಸ್ತ್ಯ ಕೊಡಬೇಕು. ದೊಡ್ಡ ನೀರಾವರಿ ಯೋಜನೆಗಳಿಗೆ ಎಕರೆಗೆ ಎರಡು ಸಾವಿರದಿಂದ ನಾಲ್ಕು ಸಾವಿರ ರೂಪಾಯಿಗಳ ವರೆಗೆ ಖರ್ಚು ಮಾಡುತ್ತಿದ್ದೇವೆ. ನನ್ನ ಸಲಹೆಯೇನೆಂದರೆ, ಐದು ಎಕರೆಯಿಂದ ಹತ್ತು ಎಕರೆ, ಇಪ್ಪತ್ತು ಎಕರೆ, ನೂರು ಎಕರೆ ಜಮೀನಿರುವ ಪ್ರದೇಶದಲ್ಲಿ ಬೋರ್‌ವೆಲ್ ಹಾಕಿದರೆ, ಐದು ಸಾವಿರದಿಂದ ಹತ್ತು ಸಾವಿರದ ಮೇಲೆ ಖರ್ಚಾಗುವುದಿಲ್ಲ. ಎಕರೆಗೆ ಸರಾಸರಿ ಒಂದು ಸಾವಿರಕ್ಕಿಂತ ಹೆಚ್ಚಾಗುವುದಿಲ್ಲ.

4-30 P.M.

ಮಳೆಬಾರದಿದ್ದರೂ ಬೋರ್‌ವೆಲ್ ಮೂಲಕ ನೀರನ್ನು ತೆಗೆದುಕೊಂಡು ಆಹಾರ ಬೆಳೆದು ಕೊರತೆ ಸರಿದೂಗಿಸಬಹುದು. ಮಳೆಯಾಗಿ ಚಿಕ್ಕಪುಟ್ಟ ಕೆರೆಗಳಿಗೆ ನೀರು ಬಾರದಿದ್ದರೂ ಬೋರ್‌ವೆಲ್ ಇದ್ದರೆ ತೊಂದರೆಯಾಗುವುದಿಲ್ಲ. ಬೋರ್‌ವೆಲ್‌ನಿಂದ ಖಾಯಮಾಗಿ ನೀರು ಸಿಕ್ಕುತ್ತದೆ. ಬಾವಿಗಳಿಗಾಗಿ ಕೊಡುವ ಸಬ್ಸಿಡಿ ತಪ್ಪಿಸಿದರೂ ಚಿಂತೆಯಿಲ್ಲ. ಬಾವಿ ತೆಗೆದರೂ ಮಳೆ ಹೋದರೆ ಏಳೆಂಟು ಸಾವಿರ ರೂಪಾಯಿ ಖರ್ಚುಮಾಡಿ ತೆಗೆದಿರುವ ಬಾವಿಗಳಲ್ಲಿ ನೀರಿರುವುದಿಲ್ಲ, ಮಧ್ಯಕಾಲದಲ್ಲಿ ರೈತರಿಗೆ ನೀರಿಲ್ಲದೆ ತೊಂದರೆಯಾಗುತ್ತದೆ. ಕೊಯಮುತ್ತೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ

ಅನೇಕರು ಬೋರ್‌ವೆಲ್ ತೆಗೆದಿದ್ದಾರೆ, ವರ್ಷಕ್ಕೆ ಎರಡು ಬೆಳೆ ಯಾಗುತ್ತದೆ, ಸರಿಯಾಗಿ ಗೊಬ್ಬರಹಾಕುತ್ತಾರೆ, ಚೆನ್ನಾಗಿ ಬೆಳೆಯುತ್ತಾರೆ. ಇದು ನಮ್ಮ ಅನುಭವಕ್ಕೆ ಬಂದಿದೆ. ಬೋರ್‌ವೆಲ್‌ಗೆ ಹಣ ಎಷ್ಟು ಖರ್ಚಾದರೂ ಪರವಾಗಿಲ್ಲ, ಮೂರು ನಾಲ್ಕುವರ್ಷ ಮಳೆಯಿಲ್ಲದಿದ್ದರೂ ಆಹಾರಕ್ಕೆ ಕೊರತೆಯಾಗುವುದಿಲ್ಲ. ಬೋರ್‌ವೆಲ್ ತೆಗೆಸಿ ಕಾಂಟ್ರಿಬ್ಯೂಷನ್ ರೈತರು ಕೊಡುವ ಹಾಗೆ ಮಾಡಿದರೆ ಸರ್ಕಾರಕ್ಕೆ ಬರುವುದೂ ಬರುತ್ತದೆ, ದೇಶದಲ್ಲಿ ಆಹಾರದ ಅಭಾವವೂ ನೀಗುತ್ತದೆ. ಋತು ಪರಿಸ್ಥಿತಿ ಬದಲಾವಣೆಯಾಗುತ್ತಿರುವುದರಿಂದ ಕೇವಲ ಮಳೆಯನ್ನೇ ಅವಲಂಬಿಸುವುದು ಸಾಧ್ಯವಿಲ್ಲ, ಆದ್ದರಿಂದ ಬೋರ್‌ವೆಲ್ ಮೂಲಕ ನೀರು ಪೂರೈಸಲು ಕ್ರಮ ಕೈಕೊಳ್ಳಬೇಕು.

ಎರಡನೆಯದಾಗಿ ಆಹಾರದ ಉತ್ಪತ್ತಿ ಜಾಸ್ತಿ ಮಾಡಬೇಕಾದರೆ, ಆಧುನಿಕ ರೀತಿಯಲ್ಲಿ ಬೆಳೆಯಬೇಕಾದರೆ, ವಿದ್ಯುಚ್ಛಕ್ತಿ ಹೇರಳವಾಗಿ ಬೇಕಾಗಿದೆ. ಶರಾವತಿ ವ್ಯಾಲಿ ವಿಷಯದಲ್ಲಿ ಮೊನ್ನೆ ಹೇಳಿದಂತೆ ಪ್ರತಿಯೊಂದು ಹಳ್ಳಿಯಲ್ಲೂ ವಿದ್ಯುಚ್ಛಕ್ತಿಯ ಸಹಾಯದಿಂದ ಆಹಾರ ಬೆಳೆಯುವ ವ್ಯವಸ್ಥೆಯಾಗಬೇಕು ಬೋರ್‌ವೆಲ್ ತೆಗೆದರೆ ಪವರ್ ಬೇಕೇ ಬೇಕು. ಆಹಾರದ ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ಸ್ಪೆಷಲ್ ಪವರ್ ಕೊಡಲು ಪ್ರಾಮುಖ್ಯತೆ ನೀಡಬೇಕು. ವಿದ್ಯುತ್ ಉತ್ಪತ್ತಿ ಜಾಸ್ತಿಮಾಡುವುದಕ್ಕೆ ಏನು ಮಾಡಬೇಕೆಂದು ಯೋಚನೆಮಾಡಿ ಸಂಬಂಧಪಟ್ಟ ಮಂತ್ರಿಗಳು ಅತಿಜಾಗ್ರತೆ ತಕ್ಕ ಏರ್ಪಾಡು ಮಾಡಬೇಕು.

ಇನ್ನೊಂದು ವಿಷಯ ರೈತರು ಬೆಳೆಯುವ ಪದಾರ್ಥಗಳಿಗೆ ಉಬ್ಬರವಿಳಿತ ಬಹಳ ಜಾಸ್ತಿಯಾಗಿದೆ. ಈ ದಿವಸ ಕಾರ್ಮಿಕರಿಗಾಗಲಿ, ಕೈಗಾರಿಕೆಗಳಿಗಾಗಲಿ ಮಾರ್ಕೆಟ್ ಕಡಮೆಯಾಗುವ ಹಾಗಿಲ್ಲ. ಬೆಳೆಯುವ ಆಹಾರ ಪದಾರ್ಥಗಳಿಗೆ ಬೆಲೆ ನಿಗದಿಮಾಡದಿದ್ದರೆ ರೈತರ ವ್ಯವಸಾಯ ಬಹಳ ಹಿಂದೆ ಬೀಳುತ್ತದೆ. ಕೈಗಾರಿಕೆಗೆ ಸರ್ಕಾರದವರು ಎಷ್ಟು ಸಹಾಯ ಮಾಡುತ್ತಾರೋ ವ್ಯವಸಾಯಕ್ಕೂ ಅಷ್ಟು ಮಾಡಬೇಕು. ವ್ಯವಸಾಯವನ್ನು ಕೈಗಾರಿಕೆಯಾಗಿ ಪರಿವರ್ತನೆ ಮಾಡದಿದ್ದರೆ ಅದು ಮುಂದುವರಿಯುವುದಿಲ್ಲ. ಖರ್ಚು ದಿನೇದಿನೇ ಹೆಚ್ಚುತ್ತಿದೆ. ಧಾರಣೆವಾಸಿಯ ಉಬ್ಬರವಿಳಿತವಿದೆ. ಮಳೆ ಹೋದರೆ ಬೆಲೆ ಏರಿ 25ರೂಪಾಯಿರುವುದು 75 ಆಗುತ್ತದೆ. ಯಾವರೀತಿ ರೈತ ಮುಂದುವರಿಯುವುದು! ಕೈಗಾರಿಕೆಗಳಿಗೆ ಹೆಚ್ಚು ಸಾಲಕೊಟ್ಟು ಪ್ರೋತ್ಸಾಹವಿತ್ತಿರುವುದರಿಂದ ಅವು ಹಿಂದೆ ಬಿದ್ದಿಲ್ಲ. ಅದೇ ವ್ಯವಸಾಯ ಹಿಂದೆ ಬಿದ್ದಿದೆ. ಇದನ್ನು ಸರ್ವೆಮಾಡಿ ತಕ್ಕ ಉತ್ತೇಜನ ನೀಡಬೇಕು. ಅಮೇರಿಕಾ ದೇಶದಲ್ಲಿ ರೈತರು ಮುಂದುವರಿಯಬೇಕಾದರೆ ಸೆಂಟ್ ಪರ್ಸೆಂಟ್ ಸಹಾಯ ಮಾಡುತ್ತಿದ್ದರು, 25 ರಿಂದ 40ವರ್ಷಗಳ ವರೆಗೆ ಬಡ್ಡಿಯಿಲ್ಲದೆ ಸಾಲ ಕೊಡುತ್ತಿದ್ದರು, ಆದ್ದರಿಂದ ಸ್ಟ್ಯಾಂಡರ್ಡ್ ಮಾರ್ಕೆಟ್ ಇರುತ್ತಿತ್ತು. ಕೊರತೆ ಹೆಚ್ಚಾದರೆ ಸಬ್‌ವೆನ್ಷನ್ ಕೊಡುತ್ತಿದ್ದರು. ರಾಗಿ, ಜೋಳ, ನವಣೆ ಮತ್ತು ಗೋಧಿ ಈ ಪದಾರ್ಥಗಳಿಗೆ ಬೆಲೆ ನಿಗದಿ ಮಾಡದಿದ್ದರೆ ರೈತ ಮುಂದುವರಿಯುವುದಕ್ಕಾಗುವುದಿಲ್ಲ.

ಹೋದ ಬಡ್ಜೆಟ್ ಅಧಿವೇಶನದಲ್ಲಿ ಹೊರದೇಶಗಳಲ್ಲಿ ಬೆಳೆಗೆ ವಿಮೆ ಮಾಡುವ ಪದ್ಧತಿಯಿದೆ, ನಮ್ಮಲ್ಲಿ ಮನುಷ್ಯರ ಜೀವಮಾನದ ಬಗ್ಗೆ ವಿಮೆ ಮಾಡುವುದಕ್ಕೆ ಮಾತ್ರ ಅವಕಾಶವಿದೆ, ಆಹಾರದ ಬಗ್ಗೆ ಉಬ್ಬರವಿಳಿತವಿದೆ, ರೈತರಿಗೆ ಸರಿಯಾದ ಬೆಲೆ ದೊರೆಯುವುದಿಲ್ಲ, ಆದ್ದರಿಂದ ಬೆಳೆ ವಿಚಾರದಲ್ಲಿ ವಿಮೆ ಪದ್ಧತಿ ಜಾರಿಗೆ ತನ್ನಿ ಎಂದು ಹೇಳಿದ್ದೆ. ಖುಷ್ಕಿ ಬೆಳೆಗೆ ಮಾತ್ರ ವಿಮೆಮಾಡಲು ಅವಕಾಶವಿದ್ದರೆ ಸಾಕು, ತರಿ ಮತ್ತು ಬಾಗಾಯ್ತು ಬೆಳೆಗೆ ಬೇಕಾಗಿಲ್ಲ. ಇದರಿಂದ ಬೆಳೆಯಾಗದಿದ್ದ ವರ್ಷ ರೈತನಿಗೆ ಸ್ವಲ್ಪ ಅನುಕೂಲವಾಗುತ್ತದೆ. ವ್ಯವಸಾಯ ಮಂತ್ರಿಗಳು ಇದನ್ನು ಗಮನಿಸಿ ಮುಂದಿನ ಅಧಿವೇಶನದ ವೇಳೆಗಾದರೂ ಬೆಳೆಯ ವಿಮೆಗೆ ಸಂಬಂಧಪಟ್ಟ ಮಸೂದೆಯನ್ನು ತರುತ್ತಾರೆಂದು ನಂಬಿದ್ದೇನೆ. ಇತರರನ್ನು ಈಗ ನಾವು ಕಾಪಿ ಮಾಡುತ್ತಿದ್ದೇವೆ. ಈ ವಿಮೆ ವಿಚಾರದಲ್ಲಿ ನಾವು ಎಲ್ಲರಿಗಿಂತ ಮುಂಚೆ ಕ್ರಮ ಕೈಕೊಂಡು ಮಾದರಿಯಾಗೋಣ. ಮೈಸೂರು ಸರ್ಕಾರದವರು ಎಷ್ಟು ಸಹಾಯ ಮಾಡಿದ್ದಾರೆಂದು ನೋಡಿ ಬಾಕಿಯವರೂ ಅನುಸರಿಸಲಿ.

ಅನೇಕ ಖುಷ್ಕಿ ಜಮೀನುಗಳಲ್ಲಿ ದಿಣ್ಣೆ ವಗೈರೆ ಇದೆ. ಅದನ್ನು ಮಟ್ಟಮಾಡಿ ವ್ಯವಸಾಯಕ್ಕೆ ನೀರು ತೆಗೆದುಕೊಳ್ಳುವುದಕ್ಕೆ, ಜಮೀನು ಆಬಾದಿಗೆ, ಬೆಳೆ ಹಚ್ಚಿಸುವಂತೆ ಅಭಿವೃದ್ಧಿಮಾಡುವುದಕ್ಕೆ ಬಡ್ಡಿಯಿಲ್ಲದೆ ಲಂಪ್ ಸಂ ಗ್ರಾಂಟ್ ಸಾಲವನ್ನು ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕು. ಹೊರದೇಶಗಳಲ್ಲಿ ಈ ಪದ್ಧತಿಯಿದೆ. ರೈತರಿಗೆ ಜಮೀನು ಕೊಟ್ಟರೂ ಅವರು ಅದನ್ನು ಮಟ್ಟ ಮಾಡಿ ವ್ಯವಸಾಯಕ್ಕೆ ಯೋಗ್ಯವಾಗುವಂತೆ ಮಾಡಬೇಕಾದರೆ ಹತ್ತಾರು ವರ್ಷಗಳು ಬೇಕು. ಇದರಿಂದ ರೈತ ಹಿಂದುಳಿಯುತ್ತಾನೆ, ಎಷ್ಟು ಜಮೀನು ಕೊಟ್ಟರೂ ಸಾರ್ಥಕವಾಗುವುದಿಲ್ಲ. ಆದ್ದರಿಂದ ಸರ್ಕಾರವೇ ಜಮೀನನ್ನು ಮಟ್ಟಮಾಡಿ ಅಭಿವೃದ್ಧಿಪಡಿಸುವುದಕ್ಕೆ ಗ್ರಾಂಟು ಕೊಡಬೇಕು. ಇದಕ್ಕಾಗಿ ಒಂದು ಆಕ್ಟ್ ಮಾಡಿದರೂ ಚಿಂತೆಯಿಲ್ಲ.

ಕೊನೆಯದಾಗಿ ಆಹಾರದ ಕೊರತೆ ವಿಶೇಷವಾಗಿದೆಯೆಂದು ಹೇಳಬೇಕಾಗಿದೆ. ಈಗ ನಮ್ಮ ದೇಶದಲ್ಲಿ ಕೊರತೆಯಿದೆ. ಅದರಲ್ಲೂ ಹಾಸನ ಜಿಲ್ಲೆಯಲ್ಲಿ ನಾಲ್ಕಾಣೆ, ಆರಾಣೆ ಬೆಳೆ ಕೂಡ ಆಗಿಲ್ಲ. ಚನ್ನರಾಯಪಟ್ಟಣದಲ್ಲಿ ಅಭಾವವಿದೆ. ರೆವೆನ್ಯೂ ಮಂತ್ರಿಗಳು ಪ್ರವಾಸ ಮಾಡಿದಾಗ ನೋಡಿದ್ದಾರೆ. ಅದರ ಪರಿಹಾರಕ್ಕಾಗಿ ಕೆರೆ ಅಭಿವೃದ್ಧಿಮಾಡಲು ಫ್ಯಾಮಿನ್ ರಿಲೀಫ್ ಫಂಡಿನಿಂದ ಕೂಡಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಆ ರೀತಿ ಕೊರತೆ ನೀಗಲು ಧನ ಸಹಾಯ ಮಾಡುತ್ತಾರೆಂದು ನಂಬಿ ನನ್ನ ಭಾಷಣ ಮುಗಿಸುತ್ತೇನೆ,

*ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಅಧ್ಯಕ್ಷರೆ, ನಾನು ಮೊದಲನೆಯದಾಗಿ ಸಮಯ ಕೊಟ್ಟ ಬಗ್ಗೆ ಆಭಾರ ಮನ್ನಿಸುತ್ತೇನೆ. ಮುಖ್ಯವಾಗಿ ಆಹಾರ ಸಮಸ್ಯೆಯ ಮೇಲೆ ಮಾತನಾಡುವಾಗ ಸಮಯ ಸ್ವಲ್ಪ ಇರುವುದರಿಂದ ಮೂರು ವಿಷಯಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಿನ್ನೆ ಶ್ರೀಮಾನ್ ಹನುಮಂತಯ್ಯನವರು ನಮ್ಮ ದೇಶದಲ್ಲಿ ಜನಸಂಖ್ಯೆ ಅಪರಿಮಿತವಾಗಿ ಬೆಳೆಯುತ್ತಿದೆಯೆಂದು ಹೇಳಿದರು. ಆ ವಿಚಾರವನ್ನು ಎಲ್ಲರೂ ಹಾಸ್ಯಾಸ್ಪದವಾಗಿ ಹೇಳಿರುವುದನ್ನು ಪ್ರತಿಯೊಬ್ಬರ ಭಾಷಣದಲ್ಲೂ ಕೇಳುತ್ತಿದ್ದೇನೆ. ಆದರೆ ಇದರ ಬಗ್ಗೆ ಮಾಡಬೇಕಾದ ಕೆಲಸವೇನೆಂದು ಯಾರೂ ಸೂಚಿಸಿಲ್ಲ. ನಾನು ನಮ್ರತೆಯಿಂದ ಸೂಚಿಸುವುದು ಆಹಾರವನ್ನು ಹೆಚ್ಚಿಸಲು ಪ್ರಯತ್ನ ಮಾಡೋಣ. ಈಗ ಎಂಟುಕೋಟಿ ಜನಸಂಖ್ಯೆ ಹೆಚ್ಚಿದೆ. 1970ನೆಯ ಇಸವಿಯ ಹೊತ್ತಿಗೆ 18ವರ್ಷವಾಗಿರುವ ಮಗು ತನ್ನ ಫ್ಯಾಕ್ಟರಿಯನ್ನು ಪ್ರಾರಂಭಿಸುತ್ತಾನೆ. ಅದರಿಂದ ಜನಸಂಖ್ಯೆ ಅಪರಿಮಿತವಾಗಿ ಬೆಳೆಯುತ್ತದೆ. ಹಾಗೆ ಬೆಳೆದು ಅದು 75ಕೋಟಿಯಾದರೆ ಎಷ್ಟು ತಾನೆ ಆಹಾರ ಬೆಳೆಯುವುದಕ್ಕೆ ಸಾಧ್ಯ ! ಇದರ ಸಲುವಾಗಿ ಮಾನ್ಯ ಮಂತ್ರಿಗಳು ಮೊದಲು ಮಾಡಿಕೊಂಡು ಅಸೆಂಬ್ಲಿ ಸದಸ್ಯರು ಕೂಡಿ ಯಾರೂ

(ಶ್ರೀ ಎಸ್. ವೈ. ಪಾಟೀಲ್)

ಎರಡು ಮಕ್ಕಳಿಗಿಂತ ಹೆಚ್ಚು ಹಡೆಯಬಾರದು, ಎರಡಕ್ಕಿಂತ ಜಾಸ್ತಿ ಹಡೆದವರು ಅಸೆಂಬ್ಲಿ ಸದಸ್ಯರಾಗಬಾರದು ಎಂದು ನಿಯಮವನ್ನು ಮಾಡಬೇಕು. ಎರಡು ಮದುವೆಮಾಡಿಕೊಂಡಿರುವವರಿಗೆ ನೌಕರಿ ಕೊಡ ಕೂಡದೆಂದು ಹೇಗೆ ನಿರ್ಬಂಧ ಹಾಕಿದೆಯೋ ಹಾಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಹಡೆದವರು ಸದಸ್ಯರಾಗಬಾರದೆಂದು ನಿರ್ಬಂಧ ಮಾಡಬೇಕು. ಆ ರೀತಿಯಾಗಿ ನಾನು ಆಚರಣೆಯಲ್ಲಿ ತಂದು ಈ ಮಾತನ್ನು ಹೇಳುತ್ತಿದ್ದೇನೆ. ಆಚರಣೆಯಲ್ಲಿ ತರದೇ ಇರುವದನ್ನು ಹೇಳುವದಕ್ಕೆ ಯಾರಿಗೂ ಅಧಿಕಾರವಿಲ್ಲ.

ಮುಖ್ಯವಾಗಿ ಅನೇಕ ಸದಸ್ಯರು ರಬಿ ಕ್ಯಾಂಪೇನದ ಬಗ್ಗೆ ಸರಕಾರವನ್ನು ಕಟುತರವಾಗಿ ಟೀಕಿಸಿದರು, ಸರಕಾರಕ್ಕೆ ಸೂಚನೆಗಳನ್ನು ಮಾಡಬಹುದು. ಹಾಗೆಯೇ ನಮ್ಮ ಕರ್ತವ್ಯ ಏನಿದೆ ಎಂಬುದನ್ನೂ ಸಹ ವಿಚಾರ ಮಾಡಬೇಕು. ನಾನು ಹಳ್ಳಿಗಳಲ್ಲಿ ತಿರುಗಾಡತಕ್ಕಂಥ ವ್ಯಕ್ತಿಯಾಗಿರುವದರಿಂದ ಹಳ್ಳಿಗಳಲ್ಲಿಯ ಪರಿಸ್ಥಿತಿ ಯಾವರೀತಿಯಾಗಿದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ ಮಳೆಯಾಗಿಲ್ಲ, ದುಷ್ಕಾಳ ಪರಿಸ್ಥಿತಿಯು ಇದೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಸಕಾಲದಲ್ಲಿ ಮಳೆಯಾದರೆ ಒಂದೊಂದು ಎಕರೆ ಭೂಮಿಯಲ್ಲಿ 20 ಚೀಲ ಜೋಳ ಬರುತ್ತದೆ. ಇಲ್ಲಿ ಯಾವ ನೀರಾವರಿ ಯೋಜನೆಯ ಸೌಲಭ್ಯವೂ ಇಲ್ಲ. ಆದುದರಿಂದ ವ್ಯವಸಾಯ ಇಲಾಖೆಯವರು ಈ ಪ್ರದೇಶದ ಕಡೆಗೆ ಹೆಚ್ಚು ಗಮನಕೊಡಬೇಕಾದುದು ಅಗತ್ಯ. ರೈತನಿಗೆ ಭೂಮಿಯ ಬಗ್ಗೆ ಹೆಚ್ಚು ಆಸ್ಥೆಯುಂಟಾಗಲು ಅವನಿಗೆ ಭೂಮಿಯ ಮೇಲಿನ ಹಕ್ಕು ಪ್ರಾಪ್ತವಾಗಬೇಕು. ಇಲ್ಲದಿದ್ದರೆ ಸುಧಾರಣೆಯಾಗುವುದು ಸಾಧ್ಯವಿಲ್ಲ. ತಾನೇ ಭೂಮಿಯ ಒಡೆಯನಾಗುತ್ತೇನೆಂದು ರೈತನಿಗೆ ಗೊತ್ತಾದರೆ ಅವನಿಗೆ ಆಸಕ್ತಿಯು ಚೆನ್ನಾಗಿ ಹೆಚ್ಚು ಉತ್ಪಾದನೆ ಮಾಡಲು ಪ್ರಯತ್ನಪಡುತ್ತಾನೆ. ಇಲ್ಲದಿದ್ದರೆ ಭೂಮಿಯ ಬಗ್ಗೆ ಅವನಿಗೆ ಅನಾಸಕ್ತಿಯುಂಟಾಗುತ್ತದೆ.

ನಾವೆಲ್ಲರೂ ಭೂಸುಧಾರಣೆಯಾಗಬೇಕೆಂದು ಹೇಳುತ್ತೇವೆ. ಯಾವುದೊಂದು ಸುಧಾರಣೆ ಮಾಡಬೇಕಾದರೆ ಸರಕಾರ ಖರ್ಚುಮಾಡಬೇಕಾಗುತ್ತದೆ. ಇದಕ್ಕಾಗಿ ಸರಕಾರ ಜನತೆಯ ಮೇಲೆ ತೆರಿಗೆ ಹೇರಬೇಕಾಗುತ್ತದೆ. ನಮಗೆ ಸುಧಾರಣೆ ಬೇಕಾದರೆ ತೆರಿಗೆ ಹೊರಲು ತಯಾರಿರಬೇಕು.

ಇನ್ನು ರೈತನಿಗೆ ಸಾಲ, ಸಬ್‌ಸಿಡಿ ಕೊಡತಕ್ಕಂಥ ಕೆಲಸವನ್ನು ವ್ಯವಸಾಯದ ಇಲಾಖೆ ಮಾಡಬೇಕು. ಇದಕ್ಕೆ ರೆವಿನ್ಯೂ ಇಲಾಖೆಯ ಸಂಬಂಧವಿರಬಾರದು. ಯಾಕೆಂದರೆ ರೈತನಿಗೆ ಬಹಳ ತೊಂದರೆಯಾಗುತ್ತದೆ. ತಗಾಯಿಕ್ಕ ಬೇಕಾದರೆ ಎಷ್ಟೋ ಜನರಿಗೆ ಶರಣು ಹೋಗಬೇಕಾಗುತ್ತದೆ, ಲಂಚ ಕೊಡಬೇಕಾಗುತ್ತದೆ. ಈ ವೃತ್ತಿ ಕಡಿಮೆಯಾಗಬೇಕು. ಸುಲಭವಾಗಿ ರೈತನಿಗೆ ಸಾಲ ತಗಾಯಿ ದೊರೆಯುವ ಹಾಗೆ ವ್ಯವಸಾಯ ಇಲಾಖೆಯಲ್ಲಿ ಒಂದು ವ್ಯವಸ್ಥೆ ಇರಬೇಕು. ಇನ್ನೊಂದು ವಿಷಯ ಹೇಳಬೇಕಾಗಿದೆ. ನಮ್ಮ ಜನರಲ್ಲಿ ಇತ್ತೀಚೆಗೆ ಎಲ್ಲದಕ್ಕೂ ಸರಕಾರದ ಮೇಲೆ ಅವಲಂಬಿಸುವ ವೃತ್ತಿ ಬೆಳೆದು ಬಂದಿದೆ. ಇದು ಸರಿಯಲ್ಲ. ಪ್ರತಿಯೊಂದನ್ನೂ ಸರಕಾರವೇ ಮಾಡಬೇಕು ಎಂದರೆ ಅದು ಹೇಗೆ ಸಾಧ್ಯವಾದೀತು! ಜನರೂ ಸಹ ಸ್ವಾವಲಂಬನದಿಂದ ಇರಬೇಕು.

ವ್ಯವಸಾಯಕ್ಕೆ ಬೇಕಾಗುವ ಪ್ರತಿಯೊಂದು ಭಾವಿಗೆ 500ರೂಪಾಯಿ ಕೊಡಬೇಕು. ಸಾಮಾನ್ಯ ರೈತನಿಗೆ ಭಾವಿ ಹೊಡೆಸುವದು ಶಕ್ಯವಿಲ್ಲ. ನಮ್ಮ ಪ್ರದೇಶದಲ್ಲಿ ಬಹಳ ಆಳವಾದ ಭಾವಿಗಳನ್ನು ತೆಗೆಯಬೇಕಾಗುತ್ತದೆ. ಅದಕ್ಕೆ ಹೆಚ್ಚು ಖರ್ಚುಬರುತ್ತದೆ. ಆದುದರಿಂದ ಈ ವಿಷಯವನ್ನು ಸರಕಾರದವರು ಗಮನದಲ್ಲಿಟ್ಟುಕೊಂಡು ಬಡ ರೈತರಿಗೆ ಹೆಚ್ಚಿನ ಸಹಾಯಮಾಡಬೇಕು. ನಮ್ಮ ಭಾಗದಲ್ಲಿ ವಿಶೇಷವಾಗಿ ಇತತಕ್ಕ ಲಂಬಾಣಿ ಜನರು ಬಹಳ ಹಿಂದುಳಿದವರು ಆಗಿದ್ದಾರೆ. ಅವರಿಗೆ ಸಾಲ, ತಗಾಯಿ ಮುಂತಾದುವು ದೊರೆಯುವುದಿಲ್ಲ. ಯಾಕೆಂದರೆ ಅವರು ಕಂದಾಯ ಕೊಡುವುದಿಲ್ಲ. ಇವರಿಗೆ ಬಾವಿ ತೆಗೆಯುವುದಕ್ಕೆ ಅರ್ಧದಷ್ಟು ಖರ್ಚು ಕೊಟ್ಟು ಸಹಾಯಮಾಡಬೇಕು. ಈ ರೀತಿ ಮಾಡುವುದು ಬಹಳ ಅವಶ್ಯಕವಾಗಿದೆ. ಅನೇಕ ಸುಧಾರಣೆಗಳು ಕಾಗದ ಪತ್ರಗಳಲ್ಲಿಯೇ ಉಳಿಯುತ್ತವೆ. ಹಾಗೆ ಆಗದ ಹಾಗೆ ಮಾಡಬೇಕು. ಇನ್ನು ಹೆಚ್ಚು ಖರ್ಚುಮಾಡತಕ್ಕದ್ದು ಅವಶ್ಯವಾಗಿದೆ ಎಂದು ಕಂಡುಬಂದರೆ ಇಂಥ ಸುಧಾರಣೆಗಳಿಗಾಗಿ ಹೆಚ್ಚು ಹಣ ಖರ್ಚುಮಾಡೋಣ. ಸರಕಾರದವರು ಮುಖ್ಯವಾಗಿ ಭೂಮಿಯಲ್ಲಿ ಮೊದಲು ಕಿರ್ದಿ ಮಾಡುವ ವ್ಯವಸ್ಥೆಮಾಡಬೇಕು. ಇದಕ್ಕಾಗಿ ಅರ್ಜಿ ಬರೆದು ಕೊಡಲು ರೈತನಿಗೆ ಆಗುವದಿಲ್ಲ. ಸರ್ವಸಾಮಾನ್ಯವಾಗಿ ರೈತನ ಸ್ಥಿತಿ ಅನಾಥ ಬಾಲಕನಂತೆಯಾಗಿದೆ. ನನ್ನ ಮುಖ್ಯ ಸೂಚನೆಗಳು ಯಾವವು ಎಂದರೆ ಮೊದಲು ಕಿರ್ದಿಮಾಡಬೇಕು. ಭೂಮಿಯನ್ನು ಸಮಪಾತಳಿ ಮಾಡಿಸಬೇಕು. ಒಡ್ಡು ಹಾಕಿಸಬೇಕು. ಭಾವಿಗಳನ್ನು ತೆಗೆಸಿಕೊಡಬೇಕು. ಮುಖ್ಯವಾಗಿ ರೈತನಿಗೆ ಭಾವಿಗಳ ಬಗ್ಗೆ ಹೆಚ್ಚು ಸಹಾಯ ಒದಗಿಸಿಕೊಡಬೇಕು. ಇನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ಬೇರೆ ಬೇರೆ ತರದ ಮಣ್ಣು ಇರುವುದರಿಂದ ಅಲ್ಲಿ ಒಬ್ಬ ಯೋಗ್ಯ ಅಧಿಕಾರಿಯನ್ನು ಇಟ್ಟು ಸರ್ವೆ ಕೆಲಸಮಾಡಿಬೇಕು.

ಶ್ರೀ ಎಚ್. ವಿ. ವೀರೇಗೌಡ (ಮಳವಳ್ಳಿ).—ಮಾನ್ಯ ಸಭಾಪತಿಗಳೇ, ಆಹಾರದ ಪರಿಸ್ಥಿತಿ ವಿಷಯದಲ್ಲಿ ನಿನ್ನೆಯಿಂದ ವಿಚಾರ ವಿನಿಮಯವಾಗುತ್ತಾ ಇದೆ. ನಾನಾದರೂ ಕೆಲವು ವಿಷಯಗಳನ್ನು ಸರಕಾರದವರ ಗಮನಕ್ಕೆ ತರಬೇಕೆಂದು ಆಶೆಯುಳ್ಳವನಾಗಿದ್ದೇನೆ. ಇದರಲ್ಲಿ ಎರಡು ವಿಷಯ ಕಾಣುತ್ತಾ ಇದೆ. ಆಹಾರ ಪದಾರ್ಥಗಳ ಬೆಲೆ ಏರಿತತಕ್ಕ ವಿಷಯದಲ್ಲಿ ಜನಗಳೂ ಗಾಬರಿ ಪಡುತ್ತಾ ಇರುವುದು ಒಂದು, ಮತ್ತೊಂದು ಆಹಾರ ಪದಾರ್ಥಗಳನ್ನು ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು. ಆಹಾರ ಪದಾರ್ಥಗಳಿಗೆ ಇರತಕ್ಕ ಹೆಚ್ಚಿನ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಈಗಿನ ಪರಿಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ಸಾಧ್ಯ ಎನ್ನತಕ್ಕ ವಿಚಾರವನ್ನು ಸರಕಾರದವರಿಗೆ ಬಿಟ್ಟಿದ್ದೇನೆ. ಕಡಿಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಕಡಿಮೆ ಮಾಡಬಹುದು. ಈ ಸಮಸ್ಯೆ ಕಷ್ಟತರವಾದದ್ದು ಎಂದು ನನ್ನ ಭಾವನೆ. ಸುಲಭ ಸಾಧ್ಯವಾಗುವುದಾದರೆ ಬಹಳ ಸಂತೋಷ. ಹೆಚ್ಚಿನ ಆಹಾರ ಬೆಳೆಯುವ ವಿಷಯದಲ್ಲಿ ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಹೆಚ್ಚಿನ ಆಹಾರ ಬೆಳೆಯಲು ಪ್ರಚಾರ ಕಾರ್ಯಕ್ರಮ ಅಥವಾ ದ್ರವ್ಯ ಸಹಾಯ ಮಾಡುವುದರಿಂದ ಹೆಚ್ಚು ಆಹಾರ ಉತ್ಪನ್ನವಾಗುವುದಿಲ್ಲ. ಹೆಚ್ಚು ಆಹಾರ ಬೆಳೆಯಬೇಕಾದರೆ ಮೂರು-ನಾಲ್ಕು ಸಂದರ್ಭಗಳಲ್ಲಿ ಅನುಕೂಲವಾಗಬೇಕು. ಮಳೆ ಆಗಿ ನೀರಿನ ಅನುಕೂಲವಾಗಬೇಕು, ದುಡಿಯತಕ್ಕ ಜನ ಇರಬೇಕು ಮತ್ತು ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಏನೇನು

ಸಾಮಾನುಗಳು ಬೇಕೋ ಅವುಗಳೆಲ್ಲಾ ಸಕಾಲಕ್ಕೆ ಒದಗಬೇಕು. ನನ್ನ ಸ್ವಂತ ಅಭಿಪ್ರಾಯವನ್ನು ಹೇಳುವುದಾದರೆ, ಇವತ್ತಿನ ದಿವಸ ಆಹಾರ ಬೆಳೆ ದೇಶದಲ್ಲಿ ಇಷ್ಟು ಕಡಮೆ ಆಗಿದೆ ಎಂದು ಲೆಕ್ಕ ಹಾಕುತ್ತೇವೆಯೇ ಹೊರತು ಅದಕ್ಕೆ ಕಾರಣವೇನೆಂಬುದನ್ನು ಯೋಚನೆ ಮಾಡುವುದಿಲ್ಲ. ಅದಕ್ಕೆ ಬೇಕಾಗತಕ್ಕ ಉಪಕರಣಗಳು, ಸಾಧನ ಸಂಪತ್ತು ಬೇರೆ ರೀತಿಯಲ್ಲಿ ಕಡಮೆಯಾಗಿರುವುದೇ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಸಾಕಷ್ಟು ಗೊಬ್ಬರವನ್ನು ಸರ್ಕಾರದವರು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಕಳೆದಸಾರಿ ಆದಂತೆ ಅವ್ಯವಸ್ಥೆ ಆಗಬಾರದು. ರೈತರ ಸಕಾಲದಲ್ಲಿ ಬಿತ್ತನೆ ಹಾಕುವುದಕ್ಕೆ ಭೂಮಿಯನ್ನು ಸರಿಪಡಿಸಬೇಕು. ಅದು ಅವರ ಕರ್ತವ್ಯ. ಕಳೆದ ವರ್ಷ ಭೂಮಿಯನ್ನು ಉಳತಕ್ಕ ಕಾಲದಲ್ಲಿ ಭೂಮಿಯನ್ನು ಉಳುವುದಕ್ಕೆ ಉಪಯೋಗಿಸತಕ್ಕಂಥ ಕಬ್ಬಿಣದ ಸಾಮಾನುಗಳು ದೊರೆಯಲಿಲ್ಲ. ಕಬ್ಬಿಣದ ಗುಳಗಳನ್ನು ಒದಗಿಸಬೇಕೆಂದು ಸರ್ಕಾರದವರನ್ನು ಎಷ್ಟೇ ಒತ್ತಾಯ ಮಾಡಿದರೂ ಅವರಿಗೆ ಎಷ್ಟು ಅವಶ್ಯಕವಾಗಿತ್ತೋ ಅದರಲ್ಲಿ ಅರ್ಧ ಭಾಗವನ್ನು ಕೂಡ ಸರ್ಕಾರದವರು ಒದಗಿಸಲಿಲ್ಲ. ಈ ಕೆಲವು ತೊಂದರೆಗಳಿಂದ ಈ ಆಹಾರ ಪದಾರ್ಥಗಳ ಉತ್ಪನ್ನ ಕಡಮೆ ಆಯಿತು ಎಂದು ನನಗೆ ಅನಿಸುತ್ತದೆ. ಒಳ್ಳೆಯ ಭೂಮಿ ಬೇಕು, ದುಡಿಯತಕ್ಕ ಜನ ಬೇಕು. ಇವೆಲ್ಲಕ್ಕಂತ ಹೆಚ್ಚಾಗಿ ನಿನ್ನೆ ಶ್ರೀ ಹನುಮಂತಯ್ಯನವರು ಹೇಳಿದಂತ ದೇವರ ಆಶೀರ್ವಾದಬೇಕು. ನಮ್ಮ ದೇಶದಲ್ಲಿ ಸಾಗುವಳಿಗೆ ಲಾಯಕ್ಕಾದ ಜಮೀನು ಬಹಳವಾಗಿ ಇದೆ. ಅದರಲ್ಲಿ ಬಹುಭಾಗದ ಜಮೀನು ಮಳೆ ಆಶ್ರಯದಿಂದ ಬೆಳೆಗೆ ಯೋಗ್ಯವಾದುದಾಗಿದೆ. ಕೆಲವೇ ಭಾಗದ ಜಮೀನಿಗೆ ನೀರಾವರಿ ಅನುಕೂಲಗಳಿವೆ. ಆ ಜನಗಳಿಗೆ ಸರ್ಕಾರದವರು ಪ್ರೋತ್ಸಾಹ ಮಾಡಿದರೆ ಕೊಂಚಮಟ್ಟಿಗಾದರೂ ನಿರೀಕ್ಷಿಸಬಹುದಾದಷ್ಟು ಬೆಳೆ ತೆಗೆದುಕೊಳ್ಳಬಹುದು. ಒಬ್ಬ ಮನುಷ್ಯನಿಗೆ ಒಂದು ಎಕರೆ ಜಮೀನು ಹಂಚಿಕೆ ಮಾಡಿದರೂ ಕೂಡ ಆ ಒಂದು ಎಕರೆಯಲ್ಲಿ ದುಡಿಯತಕ್ಕ ಜನರ ಸಂಖ್ಯೆ ದಿನದಿನಕ್ಕೆ ಕಡಮೆ ಆಗುತ್ತಾ ಇದೆ. ಮಳೆ ಅಭಾವ, ಒಂದೊಂದು ವರ್ಷದಲ್ಲಿ ಅತಿವೃಷ್ಟಿ, ಒಂದೊಂದು ವರ್ಷದಲ್ಲಿ ಅನಾವೃಷ್ಟಿ ಹೀಗಾಗಿ ರೈತನಿಗೆ ಒಂದು ಬೆಳೆ ಸಹ ಕೈಸೇರಬೇಕಾದರೆ ಅನೇಕ ಎಡರು ತೊಡರುಗಳಿವೆ. ಇದನ್ನೆಲ್ಲಾ ಸರಿಪಡಿಸುವುದು ಸುಲಭ ಸಾಧ್ಯವಾದ ಮಾತಲ್ಲ. ಅನೇಕರು ಬೆಂಗಳೂರು, ಮೈಸೂರು ಪಟ್ಟಣಗಳನ್ನು ಸೇರುತ್ತಾ ಇದ್ದಾರೆ. ಕೂಲಿಗಳ ಅಭಾವದಿಂದ ಕೆಲಸಕಾರ್ಯಗಳಿಗೆ ತೊಂದರೆಯಾಗಿದೆ. ಬೇಸಾಯದ ಕಾಲದಲ್ಲಿ ರೈತರಿಗೆ ಬೇರೆಯವರ ಯಾರ ಸಹಾಯವೂ ಒದಗುತ್ತಾ ಇಲ್ಲ. ಇನ್ನೊಂದು ವಿಷಯ ಎಂದರೆ ಈ ಸಾರಿ ಪ್ರಾರಂಭದಲ್ಲಿ ಖುಷ್ಕಿ ಬೆಳೆ ಬಹಳ ಚೆನ್ನಾಗಿತ್ತು. ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮವಾಗುತ್ತದೆ ಎಂದು ನಿರೀಕ್ಷಣೆ ಮಾಡಿದ್ದೆವು. ಮಧ್ಯದಲ್ಲಿ ಒಂದು ತಿಂಗಳು ಮಳೆ ಹೋಯಿತು. ಅನಂತರ ಮೂರು-ನಾಲ್ಕು ದಿವಸ ಜಡಿಮಳೆ ಹಿಡಿದು ಕೈಗೆಬಂದ ಫಸಲೆಲ್ಲಾ ಕೊಳೆತು ಹೋಯಿತು. ಹೀಗೆ ಪ್ರಕೃತಿಯೂ ವಿರೋಧವಾಗಿದೆ. ಹೀಗಿರುವಾಗ ನೀವು ಏನು ಯೋಜನೆ ಮಾಡಿದ್ದೀರೋ ಆ ಯೋಜನೆಯ ಪ್ರಕಾರ ಸಂಪೂರ್ಣವಾಗಿ ಬೆಳೆ ತೆಗೆಯಲು ಅವಕಾಶವಾಗುವುದಿಲ್ಲ. ಆದರೆ ಈ ಆಹಾರ ಉತ್ಪನ್ನ ಮಾಡತಕ್ಕ ಕಾರ್ಯವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ ಎನ್ನುವ ವಿಷಯವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೆಲಸ ನಡೆಯುತ್ತಾ ಇದೆ. ಆದರೆ ನಿರೀಕ್ಷೆ ಆದಷ್ಟು ಕೆಲಸ ಮಾತ್ರ ನಡೆಯುತ್ತಾ ಇಲ್ಲ; ಮತ್ತು ಇದ್ದುದ್ದರಲ್ಲಿ ಅಲ್ಪಸ್ವಲ್ಪ ಬೆಳೆಯನ್ನು ಮಾಡಿ ಉತ್ತಮ ರೀತಿಯಲ್ಲಿ ಬೆಳೆಯಲಿಕ್ಕೆ ಪ್ರಯತ್ನಪಟ್ಟರೂ ರೋಗರುಜಿನಗಳ ಕಾಟ ಬಹಳ ಜಾಸ್ತಿ ಆಗಿದೆ. ಅನೇಕ ಸ್ನೇಹಿತರು ಹೇಳಿದ್ದಾರೆ. ಈ ರೋಗರುಜಿನಗಳು ಕೆಲವು ಇಲಾಖೆಯವರಿಂದ ನಾಶ ಮಾಡಲ್ಪಡುತ್ತವೆ. ಕೆಲವು ರೋಗಗಳಿಗೆ, ಅವರನ್ನು ಕರೆದುಕೊಂಡು ಬಂದರೆ, ಇದು ಹೊಸ ರೋಗ, ಕೊಂಚ ರಿಸರ್ಚ್‌ಮಾಡಿ ಏನು ಔಷಧಿ ಉಪಯೋಗಿಸಬೇಕು ಎಂಬುದನ್ನು ಕಂಡುಹಿಡಿದು ನಂತರ ಚಿಕಿತ್ಸೆ ಮಾಡೋಣ, ಈಗ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಉನ್ನತ ಅಧಿಕಾರಿಗಳು ಹೇಳಿದ್ದಾರೆ. ಈ ಬೆಂಕಿ ರೋಗಕ್ಕೆ ಇನ್ನೂ ಔಷಧಿಯನ್ನು ಕಂಡುಹಿಡಿದಿಲ್ಲ. ಬತ್ತದ ಪೈರಿಗೆ ಬರತಕ್ಕ ಅನೇಕ ರೋಗರುಜಿನಗಳಿವೆ, ಅವುಗಳನ್ನು ನಿವಾರಣೆ ಮಾಡಲು ಔಷಧಿಗಳನ್ನುಪಯೋಗಿಸಲು ಬೇಕಾದ ಸಲಕರಣೆಗಳಿಲ್ಲ. ಸಾಧಾರಣವಾಗಿ ನಾನು ಮಂಡ್ಯಾ ಜಿಲ್ಲೆಯಲ್ಲಿ ನಮ್ಮ ವ್ಯವಸಾಯದ ಇಲಾಖೆಯೊಡನೆ ಹೆಚ್ಚಿನ ಸಂಪರ್ಕವನ್ನಿಟ್ಟುಕೊಂಡಿರುವ ಮನುಷ್ಯ. ಆಗಾಗ್ಗೆ ಮೀಟಿಂಗ್ ನಡೆಯುತ್ತಾ ಇರುತ್ತದೆ. ಸೂಚನೆ ಕೊಡುತ್ತೇವೆ. ಔಷಧಿಗಳನ್ನು ಹಾಕಬೇಕಾದ ಸಂದರ್ಭ ಬಂದರೆ ಅಲ್ಲಿ ಸ್ಪ್ರೇಯರ್ ಇರುವುದಿಲ್ಲ, ಡಸ್ಟರ್ ಇರುವುದಿಲ್ಲ. ಪಂಪುಗಳಿಗೆ ಬೇಕಾದ ವಾಷರ್ ನಾಲ್ಕು-ಎಂಟು ಆಣೆ ಖರ್ಚು ಮಾಡಿ ಪಡೆಯಲು ಅವಕಾಶವಿದ್ದರೂ ಕೂಡ ಅದಕ್ಕೆ ಮೇಲ್ಪಟ್ಟ ಅಧಿಕಾರಿಗಳ ಅಪ್ಪಣೆಬೇಕು. ಅಲ್ಲಿಯವರೆಗೂ ಖರ್ಚುಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ, ಸ್ಪ್ರೇಯರ್, ಡಸ್ಟರ್ ಇವುಗಳನ್ನು ಉಪಯೋಗಿಸದೆ ಕೆಲಸಕ್ಕೆಬಾರದ ರೀತಿಯಲ್ಲಿ ಇಟ್ಟುಕೊಂಡಿದ್ದಾರೆ. ಹೀಗೆ ಇಟ್ಟುಕೊಳ್ಳುವುದಾದರೆ ಎಷ್ಟು ಮಾತನಾಡಿ ತಾನೆ ಏನು ಪ್ರಯೋಜನ? ಅದಕ್ಕೆ ಬದಲಾಗಿ ದೇಶದಲ್ಲಿ ಆಗತಕ್ಕ ಖುಷ್ಕಿ ಬೆಳೆ ಏನು, ತರೀಬೆಳೆ ಎಲ್ಲಿ ಬೆಳೆಯುತ್ತಾರೆ, ಆ ಪ್ರದೇಶಕ್ಕೆ ಏನು ಸಾಧನ ಸಂಪತ್ತುಗಳು, ಸೌಲಭ್ಯಗಳನ್ನು, ಒದಗಿಸಬೇಕೋ ಅವನ್ನು ಪೂರ್ವಭಾವಿಯಾಗಿ ಯೋಚನೆಮಾಡಿ ಆ ಸಹಾಯಗಳನ್ನೆಲ್ಲಾ ಸಕಾಲದಲ್ಲಿ ಒದಗಿಸಿಕೊಡುವುದಾದರೆ ಹೆಚ್ಚಿನ ಪ್ರಯೋಜನವಾಗುತ್ತದೆ. ಇಲಾಖೆಯವರಿಗೆ ಅಧ್ಯಕ್ಷರ ಮುಖೇನ ಮಾನ್ಯ ವ್ಯವಸಾಯ ಮಂತ್ರಿಗಳಲ್ಲಿ ಪ್ರಾರ್ಥನೆ ಏನೆಂದರೆ, ಈಸಾರಿ ಕೆಲವು ಕಡೆ ಹೊಸ ಕಡಲೆಕಾಯಿಬೀಜಕೊಟ್ಟು, ಒಳ್ಳೆಯ ಬೆಳೆ ಬರುತ್ತದೆ, ಅದನ್ನು ಬೆಳೆಯಿರಿ ವಾಪಸು ಕೊಂಡುಕೊಳ್ಳುತ್ತೇವೆ ಎಂದು ಹೇಳಿದರು. ಅವರು ಹೇಳಿದ ಹಾಗೆ ಬೆಳೆ ಮಾಡಿದರು. ಅರ್ಧ ಭಾಗ ಎಲ್ಲಾ ಕೊಳೆತು ಹೋಯಿತು. ಕಡಲೆಕಾಯನ್ನು ಸರಿಯಾದ ರೀತಿಯಲ್ಲಿ ಸ್ಟೋರ್ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಕಾಣುತ್ತದೆ. ಸರಿಯಾದ ರೀತಿಯಲ್ಲಿ ಇಟ್ಟುಕೊಂಡಿದ್ದ ಪಕ್ಷದಲ್ಲಿ ಇಷ್ಟು ಬೆಳೆ ನಷ್ಟವಾಗುತ್ತಾ ಇರಲಿಲ್ಲ. ಇದೇರೀತಿ ಹುಚ್ಚಮಾಸ್ತಿಗೌಡರು ಮಾತನಾಡುವಾಗ ಹೇಳಿದರು—ರಾಗಿ ಬಿತ್ತನೆಕೊಟ್ಟ 32 ದಿವಸದಲ್ಲೇ ಒಡೆ ಬಂದು ಹಾಳಾಗಿಹೋಯಿತು. ಅಧಿಕಾರಿಗಳು ಸರಿಮಾಡಿ ಸೂಚನೆ ಕೊಡದೆ ಅಂತಹ ಬಿತ್ತನೆಕೊಟ್ಟರೆ ಸರ್ಕಾರದಲ್ಲಿ ಕೆಟ್ಟ ಹೆಸರು, ಇಲಾಖೆಗೂ ಕೆಟ್ಟಹೆಸರು. ಆ ರೀತಿ ಕೆಟ್ಟಹೆಸರು ತರತಕ್ಕವರ ವಿಷಯದಲ್ಲಿ ದಯವಿಟ್ಟು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

5 P.M.

ಸ್ವಾಮಿ, ನನಗೆ ಕೊಟ್ಟಿರತಕ್ಕ ಕಾಲ ಬಹಳ ಕಡಮೆ ಇದೆ. ನಾನು ಇನ್ನು ಹೆಚ್ಚು ಕಾಲವನ್ನು ಉಪ

(ಶ್ರೀ ಎಚ್. ಎ. ವೀರೇಗೌಡ)

ಯೋಗಿಸಿಕೊಳ್ಳುವುದಿಲ್ಲ. ವ್ಯವಸಾಯ ಇಲಾಖೆಯವರು ಮಾಡುವ ಕೆಲಸಕಾರ್ಯಗಳಲ್ಲಿ ನಾನಾ ಲೋಪದೋಷಗಳಿವೆ. ಈ ಲೋಪದೋಷಗಳನ್ನೆಲ್ಲ ಈ ಸಭೆಯಲ್ಲಿ ಹೇಳಲು ಕಾಲಾವಕಾಶವಿಲ್ಲ. ಇಲಾಖಾಧಿಕಾರಿಗಳು ಸುಮ್ಮನೆ ಲೆಕ್ಚರ್ ಹೊಡೆದು ಹೋಗುವುದಕ್ಕೆ ಬದಲಾಗಿ ವ್ಯವಸಾಯ ಪದ್ಧತಿಯನ್ನು ಉತ್ತಮಪಡಿಸುವ ಸಂದರ್ಭದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸಂಚಾರಮಾಡಿ, ರೈತರಿಗೆ ತಿಳಿವಳಿಕೆಯನ್ನು ಕೊಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ವ್ಯವಸಾಯ ಸಂಘಗಳಿವೆ. ಯಾವ ಬೆಳೆಯನ್ನೇ ಇಡಲಿ ಆ ಕಾಲಕ್ಕೆ ಒಂದು ತಿಂಗಳು ಮುಂಚಿತವಾಗಿ ಪ್ರತಿ ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಇಲಾಖಾಧಿಕಾರಿಗಳು ಪ್ರವಾಸಮಾಡಿ, ಆ ಪ್ರಾಂತದ ವ್ಯವಸಾಯಗಾರರನ್ನೆಲ್ಲ ಒಟ್ಟುಗೂಡಿಸಿ ಅವರಿಗೆ ಸಲಹೆಗಳನ್ನು ಕೊಟ್ಟು ಆ ಬೆಳೆಯನ್ನು ಬೆಳೆಯಲು ಬೇಕಾಗಿರುವ ಸಲಕರಣೆಗಳನ್ನು ಒದಗಿಸಬೇಕು. ರೈತನು ಅವರು ಕೊಟ್ಟ ಸಲಹೆಗಳ ಪ್ರಕಾರ ವ್ಯವಸಾಯ ಮಾಡುವುದಿಲ್ಲ, ಬೆಳೆಯುವುದಿಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಪೇಪರ್ ಹೊರಡಿಸಿ, ಹಸ್ತಪ್ರತಿಗಳನ್ನು ಹೊರಡಿಸಿ ; ಅದರ ಪ್ರಕಾರ ರೈತ ಬೆಳೆಯುವುದಿಲ್ಲವೆಂದು ಹೇಳಿದರೆ ರೈತನಿಗೆ ಸರಿಯಾದ ತಿಳಿವಳಿಕೆಯನ್ನು ಕೊಡಬೇಕು. ರೈತನು ಮನಸ್ಸು ಮಾಡಿ ಬೆಳೆಯನ್ನು ತೆಗೆದರೆ ಆಹಾರ ಭಾವವಿರುವುದಿಲ್ಲ. ಈಗ ಕಬ್ಬು ಬೆಳೆಯುವುದಕ್ಕೆ ಗ್ಯಾರಂಟಿ ಕೊಟ್ಟಿದ್ದೀರಿ. ಇದಕ್ಕೆ ಟನ್ ಒಂದಕ್ಕೆ ಮೂವತ್ತೈದು ರೂಪಾಯಿ ಪ್ರಕಾರ ಕೊಟ್ಟು ತಗೆದುಕೊಳ್ಳುತ್ತೇವೆಂಬ ಒಂದು surety ಇದೆ. ರೈತನು ಬೆಳೆಯತಕ್ಕ ಇತರ ಪದಾರ್ಥಗಳಿಗೆ ಬೆಲೆಯ ವಿಷಯದಲ್ಲಿ ಈ ರೀತಿ surety ಇಲ್ಲ. ಆದುದರಿಂದ ಅವನು ಯಾವ ಪದಾರ್ಥಗಳಿಗೆ ಬೆಲೆ ಜಾಸ್ತಿ ದೊರೆಯುತ್ತದೆಂದು ತಿಳಿದುಕೊಂಡು ಆ ಬೆಳೆಯನ್ನೇ ಬೆಳೆಯುತ್ತಾನೆ. ಇಂಥ ಬೆಳೆಯನ್ನೇ ಬೆಳೆಯಬೇಕು ಎಂದು ಹೇಳುವುದಾದರೆ ಗೊತ್ತಾದ ಬೆಳೆಯನ್ನು ಭತ್ತವನ್ನಾಗಲಿ, ರಾಗಿಯನ್ನಾಗಲಿ ಬೆಳೆದರೆ, ಇಷ್ಟೇ ಬೆಲೆಯನ್ನು ಕೊಡುತ್ತೇವೆಂದು surety ಕೊಡಬೇಕು, ಆ ರೀತಿ surety ಯನ್ನು ಕೊಟ್ಟರೆ ರೈತನು ಇಂಥ ಬೆಳೆಯನ್ನೇ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆಂದು ಹೇಳಬಹುದು. ಇಲ್ಲದೆ ಇದ್ದರೆ ತನಗೆ ಯಾವ ಬೆಳೆಯಿಂದ ಹೆಚ್ಚು ಹಣ ಬರುತ್ತದೆಂಬ ನಂಬಿಕೆ ಇರುತ್ತದೆಯೋ ಅಂಥಾ ಬೆಳೆಯನ್ನು ಮಾತ್ರ ಬೆಳೆಯುತ್ತಾನೆ. ಆದುದರಿಂದ ಆಹಾರ ಪದಾರ್ಥಗಳನ್ನು ಅದಕ್ಕೆ ಒಂದು ನಿರ್ದಿಷ್ಟವಾದ ಬೆಲೆಯನ್ನು ಕೊಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುವುದಾದರೆ, ಈಗಿರುವ ಆಹಾರಾಭಾವ ಸ್ವಲ್ಪಮಟ್ಟಿಗೆ ಕಡಮೆಯಾಗುತ್ತದೆಂದು ಸೂಚನೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರುವ ಆಹಾರ ಸಮಸ್ಯೆ ವಿಚಾರದಲ್ಲಿ ನಾನು ಕೆಲವೇ ಮಾತುಗಳನ್ನು ಹೇಳಬಯಸುತ್ತೇನೆ. ನಮಗೆ ಒದಗಿಸಿಕೊಟ್ಟಿರುವ ಅಂಕಿ ಸಂಖ್ಯೆಗಳಿಂದ ನಮ್ಮ ಆಹಾರದ ಕೊರತೆ ಸುಮಾರು ಮೂರು ಲಕ್ಷ ಟನ್ ಆಗುತ್ತದೆಂದು ತಿಳಿದು ಬರುತ್ತದೆ. ಈ ಅಂಕಿ ಸಂಖ್ಯೆಗಳು ನಮಗೆ ದೊರೆತಿರುವುದು ವಿಲೇಜ್ ಆಫೀಸರ್ಸ್ ಪಹಣಿ ಏನು ಬರೆಯುತ್ತಾರೆಯೋ ಅದರ ಆಧಾರದಮೇಲೆ. ಇದರ ಮೇಲೆ ನಮ್ಮ ಭಾಷಣ ಅವಲಂಬಿಸಬೇಕಾಗಿದೆ, ಪಹಣಿಯನ್ನು ತಯಾರುಮಾಡುವಾಗ ಕುಲಕರ್ಣಿಗಳು ಜಮೀನಿನಮೇಲೆ ಹೋಗದೆ ಇವು ಇರುವಲ್ಲಿಯೇ ಬರೆಯುತ್ತಾರೆ. ಇದರಿಂದ ಸೇಂಗಾ ಹಾಕಿರುವ ಕಡೆ ಹತ್ತಿ, ಹತ್ತಿ ಹಾಕಿರುವ ಕಡೆ ಜೋಳ ಇತ್ಯಾದಿ ಬೆಳೆಗಳನ್ನು ಬೆಳೆದಿದ್ದಾರೆನ್ನುವ ವರದಿಗಳನ್ನು ಕೊಟ್ಟಿರುವ ಪರಿಸ್ಥಿತಿ ಅನೇಕ ಸಂದರ್ಭಗಳಲ್ಲಿ ಉಂಟಾಗಿದೆ. ಆದಕಾರಣ ನಾವು ಬರೀ ಅಂಕಿ ಸಂಖ್ಯೆಗಳನ್ನು ಮುಂದಿಟ್ಟುಕೊಂಡು— ಅವುಗಳನ್ನು ನಂಬಬಾರದು ಎಂದು ಹೇಳುತ್ತಿಲ್ಲ—ಅದರಮೇಲೆ ನಮ್ಮ ಆಹಾರ ಪರಿಸ್ಥಿತಿ ಹೀಗೆಯೇ ಇದೆ ಎಂದು ತಿಳಿದು ನಮ್ಮಲ್ಲಿ ಆಹಾರದ ಕೊರತೆ ಇಲ್ಲವೆಂದು ಹೇಳಿಕೊಳ್ಳುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಆದುದರಿಂದ ಈಗ ನಮಗೆ ಕೊರತೆ ಬೀಳುತ್ತದೆಂದು ಹೇಳಿರುವುದಕ್ಕಿಂತಲೂ ಹೆಚ್ಚು ಕೊರತೆ ಬರುತ್ತದೆ. ಸುಮಾರು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕಾಗಿ ತುಂಗಭದ್ರ ಪ್ರಾಜೆಕ್ಟಿನಂಥ ಹತ್ತಾರು ಪ್ರಾಜೆಕ್ಟುಗಳನ್ನು ಕಟ್ಟಿದ್ದಾರೆ....... ...

Sri B. K. PUTTARAMIYA.—I rise to a point of order, Sir. ಈಗ ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ದೇಶದ ಆಹಾರ ಪರಿಸ್ಥಿತಿಯನ್ನು ಚರ್ಚೆಮಾಡುವುದು ಎಂದಿದೆ. ಸದಸ್ಯರು ಆ scopeನಲ್ಲಿ ಮಾತನಾಡದೆ ಆಹಾರದ ಉತ್ಪತ್ತಿ ವಿಷಯವಾಗಿ ಮಾತನಾಡುತ್ತಿದ್ದಾರೆ. ಇದು ಆಗಬಹುದೇ ?

....

Mr. CHAIRMAN.—I think I have understood the point of order. A point of order should be raised in a pithy manner. I have understood it. There is no point of order. The question of food raises problems of production, distribution and so everything is included. There is no point of order. Let him not intervene and waste the time of the House. Sri M. M. Patil may continue his speech.

Sri B. K. PUTTARAMIYA.—I am not wasting the time of the House, Sir. I raised a point of order.

Mr. CHAIRMAN.—I have over-ruled it.

ಶ್ರೀ ಎಂ. ಎಂ. ಪಾಟೀಲ್.—ತುಂಗಭದ್ರ ಪ್ರಾಜೆಕ್ಟಿಗೆ 64 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಒಂದು ದೊಡ್ಡ ರಿಸರ್ವಾಯರ್‌ರನ್ನು ಮಾಡಿಕೊಂಡಿದ್ದೇವೆ. ಹೆಚ್ಚಿನ ಆಹಾರವನ್ನು ಬೆಳೆಸಲು ಕೆಳಮಟ್ಟದ ಕಾಲುವೆಯನ್ನು ತೆಗೆದು ಬಳ್ಳಾರಿ ಜಿಲ್ಲೆಯಲ್ಲಿ 92 ಸಾವಿರ ಎಕರೆ ಜಮೀನನ್ನು ಸಾಗುವಳಿಗೆ ತರಬೇಕಾಗಿದೆ. ಇವರಲ್ಲಿ localisation ಆಗಬೇಕಾದರೆ ಬಹಳ ತಪ್ಪಾಗಿದೆ. ಇದರಿಂದ ಹೆಚ್ಚು ಆಹಾರಧಾನ್ಯವನ್ನು ಬೆಳೆಯಲಿಕ್ಕೆ ಅವಕಾಶವಿಲ್ಲದ ಪರಿಸ್ಥಿತಿಯಾಗಿದೆ. ಈ ವಿಚಾರವನ್ನು ನಾವು ಕಾಲಕಾಲಕ್ಕೆ ರಾಜ್ಯದ ಮುಖ್ಯಮಂತ್ರಿಗಳ ಮತ್ತು ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈ localisation schemeನಲ್ಲಿ ಪುನಃ ಪರಿಶೀಲನೆಮಾಡಿ ನಮಗೆ ಬರತಕ್ಕ ವಾಟರ್ ಷೇರ್ ಏನಿವೆ ಅದನ್ನು ನಾವು ನಮ್ಮ ಜಮೀನುಗಳಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಏನೇನು

ಮಾಡಬೇಕೋ ಅವನ್ನೆಲ್ಲ ಮಾಡಬೇಕೆಂದು ಈ ಸಮಯದಲ್ಲಿ ಸೂಚನೆ ಮಾಡುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಬಗ್ಗೆ ನಿಮ್ಮ ಸಲಹೆ ಏನು?

ಶ್ರೀ ಎಂ. ಎಂ. ಪಾಟೀಲ್.—ಲೋಕಲೈಜೇಷನ್ ಮಾಡುವಾಗ್ಗೆ, ವಿಶೇಷವಾಗಿ ಆಂಧ್ರ ರಾಜ್ಯದ ಅಧಿಕಾರಿಗಳು ಮದರಾಸು ಸರ್ಕಾರದಲ್ಲಿದ್ದರು. ತುಂಗಭದ್ರ ಪ್ರಾಜೆಕ್ಟಿನಿಂದ ರಾಯಲ ಸೀಮೆಗೆ ಹೆಚ್ಚು ಅನುಕೂಲವಾಗುತ್ತದೆ, ಇದರಿಂದ ಅಲ್ಲಿ ಉತ್ಪನ್ನ ಜಾಸ್ತಿಯಾಗಬೇಕು ಎನ್ನುವ ದೃಷ್ಟಿಯಿಂದ, 200 ಮೈಲಿ ಉದ್ದದ ಕಾಲುವೆ ನಮ್ಮ ದೇಶದಲ್ಲಿ ಹೋಗುವುದರಿಂದ tail-end ಭಾಗಗಳಿಗೆ ನೀರು ಕಡಮೆಯಾಗುತ್ತದೆ ಎಂದು ಭಾವಿಸಿ, ಇನ್ನೂ ಒಂದು ವಿಚಾರ ಹೇಳಬೇಕೆಂದರೆ, ಕೃಷ್ಣ ಡೆಲ್ಟ ಪ್ರದೇಶದಲ್ಲಿ ವರ್ಷಕ್ಕೆ ಮೂರು ಬೆಳೆಗಳನ್ನು ತೆಗೆಯುವಂತೆ ಮಾಡಬೇಕು ಎನ್ನುವ ದೃಷ್ಟಿಯಿಂದ, ಆ ಅಧಿಕಾರಿಗಳು localisation ಮಾಡುವಾಗ ಬಹಳ ಚಾಕಚಕ್ಯತೆಯಿಂದ ಮಾಡಿ ನಮ್ಮ ಬಳ್ಳಾರಿ ಜಿಲ್ಲೆಗೆ ಬಹಳ ಅನ್ಯಾಯ ಮಾಡಿದ್ದಾರೆ. ಇದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ನಮ್ಮ ಮುಂದಿರುವ ಪಟ್ಟಿಯ ಪ್ರಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇವುಗಳ ಪ್ರಕಾರ 331 ಲಕ್ಷ ರೂಪಾಯಿಗಳನ್ನು ನಾವು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚು ಮಾಡುವವರಿದ್ದೇವೆ. ನಮ್ಮಲ್ಲಿ ಪ್ರಕೃತಿದತ್ತವಾದ, ದೈವದತ್ತವಾದ ಅನೇಕ ಸೌಲಭ್ಯಗಳಿವೆ. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 150 ಮೈಲಿಗಳ ದೂರದವರೆಗೆ ತುಂಗಭದ್ರ ನದಿಯು ಹರಿದುಕೊಂಡು ಹೋಗುತ್ತದೆ. ತುಂಗಭದ್ರ ಪ್ರಾಜೆಕ್ಟ್‌ನಿಂದ ವಿದ್ಯುತ್ತನ್ನು ಉತ್ಪನ್ನ ಮಾಡುತ್ತಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ನಾವು ಕಳೆದ ಮೂರು ನಾಲ್ಕು ವರ್ಷಗಳಿಂದಾಗಾಯ್ತು ಜನಗಳಿಗೆ ಪಂಪ್‌ಸೆಟ್ ಒದಗಿಸಿಕೊಡಿ, ಲೈನ್ ಎಳೆದು ವಿದ್ಯುತ್ತನ್ನು ಒದಗಿಸಿಕೊಡಿ ಎಂದು ಕೇಳುತ್ತಿದ್ದೇವೆ. ಹಡಗಲಿ ತಾಲ್ಲೂಕಿನಲ್ಲಿ, ಹಡಗಲಿ ಟೌನ್ ಒಂದರಲ್ಲಿಯೇ 200 ಬಾವಿಗಳಲ್ಲಿ ಏತವನ್ನು ಉಪಯೋಗಿಸಿ ನೀರನ್ನೆತ್ತಿ ವ್ಯವಸಾಯ ಮಾಡುತ್ತಿದ್ದಾರೆ. ಅಲ್ಲಿನ ಜನಗಳು ನಮಗೆ ವಿದ್ಯುಚ್ಛಕ್ತಿಯನ್ನು ಕೊಡಿರಿ, ಹೆಚ್ಚಿಗೆ ಆಹಾರ ಸಾಮಗ್ರಿಗಳನ್ನು ಬೆಳೆದುಕೊಡುತ್ತೇವೆ, ಎಂದು ಹೇಳಿದರೂ ಸರ್ಕಾರದವರು ಆ ಕಡೆ ಗಮನವನ್ನೇ ಕೊಟ್ಟಿಲ್ಲ. ಯಾವ ಕಾರ್ಯವೇ ಆಗಲಿ ಮಂಜೂರಾದಮೇಲೆ ಅದು ಕಾರ್ಯರೂಪಕ್ಕೆ ಬರದೆ ಇರುವುದರಿಂದ ಬಹಳ ತೊಂದರೆಯಾಗುತ್ತದೆ. ತುಂಗಭದ್ರದಲ್ಲಿ ಉತ್ಪತ್ತಿಯಾಗುವ ವಿದ್ಯುತ್ತನ್ನು ಒದಗಿಸಲು ಬೇಕಾದ ಏರ್ಪಾಡುಗಳನ್ನು ಮಾಡದೇ ಇರುವುದರಿಂದ ಆಹಾರ ಸಾಮಗ್ರಿಗಳನ್ನು ಬೆಳೆಯುವ ವಿಷಯದಲ್ಲಿ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೇವೆಯೋ ಅದನ್ನು ಮುಟ್ಟುವುದಕ್ಕೆ ಆತಂಕಗಳು ಜಾಸ್ತಿಯಾಗಿ ಬರುತ್ತವೆ. ಈ ಕೆಲಸವನ್ನು ಕಾರ್ಯರೂಪಕ್ಕೆ ತರಲಿಕ್ಕೆ ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ನಾನು ವಿನಯಪೂರ್ವಕವಾಗಿ ಅವರಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತಿದ್ದೇನೆ.

ಹಡಗಲಿ ತಾಲ್ಲೂಕಿನಲ್ಲಿ ಸುಮಾರು 42 ಗ್ರಾಮಗಳು ತುಂಗಭದ್ರಾ ಯೋಜನೆಯಲ್ಲಿ ಮುಳುಗಡೆಯಾಗಿ ಆ ಜನರು ಬೇರೆ ಕಡೆ ನೆಲಸಿದ್ದಾರೆ; ನೀರಾವರಿ ಯೋಜನೆಗಳಲ್ಲಿ ಅನುಭವವಿರುವರು ಹಗರಿಬೊಮ್ಮನಹಳ್ಳಿಯ ಸುತ್ತ ಮುತ್ತ ನೆಲಸಿದ್ದಾರೆ. ಇವರಿಂದ ಯೋಜನೆಯ ಕೆಲಸ ನಡೆಯುತ್ತದೆ. ಹಗರಿಬೊಮ್ಮನಹಳ್ಳಿ ಯೋಜನೆ 79,41 ಲಕ್ಷ ರೂಪಾಯಿಗೆ ಅಂದಾಜಾಗಿತ್ತು; ಇದರಿಂದ 7,350 ಎಕರೆ ಭೂಮಿ ನೀರಾವರಿಯಾಗುತ್ತದೆ, ಪ್ಲಾನಿಂಗ್ ಕಮಿಷನ್‌ನವರು ಕೂಡ ಒಪ್ಪಿದ್ದಾರೆ. ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿದ್ದಾರೆ. ಟೆಂಡರ್ ಕರೆದರು. ಆದರೂ ಈ ಕಾರ್ಯ ಪ್ರಾರಂಭವಾಗದೆ ನಿಂತಿರುವುದರಿಂದ ನಮ್ಮ ಆಹಾರೋತ್ಪತ್ತಿಯನ್ನು ಹೆಚ್ಚುಮಾಡಲು ತೊಂದರೆಯಾಗಿದೆ. ಯಾವುದೇ ಕಾರ್ಯವನ್ನು ನಾವು ತೆಗೆದುಕೊಂಡರೂ ಅದನ್ನು ಕಾರ್ಯಗತ ಮಾಡದಿದ್ದರೆ ನಮ್ಮ ಗುರಿಯನ್ನು ಸಾಧಿಸುವುದು ಕಷ್ಟವಾಗುತ್ತದೆ. ಇದನ್ನು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಸೂಚಿಸುತ್ತೇನೆ. ರೈತರಿಗೆ ಅನೇಕ ಆತಂಕಗಳಿವೆ. ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕು ಆಹಾರದ ವಿಷಯದಲ್ಲಿ ಸ್ವಪರಿಪೂರ್ಣವಾದ ತಾಲ್ಲೂಕು. ಹಿಂದೆ ಯುದ್ಧಕಾಲದಲ್ಲಿ ಇಡೀ ಜಿಲ್ಲೆಗೇ ಆ ತಾಲ್ಲೂಕು ಆಹಾರವನ್ನೊದಗಿಸುತ್ತಿತ್ತು. ಹಿಂದೆ ತಂಜಾವೂರಿನಲ್ಲಿ ಕ್ಷಾಮ ಬಂದಾಗ ನಮ್ಮ ತಾಲ್ಲೂಕಿನಿಂದ ಅಲ್ಲಿಗೆ ಆಹಾರ ವೊದಗಿಸಿದ್ದೇವೆ, ಹಡಗಲಿ ತಾಲ್ಲೂಕಿನವರು ಯಾರು ಕೇಳಿದರೂ ಆಹಾರ ಕೊಡುತ್ತಿದ್ದರು. ಆದರೆ ಈಗೀಗ ರೈತರ ಸ್ಥಿತಿ ಬಹಳ ಕಷ್ಟವಾಗಿರುವುದರಿಂದ ಪರಿಸ್ಥಿತಿ ಬೇರೆಯಾಗಿದೆ. ಅಲ್ಲಿ ರೈತರು ಬೆಳೆದುದನ್ನು ಬಹಳ ಕಾಲ ಇಟ್ಟುಕೊಳ್ಳುವುದಕ್ಕೂ ಅವಕಾಶವಿಲ್ಲವಾಗಿದೆ. ಆದಕಾರಣ ಅಲ್ಲಿ ವೇರ್‌ಹೌಸ್ ಕಟ್ಟಿಸಿ ಗೋಡೌನ್ ಮಾಡಿಕೊಳ್ಳಲು ಸರ್ಕಾರ ಸಾಲ ಮತ್ತು ಸಹಾಯ ಕೊಡಬೇಕು. ಅಂಥ ಹೆಚ್ಚು ಬೆಳೆಯುವ ಸ್ಥಳದಲ್ಲಿ ಗೋಡೌನ್ ಕಟ್ಟದೇಯಿರುವುದು ವಿಷಾದಕರವಾದ ಸಂಗತಿ. ಅಲ್ಲಿ ಗೋಡೌನ್ ಕಟ್ಟಲು ಸಹಕಾರ ಸಂಘಗಳ ಮೂಲಕ ಹಣ ಸಹಾಯವನ್ನೊದಗಿಸಿದರೆ, ಆಹಾರ ಕೊರತೆಯೂ ಕಡಮೆ ಯಾಗುತ್ತದೆ ರೈತರಿಗೂ ಅನುಕೂಲವಾಗುತ್ತದೆ ಅಲ್ಲದೆ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲೂ ಅವಕಾಶವಾಗುತ್ತದೆ.

ಇನ್ನೊಂದು ಮಾತು ಹೇಳಿ ಮುಗಿಸುತ್ತೇನೆ. ಸಾಕಷ್ಟು ಗೊಬ್ಬರ ವಗೈರೆ ದಾಸ್ತಾನು ಮಾಡಿ ಸಕಾಲದಲ್ಲಿ ಕೊಡದೇಯಿರುವುದರಿಂದ ರೈತರಿಗೆ ಅನಾನುಕೂಲವಾಗುತ್ತಿದೆ. ಹೊಸಪೇಟೆ ತಾಲ್ಲೂಕಿನಲ್ಲಿ ದಾಸ್ತಾನಿಡುವುದಕ್ಕೆ ಅವಕಾಶವಿಲ್ಲವಾಗಿದೆ, ಸಹಕಾರ ಸಂಘದವರು ಲೈಸೆನ್ಸ್ ತೆಗೆದುಕೊಂಡಿಲ್ಲ, ಬೇರೆಯವರಿಗೆ ಅವಕಾಶ ಕೊಟ್ಟರೆ ಸಿದ್ಧವಾಗಿದ್ದಾರೆ ಖಾಸಗಿಯವರಿಗೆ ಕೊಡಿ ಎಂದು ನಾನು ಹೇಳುವುದಿಲ್ಲ. ಅಲ್ಲಿ ಗೊಬ್ಬರವನ್ನು ಸಕಾಲದಲ್ಲಿ ರೈತರಿಗೆ ಒದಗಿಸುವುದು ಮುಖ್ಯ. ಇನ್ನು ಮುಂದಾದರೂ ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡು ಇಂಥ ಆತಂಕಗಳನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ. ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ, ಟಿ. ಜಂಬಣ್ಣ (ದಾವಣಗೆರೆ).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀಮಾನ್ ಹನುಮಂತಯ್ಯನವರು ನಿನ್ನೆಯದಿವಸ ಭಾಷಣ ಮಾಡುವಾಗ ತಮ್ಮ ವಿಶಾಲವಾದ ಅನುಭವಗಳನ್ನು ಸಭೆಯ ಮುಂದಿಟ್ಟರು. ಕೊನೆಯಲ್ಲಿ ಅವರು ಒಂದು ಮಾತು ಹೇಳಿದರು. ಇಲಾಖೆಯಲ್ಲಿ ಯಾವ ನ್ಯೂನತೆಗಳೂ ಇಲ್ಲ, ತುಂಬಾ ಸಮರ್ಪಕವಾಗಿ ಸಾಮರ್ಥ್ಯದಿಂದ ಕೆಲಸಮಾಡುತ್ತಿವೆ ಎಂದು ಹೇಳಿ ಆ ಇಲಾಖೆಯವರಿಗೆ ಸಂರಕ್ಷಣೆ ಕೊಟ್ಟು ಮಾತನಾಡಿದರು. ಇದಕ್ಕೆ ವಿಷಾದಪಡಬೇಕಾಗಿದೆ. ಇಲಾಖೆಯವರ ಅಸಮರ್ಥತೆ, ಅಸಡ್ಡೆ, ಅನೇಕ ಸಂದರ್ಭದಲ್ಲಿ ಅಪವ್ಯಯ ಮುಂತಾದವುಗಳ ಬಗ್ಗೆ

(ಶ್ರೀ ಕೆ. ಟಿ. ಜಂಬಣ್ಣ)

ಕೆಲವು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಅವರು ಮತ್ತೊಂದು ವಿಷಯವನ್ನು ಹೇಳಿದರು, ಮಳೆಯ ಮೇಲೆ ಬಹುಭಾಗ ಆಹಾರ ಪರಿಸ್ಥಿತಿ ಅವಲಂಬಿಸಿದೆ, ಹಿಂದೆ 1951-52ನೆಯ ಇಸವಿಯಲ್ಲಿ ವಿಶೇಷ ಮಳೆಯಾಯಿತು, ವಿಶೇಷ ಬೆಳೆಬಂತು ಎಂದು ಹೇಳಿದರು. ಮಳೆಯಿಂದಲೇ ಎಲ್ಲವೂ ಆದರೆ. ಈ ಇಲಾಖೆ ಏಕೆ ಬೇಕು, ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಇದರ ಮೇಲೆ ಏಕೆ ಖರ್ಚುಮಾಡಬೇಕು ಎಂಬ ಪ್ರಶ್ನೆ ಏಳುತ್ತದೆ. ಮಳೆಯಿಂದ ಬೆಳೆಯಾಗುವುದು ಎಲ್ಲರಿಗೂ ಗೊತ್ತಿದೆ. ಆಹಾರ ಹೆಚ್ಚು ಬೆಳೆಯಬೇಕೆಂಬ ಪ್ರಶ್ನೆಯನ್ನು ತೆಗೆದುಕೊಂಡು ಸರ್ಕಾರ ಇದಕ್ಕಾಗಿ ಬೇಕಾದಷ್ಟು ಹಣವನ್ನೂ ಸೌಲಭ್ಯವನ್ನೂ ಕೊಟ್ಟು ಹದಿನಾಲ್ಕು ವರ್ಷಗಳ ಮೇಲಾಯಿತು, ಈ ಅವಧಿಯಲ್ಲಿ ಆಹಾರ ಹೆಚ್ಚು ಬೆಳೆಯುವ ಯೋಜನೆಗೆ ಒಟ್ಟು ಎಷ್ಟು ಕೋಟಿ ರೂಪಾಯಿಗಳು ವೆಚ್ಚವಾಗಿವೆ, ಅದರ ಪ್ರತಿಫಲ ಪರಿಣಾಮ ಏನೆಂದು ಯೋಚಿಸಿದರೆ ನಾವು ಬಹಳ ವ್ಯಥೆ ಪಡಬೇಕಾಗಿದೆ, ಇಲಾಖೆಯವರ ಅಸಮರ್ಥತೆ ಮತ್ತು ಅಸಡ್ಡೆ ವಿಶೇಷವಾಗಿದೆ; ಉದಾಹರಣೆಗೆ ಗುಳ ಮುಂಗಾರಿನಲ್ಲಿ ರೈತರಿಗೆ ಬೇಕಾಗುತ್ತದೆ. ಆದರೆ ಆ ಕಾಲದಲ್ಲಿ ಎಲ್ಲಿ ಕೇಳಿದರೂ ಸಿಕ್ಕುವುದಿಲ್ಲ. ಆದರೆ ಬ್ಲಾಕ್ ಮಾರ್ಕೆಟ್‌ನಲ್ಲಿ ಎಂಟು ಆಣೆಯ ಗುಳಕ್ಕೆ ಒಂದೂವರೆ ರೂಪಾಯಿ ಕೊಟ್ಟು ನಾನು ಕೊಂಡಿದ್ದೇನೆ. ಇಲಾಖೆಯವರನ್ನೂ ಸಹಕಾರ ಸಂಘಗಳನ್ನೂ ಕೇಳಿದರೆ ರೋಲಿಂಗ್ ಇಲ್ಲವೆಂದು ಹೇಳುತ್ತಾರೆ. ಯಾವ ಕಾಲದಲ್ಲಿ ರೋಲಿಂಗ್ ಮಾಡಬೇಕೋ ಆಗ ಮಾಡುವುದಿಲ್ಲ. ಮುಂಗಾರಿನಲ್ಲಿ ಹಳಿಪಟ್ಟೆ ತಯಾರುಮಾಡುತ್ತಾರೆ, ಹಿಂಗಾರಿನಲ್ಲಿ ಗುಳ ತಯಾರುಮಾಡುತ್ತಾರೆ. ಈ ಸಾಮಾನುಗಳನ್ನು ಮಾರಾಟಕ್ಕೆ ಸಂಘಗಳಿಗೆ ಕೊಡುತ್ತಾರೆ. ಅವರು ಏನು ಮಾಡುತ್ತಾರೆಂದರೆ, ಅವುಗಳನ್ನು ಹೋಲ್ ಸೇಲಿನಲ್ಲಿ ಬ್ಲ್ಯಾಕ್ ಮಾರ್ಕೆಟ್ಟಿನಿಂದ ಅಂಗಡಿಗಳವರಿಗೆ ಮಾರಾಟ ಮಾಡುತ್ತಾರೆ. ಮಾರ್ಕೆಟ್ಟಿನಲ್ಲಿ ಬ್ಲ್ಯಾಕ್ ರೇಟಿನಲ್ಲಿ ಬೇಕಾದಷ್ಟು ಕೇಳಿದಾಗ ಸಿಕ್ಕುತ್ತವೆ. ಇದನ್ನು ನಾವು ಅನುಭವಿಸುತ್ತಿದ್ದೇವೆ. ಏಪ್ರಿಲ್, ಮೇ ತಿಂಗಳಿನಲ್ಲಿ ಮುಂಗಾರಿನಲ್ಲಿ ರೈತರಿಗೆ ಗುಳ ಸರಬರಾಯಾಗಬೇಕು; ಹಳಿಪಟ್ಟೆ ಹಿಂಗಾರಿನಲ್ಲಿ ಸರಬರಾಯಾಗಬೇಕು. ಕೃತಕ ಗೊಬ್ಬರವನ್ನು ಹೋದ ವರ್ಷ ಮತ್ತು ಈ ವರ್ಷದ ಆಗಸ್ಟ್, ಸೆಪ್ಟೆಂಬರಿನಲ್ಲಿ ಸರಬರಾಯಿ ಮಾಡಿದ್ದಾರೆ. ಅದೂ ನೆಪಮಾತ್ರಕ್ಕೆ ಕೊಡುತ್ತಾರೆ, ಸಾಕಷ್ಟು ಕೊಡುವುದಿಲ್ಲ. ಆಯಾ ಜಿಲ್ಲೆಗೆ, ತಾಲ್ಲೂಕಿಗೆ ಎಷ್ಟೆಷ್ಟು ಬೇಕೆಂದು ಯೋಚನೆ ಮಾಡುವುದಿಲ್ಲ, ಕೇಳಿದರೆ, ಇನ್ನೂ ಬಂದಿಲ್ಲವೆಂದು ಹೇಳುತ್ತಾರೆ. ಇದೇ ಕಾಲದಲ್ಲಿ ಕೆಲವು ಸಹಕಾರ ಸಂಘಗಳವರು ಬೆಂಗಳೂರಿನಿಂದ ತಂದರು. ಶಿವಮೊಗ್ಗದಲ್ಲಿ ಆ ಕಾಲದಲ್ಲಿ ಬೇಕಾದಷ್ಟು ಗೊಬ್ಬರ ಸ್ಟಾಕ್ ಇತ್ತು. ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಬೇಕು, ಎಲ್ಲಿಗೆ ಹೆಚ್ಚು ಬೇಕು, ಎಲ್ಲಿಗೆ ಕಡಮೆ ಬೇಕು ಎನ್ನುವುದನ್ನು ನೋಡಿ ತಕ್ಕ ಏರ್ಪಾಡು ಮಾಡುವುದು ಇಲಾಖೆಯವರ ಮೇಲಿರುವ ಜವಾಬ್ದಾರಿ. ಎರಡು ಮೂರು ವರ್ಷಗಳಿಂದ ಇದನ್ನು ಸರಿಪಡಿಸಲು ಪ್ರಯತ್ನ ಮಾಡಿದರೂ ಫಲ ದೊರಕಿಲ್ಲ.

ಹಸರು ಗೊಬ್ಬರವನ್ನು ಎಷ್ಟೋ ವರ್ಷಗಳಿಂದ ಪ್ರಚಾರ ಮಾಡುತ್ತಿದ್ದಾರೆ. ಎಷ್ಟು ಕಾಡುಗಳಲ್ಲಿ ಹಸರು ಗೊಬ್ಬರವನ್ನು ಬೆಳೆಸುತ್ತಿದ್ದಾರೆ ಎರಡು ಮೂರು ವರ್ಷಗಳಿಂದ ಎಂಬ ಬಗ್ಗೆ ಅಂಕಿ ಅಂಶಗಳಿಲ್ಲ. ಬೀಜಗಳನ್ನು ಮುಂಗಾರಿಗೆ ಸರಬರಾಯಿ ಮಾಡಲು ವ್ಯವಸಾಯದ ಇನ್ಸ್‌ಪೆಕ್ಟರ ಮೂಲಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಗಿಡಗಳನ್ನು ತರಿಸಿಟ್ಟುಕೊಳ್ಳಬೇಕು. ಇವೆರಡನ್ನೂ ಮಾಡುವುದಿಲ್ಲ. ಎರಡು ತಿಂಗಳಿಂದ ನಾನು ಗಿಡಗಳನ್ನು ಕೇಳುತ್ತಿದ್ದೇನೆ. ಮಳೆಗಾಲದಲ್ಲಿ ಸರಬರಾಯಿ ಮಾಡಬೇಕು. ಸಪ್ಟೆಂಬರ್ ಅಕ್ಟೋಬರ್‌ನಲ್ಲಿ ತರಿಸುತ್ತಾರೆ, ಒಂದು ಗಿಡ ಕೂಡ ಉಳಿಯುವುದಿಲ್ಲ.

ಟ್ರ್ಯಾಕ್ಟರುಗಳನ್ನು ಸರ್ಕಾರದವರು ಹಿಂದೆ ಒದಗಿಸಿದರು. ಅನಂತರ ಅದರಿಂದ ಅಷ್ಟಾಗಿ ಸಹಾಯ ಮಾಡಲು ಸಾಧ್ಯವಿಲ್ಲವೆಂದು ಅರಿತುಕೊಂಡರು. ಪ್ರೈವೇಟಾಗಿ ಯಾರಾದರೂ ರೈತರು ಬಂದು ಕೇಳಿದರೆ ಕೆಲವೊಂದು ರಿಯಾಯತಿಯನ್ನು ಕೊಡಲೇಬೇಕು. ಇದರಲ್ಲಿ ಒಂದು ನ್ಯೂನತೆಯಿದೆ. ಹಿಂದೆ ಕಂಪೆನಿಯವರು ಯಾವುದಾದರೂ ಮೆಷೀನ್ ಕೇಳಿದರೆ ಕೊಟ್ಟು ಕಂತಿನ ಮೇಲೆ ಹಣ ಪಡೆಯುತ್ತಿದ್ದರು, ಹೈರ್ ಪರ್ಚೇಸ್ ಸಿಸ್ಟಂಮೇಲೆ ಕೊಡುತ್ತಿದ್ದರು. ಆದರೆ ನಮ್ಮ ಸರ್ಕಾರದವರು ಮೊದಲು $\frac{1}{4}$ ಭಾಗ ಹಣ ಕೊಟ್ಟು 20 ಸಾವಿರ ರೂಪಾಯಿ ಬೆಲೆ ಬಾಳುವುದಾದರೆ 40 ಸಾವಿರ ಆಧಾರ ಕೊಡಬೇಕೆಂದು ಹೇಳುತ್ತಿದ್ದಾರೆ. ಹೀಗೆ ಒಂದಕ್ಕೆ ಎರಡರಷ್ಟು ಆಸ್ತಿಯ ಆಧಾರ ಕೊಡಬೇಕೆಂದರೆ ಏನು ತಾನೆ ಅನುಕೂಲವಾದೀತು! ಮೆಷೀನ್ ಸರ್ಕಾರಕ್ಕೆ ದೀಡು ಇರುವಾಗ ಹೆಚ್ಚು ಆಧಾರ ಕೇಳಿದರೆ ಸರ್ಕಾರ ಉಪಕಾರವೇನು ಮಾಡಿದ ಹಾಗಾಯಿತೋ ಗೊತ್ತಿಲ್ಲ.

ಕಾಂಪೋಸ್ಟ್ ಪಿಟ್ಸ್ ವಿಚಾರದಲ್ಲಿ 10-15 ವರ್ಷಗಳಿಂದ ಪ್ರಚಾರಮಾಡುತ್ತಿದ್ದಾರೆ; ಕೆಲವೊಂದು ಮುನಿಸಿಪಾಲಟಿಗಳು ಇದರ ಅನುಕೂಲ ಪಡೆಯುತ್ತವೆ. ನಮ್ಮ ಊರಿನ ವಿಚಾರ ಹೇಳುತ್ತೇನೆ. ಮೊದಲು ನಮ್ಮೂರಿನ ಕಸ ಎರಡರಿಂದ ನಾಲ್ಕು ಸಾವಿರ ರೂಪಾಯಿಗಳವರೆಗೆ ಹರಾಜಾಗುತಿತ್ತು; 14 ವರ್ಷಗಳ ಹಿಂದೆ ಹಾಗಾಗುತ್ತಿತ್ತು. ಈಗ ಅದು 30-40 ಸಾವಿರಕ್ಕೆ ಹರಾಜಾಗುತ್ತಿದೆ; ವರ್ಷಕ್ಕೆ ಅಷ್ಟು ಉತ್ಪತ್ತಿ ಬರುತ್ತಿದೆ. ಹಳ್ಳಿಗಳಲ್ಲೂ ಏಕೆ ಪ್ರಚಾರಮಾಡಿ ಇದನ್ನು ಮಾಡುವುದಿಲ್ಲ! ಅಧಿಕಾರಿಗಳೇಕೆ ಹಳ್ಳಿಗಳಿಗೆ ಹೋಗುವುದಿಲ್ಲ! ವ್ಯವಸಾಯದ ಇಲಾಖೆ ಆಫೀಸರುಗಳು ಒಂದು ಹಳ್ಳಿಯನ್ನೂ ಕೂಡ ನೋಡಿಲ್ಲ, ಇನ್ಸ್‌ಪೆಕ್ಟರುಗಳು ಎರಡು ಮೂರು ತಿಂಗಳಿಗೆ ಒಂದು ಸಲ ಆ ಕಡೆ ಹೋಗುತ್ತಾರೆ.

ಕ್ರಿಮಿನಾಶಕವಿಧಾನ ಒಂದಿದೆ. ಎನ್.ಇ.ಎಸ್. ಬ್ಲಾಕುಗಳಲ್ಲಿ ಕ್ರಿಮಿನಾಶಕ ಪಂಪಿಂಗ್ ಸೆಟ್ ಇರುತ್ತದೆ. ಹೋದ ವರ್ಷ ಕೇಳಿದರೆ ನಾಲ್ಕು ಇವೆ, ಮೂರು ಕೆಟ್ಟಿವೆ ಎಂದು ಹೇಳಿದರು. ನಮ್ಮ ಕಡೆ ನೂರು ಎಕರೆಗೆ ಕಡಲೆಕಾಯನ್ನು ಒಬ್ಬೊಬ್ಬರು ಹಾಕುತ್ತಾರೆ. ಕೆಲವರಿಗೆ ನಷ್ಟವಾಗಿ ಎಕರೆಗೆ ಹತ್ತು ಚೀಲ ಬೆಳೆಯುವವರು ಒಂದುಚೀಲ ಬೆಳೆದಿದ್ದಾರೆ. ಸೀಡೆ ಬಿದ್ದರೆ ಹೀಗಾಗುತ್ತದೆ. ಅದನ್ನು ಹೋಗಲಾಡಿಸಬೇಕಾದರೆ ಒಬ್ಬೊಬ್ಬರ ಜಮೀನಿಗೆ 15 ದಿವಸ ಒಂದು ಪಂಪಿಂಗ್ ಸೆಟ್ ಬೇಕಾಗುತ್ತದೆ. ಇಲಾಖೆಯಲ್ಲಿ ನಾಲ್ಕು ಕೆಟ್ಟಸೆಟ್ಟು ಇಟ್ಟುಕೊಂಡಿರುತ್ತಾರೆ. ಬೇಕಾದಾಗ ಸಿಕ್ಕುವುದಿಲ್ಲ. ಇದೇನು ಪ್ರಚಾರಕ್ಕಾಗಿ ಇಟ್ಟುಕೊಂಡಿರುವುದೋ ಅಥವಾ ರೈತರ ಕಣ್ಣಲ್ಲಿ ಮಣ್ಣೆರಚುವುದಕ್ಕೆ ಇಟ್ಟುಕೊಂಡಿರುವುದೋ ಒಂದೂ ಗೊತ್ತಾಗುವುದಿಲ್ಲ. ಈ ಕೊರತೆ ನಿವಾರಣೆಯಾಗಬೇಕಾದರೆ ಏನು ಮಾಡಬೇಕೆಂದರೆ ರೈತರಿಗೆ ರಿಯಾಯಿತಿ ದರದಲ್ಲಿ ಪಂಪಿಂಗ್ ಸೆಟ್ ಕೊಟ್ಟು ಕೆಲಸಕ್ಕೆ ಅನುಕೂಲ ಮಾಡಬೇಕು. ಹಾಗೆ ಮಾಡಿದರೆ ಬಹಳಮಟ್ಟಿಗೆ ಸಹಾಯವಾಗುತ್ತದೆ.

ಬೆಂಕಿರೋಗದಿಂದ ಮತ್ತು ಸೀಡೆಯಿಂದ ಸೇಂಗಾ ಬೆಳೆ ಬಹಳ ನಷ್ಟವಾಗಿದೆ. ಫಾಲಿಡಾಲ್‌ನಿಂದ ಅದರ ನಿವಾರಣೆಗೆ ಸಹಾಯವಾಗುವುದಿಲ್ಲ. ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು.

ಜಪಾನ್ ಮೆಥಡ್ ಬಗ್ಗೆ ಬಹಳ ಪ್ರಚಾರವಿದೆ. ಇದು ಹೊಸದೆಂದು ತಿಳಿದುಕೊಂಡಿದ್ದಾರೆ. ಇಷ್ಟು ಫಾಸಲೆಯಲ್ಲಿ ಗಿಡ ನಾಟಹಾಕಬೇಕೆಂಬುದೇ ಇದರ ತತ್ವ. ನಮ್ಮಲ್ಲಿ ಇದು ಪೂರ್ವದಿಂದ ಇದೆ. ಇದಕ್ಕೆ ಗುಳಿ ಬೀಜ ದೂರ ಹಾಕುವುದು ಎಂದು ಹೇಳುತ್ತಾರೆ. ಈ ಬಗ್ಗೆ ಪ್ರಚಾರಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗಿದೆ, ನಮ್ಮ ರೈತರು ಬಡವರಾಗಿದ್ದಾರೆ. ಈ ರೀತಿ ವ್ಯವಸಾಯ ಮಾಡಲು ಹೆಚ್ಚು ಕೂಲಿಗಳು ಮತ್ತು ಗೊಬ್ಬರ ಬೇಕು; ಇದಕ್ಕೆ ಶಕ್ತಿಯಿಲ್ಲ. ಈಗಲೂ ಅನೇಕರು ಗುಳಿಹಾಕಿ ಸೊಸಿ ನೆಡುತ್ತಾರೆ. ಗುಳಿ ಹತ್ತಿ, ಗುಳಿ ಜೋಳ ಎಂದು ಹಿಂದೆ ಕರೆಯುತ್ತಿದ್ದೆವು.

ಆಮೇಲೆ ರಾಜಕೀಯದಲ್ಲಿ ನೊಂದವರಿಗೆ ಹತ್ತು ಸಾವಿರಗಟ್ಟಲೆ ಎಕರೆ ಜಮೀನು ಹಂಚುವುದು ತಪ್ಪು. ಪಿ.ಎಸ್.ಸಿ.ನಲ್ಲಿ ವಿಚಾರಿಸಿದರೆ ಎಸ್.ಎಸ್.ಎಲ್.ಸಿ. ಆದವರಿಂದ 25 ಸಾವಿರ ಅಪ್ಲಿಕೇಷನ್‌ಗಳು ಬಂದಿರುವುದಾಗಿ ತಿಳಿಯಿತು. ಸಾಮೂಹಿಕ ವಿಧಾನಕ್ಕೆ ಈ ಹುಡುಗರನ್ನೇಕೆ ಉಪಯೋಗಿಸಬಾರದು ! ಜಮೀನು ಹಂಚಿರುವುದರಲ್ಲಿ ಮುಕ್ಕಾಲುಭಾಗ ಮಾರಾಟವಾಗಿದೆ. ಜಮೀನನ್ನು ಯಾರೂ ಸ್ವಂತವಾಗಿ ಉಳುತ್ತಿಲ್ಲ.

(Many Hon'ble Members rose.)

Mr. CHAIRMAN.—This debate started yesterday and it was agreed by the Hon'ble House that the debate should be closed today. It will be of interest for Hon'ble Members to know that nearly 34 Hon'ble Members have spoken so far out of which 15 belong to the Opposition parties and 19 including Smt. Annapurnabai whom I have called upon to speak belong to the Congress Party. So, sufficient number of members have participated in the debate and all the points of view have been brought out and the purpose of the debate has been properly served. It is not possible to accommodate all the 208 members. Therefore, if I have to conclude today, the Chair is not in a position to accommodate any members. I hope this explanation would satisfy Hon'ble Members and I request them not to raise this point again.

*ಶ್ರೀಮತಿ ಅನ್ನಪೂರ್ಣಾಬಾಯಿ ರಾಗಟೆ (ಕಲ್ಯಾಣಿ).—ಮಾನ್ಯ ಅಧ್ಯಕ್ಷರೆ, ಆಹಾರ ಸಮಸ್ಯೆ ಬಗ್ಗೆ ನಿನ್ನೆಯಿಂದ ಚರ್ಚೆ ಮುಂದುವರಿದು ಬೇಕಾದಷ್ಟು ಚರ್ಚೆಯಾಗಿದೆ. ಆಹಾರ ಪರಿಸ್ಥಿತಿ ಬಗ್ಗೆ ಮಾತನಾಡಲು ಅನೇಕ ವಿಷಯಗಳಿವೆ. ಅಷ್ಟು ವಿಷಯಗಳನ್ನೂ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಹೆಚ್ಚುಕಾಲ ತೆಗೆದುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ವ್ಯವಸಾಯದ ಇಲಾಖೆಯ ಕೆಲವು ಅಧಿಕಾರಿಗಳು ಮಾಡುವ ಕೆಲಸ ನಾನು ಕಂಡಹಾಗೆ ಹೇಳಬೇಕಾದರೆ, ಅವರು ಗ್ರಾಮಗಳಿಗೆ ಬಂದು ಎಲ್ಲೋ ದೂರದಲ್ಲಿ ಕುಳಿತು ಅಮೋನಿಯಂ ಸಲ್ಫೇಟ್ ಹಾಕಿ, ಇಂಥ ಬೀಜ ಹಾಕಿ ಎಂದು ಬತ್ತುವಾಗ ಅಥವಾ ಆದಾದ ಮೇಲೆ ಹೇಳಿ ಹೊರಟು ಹೋಗುತ್ತಾರೆ. ಹೀಗೆ ಮಾಡಿದರೆ ಆಹಾರ ಸಮಸ್ಯೆ ಬಗೆಹರಿಸಿದಹಾಗಾಗುತ್ತದೆಯೆ ! ಇದರಿಂದ ಬೆಳೆ ಹೆಚ್ಚಾದ ಹಾಗೆ ನನಗೆ ಕಾಣುವುದಿಲ್ಲ.

5-30 P.M.

ನಮ್ಮ ಬೀದರ ಜಿಲ್ಲೆಗೆ ಸಂಬಂಧಪಟ್ಟ ಮಂತ್ರಿಗಳು ಬರುವುದೇ ಇಲ್ಲ ಎಂಬ ಭಾವನೆ ಇದೆ. ನಮ್ಮ ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲ. ಕುಡಿಯಲು ನೀರು ಸಹ ಇಲ್ಲ. ಸಣ್ಣದಾಗಲಿ ದೊಡ್ಡದಾಗಲಿ ಯಾವ ಯೋಜನೆಯೂ ಬೀದರ ಜಿಲ್ಲೆಯಲ್ಲಿ ಇಲ್ಲ. ತಿನ್ನಲು ಅಂಬಲಿ ಇಲ್ಲ. ಕುಡಿಯಲು ನೀರು ಇಲ್ಲ. ಈ ಜಿಲ್ಲೆಯಲ್ಲಿ ಸುಧಾರಣೆಗಳನ್ನು ಮಾಡಬೇಕಾದರೆ ಮೊದಲು ನೀರಾವರಿಯೋಜನೆಗಳನ್ನು ಹೆಚ್ಚಾಗಿ ಮಾಡಬೇಕು. ಭಾವಿಗಳನ್ನು ತೆಗೆಸಬೇಕು. ಸಣ್ಣಪುಟ್ಟ ಕೆಲಸಗಳನ್ನು ದುರಸ್ತಿಮಾಡಬೇಕು. ಅಂದರೆ ಜನರಿಗೆ ಸುಖವಾದೀತು ಎಂದು ನನ್ನ ಭಾವನೆ.

ಇನ್ನು ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಆಹಾರ ಸಮಸ್ಯೆಯನ್ನು ಪರಿಹರಿಸುವುದಕ್ಕಾಗಿ ನಮ್ಮ ದೇಶದಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವುದನ್ನು ತಡೆಗಟ್ಟುವುದಕ್ಕೆ ಫ್ಯಾಮಿಲಿ ಪ್ಲಾನಿಂಗ್ ಆಚರಣೆಯಲ್ಲಿ ತರಬೇಕೆಂದು ಹೇಳಿದರು. ಈ ವಿಷಯದಲ್ಲಿ ಹೆಣ್ಣುಮಕ್ಕಳಿಗೆ ಹೆಚ್ಚಾಗಿ ಮಾತನಾಡುವದಕ್ಕಾಗುವದಿಲ್ಲ. ಸದಸ್ಯರು ನಗುವದಕ್ಕಾಗಿ ಹಾಗೆ ಮಾತನಾಡಿದರೋ ಅಥವಾ ಯಾವ ಉದ್ದೇಶಕ್ಕಾಗಿ ಮಾತನಾಡಿದರೋ ಗೊತ್ತಾಗುವುದಿಲ್ಲ. ಈ ಬಗ್ಗೆ ಅವರ ಭಾವನೆ ಏನು ಇದೆ ಎಂಬುದು ಕಂಡುಬರುವುದಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಮಾಡಬೇಕು ಎಂಬುದು ಪ್ರಯೋಜನವಿಲ್ಲದ ಮಾತು. ಈ ವಿಷಯವನ್ನು ಅತಿಯಾಗಿ ಬೆಳೆಸಿ ಸದಸ್ಯರು ಮಾತನಾಡಿದ್ದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆಹಾರ ಸಮಸ್ಯೆಯಂಥ ವಿಷಯ ಸಭೆಯಲ್ಲಿ ಚರ್ಚಿಸುವಾಗ ಈ ರೀತಿಯಾಗಿ ಅದನ್ನು ಪ್ರಸ್ತಾಪಮಾಡಿದ್ದು ಒಳ್ಳೆಯದು ಎಂದು ಕಂಡುಬರುವುದಿಲ್ಲ.

ಬೀದರ ಜಿಲ್ಲೆಯಲ್ಲಿ ಬಡವರಿಗೆ ಬಹಳ ತೊಂದರೆ ಇದೆ. ನೀರಾವರಿಯೋಜನೆಗಳನ್ನು ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ನಮ್ಮ ಜಿಲ್ಲೆಯ ಎಲ್ಲ ಸದಸ್ಯರೂ ತಿಳಿಸಿದ್ದಾರೆ. 75 ಅಡಿಗಳವರೆಗೆ ಅಗೆದರೂ ಭಾವಿಗಳಲ್ಲಿ ನೀರು ಸಿಕ್ಕುವದಿಲ್ಲ. ಗುಡ್ಡಗಾಡು ಪ್ರದೇಶದಲ್ಲಿ ಕುಡಿಯಲಿಕ್ಕೆ ನೀರು ಸಹ ಸಿಕ್ಕುವುದಿಲ್ಲ. ಆದುದರಿಂದ ಈ ಪ್ರದೇಶದಲ್ಲಿ ಮುಖ್ಯವಾಗಿ ಯಾವುದಾದರೊಂದು ನೀರಾವರಿಯೋಜನೆಯನ್ನು ಮಾಡಬೇಕು. ಎಷ್ಟೋ ಕೆರೆಗಳು ದುರಸ್ತಿಯಾಗಬೇಕಾಗಿವೆ. ಕೆರೆ ಒಡೆದು ಸುಮ್ಮನೆ ನೀರು ಹರಿದುಹೋಗುತ್ತದೆ. ಆದ ಕಾರಣ ಕೆರೆಗಳ ದುರಸ್ತಿ ಕೆಲಸವನ್ನು ಜಾಗ್ರತೆಮಾಡಬೇಕು. ತುಂಗಭದ್ರಾ ಯೋಜನೆಯಿಂದ ಆಹಾರ ಉತ್ಪತ್ತಿ ಹೆಚ್ಚಾಗಿ ಮಾಡುತ್ತಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಹೆಚ್ಚು ಗಮನ ಕೊಡಬೇಕೆಂದು ಸಂಬಂಧಪಟ್ಟ ವ್ಯವಸಾಯ ರೆವಿನ್ಯೂ ಮತ್ತು P.W.D. ಮಂತ್ರಿ ಇವರೆಲ್ಲರಿಗೂ ಅತ್ಯಂತ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಈ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ಮಾಡುತ್ತಾರೆಂದು ನಂಬಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

Sri M. C. NARASIMHAN.—I want a clarification from the Chair. It was stated by the Chair that 15 members of

(SRI M. C. NARASIMHAN)

the Opposition and 19 members on the Congress side spoke. Is it possible for the Chair to give us that information on the basis of districts *i.e.*, district, wise?

Mr. CHAIRMAN.—It is not possible to give that information immediately. If the member is interested I shall try to give it later. From the names here, unless you make a reference to the list it is not possible for me to say which member comes from which district. I am in the Chair only for a short time. I was not regulating the debate throughout. Whether that policy was adhered to or not I am not in a position to say. However information would be supplied to the Hon'ble Member.

ಶ್ರೀ ಕೆ. ಎಫ್. ಪಾಟೀಲ್ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಕಳೆದ ಎರಡು ದಿವಸಗಳಿಂದ ಈ ಸಭೆಯಲ್ಲಿ ಆಹಾರಧಾನ್ಯಗಳ ಸದ್ಯದ ಪರಿಸ್ಥಿತಿ ಮತ್ತು ಆಹಾರಧಾನ್ಯಗಳನ್ನು ಬೆಳೆಯುವ ಕ್ರಮದಲ್ಲಿ ನಡೆದಂಥಾ ಅನಾನುಕೂಲತೆಗಳೇನು, ಅವುಗಳನ್ನು ಸುಧಾರಿಸುವ ರೀತಿ ಏನು ಈ ಸಂಬಂಧದಲ್ಲಿ ಅನೇಕ ಮಾನ್ಯ ಸ್ನೇಹಿತರು ಚರ್ಚೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಈ ಸೂಚನೆ, ಸಲಹೆಗಳನ್ನು ನಾನು ಸ್ವಲ್ಪದರಲ್ಲಿ ಟಿಪ್ಪಣಿ ಮಾಡಿಕೊಂಡಿದ್ದೇನೆ. ನನಗೆ ಶಕ್ಯವಿದ್ದ ರೀತಿಯಲ್ಲಿ, ಅದು ಸಮರ್ಪಕವೋ ಅಥವಾ ಅಸಮರ್ಪಕವೋ, ಉತ್ತರವನ್ನು ಹೇಳುತ್ತೇನೆ. ಈ ನನ್ನ ಉತ್ತರವನ್ನು ಅವರೆಲ್ಲರೂ ಕೇಳಿಕೊಂಡಮೇಲೆ ಅದರ ಸಮರ್ಪಕತೆಯನ್ನು ಅವರು ನಿರ್ಧರಿಸಿಕೊಳ್ಳಬಹುದು.

ಮೊದಲನೆಯದಾಗಿ ಸದ್ಯದ ಆಹಾರ ಪರಿಸ್ಥಿತಿಯ ಸಂಬಂಧದಲ್ಲಿ ನಾಲ್ಕು ಮಾತುಗಳನ್ನು ಹೇಳಿ, ಅನಂತರ ಆಹಾರಧಾನ್ಯ ಅಭಾವದ ವಿಷಯದಲ್ಲಿ ಸರಕಾರ ಕೈಕೊಂಡಿರತಕ್ಕ ಕಾರ್ಯಕ್ರಮವನ್ನು ನಾನು ವಿವರಿಸುತ್ತೇನೆ. ಅನಂತರ ಸದಸ್ಯರ ಸೂಚನೆಗಳಿಗೆ ಉತ್ತರ ಕೊಡಬಯಸುತ್ತೇನೆ. ಕೆಲವು ಸದಸ್ಯರು ಸೂಚನೆಗಳನ್ನು ಮಾಡುತ್ತಾ ಸರಕಾರಕ್ಕೆ ಈ ವಿಷಯದಲ್ಲಿ ಎಚ್ಚರಿಕೆ ಸಹ ಕೊಟ್ಟಿದ್ದಾರೆ. ಈ ವಿಷಯ ಎಷ್ಟು ಗಂಭೀರವಾದದ್ದಾಗಿದೆ, ದೇಶದಲ್ಲಿ ಪುನಃ ಕಂಟ್ರೋಲ್ ತರತಕ್ಕಂಥ ಪರಿಸ್ಥಿತಿ ಬಂದೀತು ಎಂದು ಅವರು ಹೇಳಿದಾಗ್ಗೆ ಅಂದಿನ ಪರಿಸ್ಥಿತಿಯ ನೆನಪಾಗಿ ಸ್ವಾತಂತ್ರ್ಯ ಸಿಕ್ಕುವ ಪೂರ್ವದಲ್ಲಿ ಆಹಾರಧಾನ್ಯಗಳ ಪರಿಸ್ಥಿತಿ ಹೇಗೆ ಇತ್ತು, ಎರಡು ಮಹಾಯುದ್ಧಗಳ ಕಾಲದಲ್ಲಿ ಅದರಲ್ಲಿಯೂ 1943ನೆಯ ಇಸವಿಯಲ್ಲಿ ವಿಶೇಷತಃ ದೇಶಾದ್ಯಂತ ಆಹಾರದಾನ್ಯಗಳ ಪರಿಸ್ಥಿತಿ ವಿಪರೀತ ಕೆಟ್ಟುಹೋಗಿ, ಬಂಗಾಲದಲ್ಲಿ 33 ಲಕ್ಷ ಜನತೆ ಆಹಾರದ ಕೊರತೆಯಿಂದ ಪ್ರಾಣನೀಗತಕ್ಕಂಥ ಐತಿಹಾಸಿಕ ಪರಿಸ್ಥಿತಿಯುಂಟಾದ ಕಲ್ಪನೆ ಎಲ್ಲವೂ ನೆನಪಾಯಿತು. ಯುದ್ಧಕಾಲದ ಗಂಭೀರ ಪರಿಸ್ಥಿತಿ ಮತ್ತು ಯುದ್ಧ ನಿಂತನಂತರ ಕಂಟ್ರೋಲದ ಮೂಲಕ ಉಂಟಾದ ಅನಾಹುತ ಪರಿಸ್ಥಿತಿ ಆವರಿಸಿದ್ದನ್ನು ಪರಿಹರಿಸುವದಕ್ಕೆ ಅನೇಕ ದಿವಸಗಳು ಬೇಕಾಯಿತು ಎಂಬುದನ್ನು ತಾವೆಲ್ಲರೂ ಮರೆತಿರಲಿಕ್ಕಿಲ್ಲ. ಸಾಮಾನ್ಯವಾಗಿ ಮನುಷ್ಯ ಮರೆಯುವ ಪ್ರಾಣಿಯಾಗಿದ್ದಾನೆ. ಮನುಷ್ಯ ಪ್ರಾಣಿ ಕಷ್ಟಬಂದಾಗ ಕಷ್ಟಪಡುತ್ತಾವೆ. ಅನಂತರ ಕಷ್ಟಮರೆತು ಮುಂದುವರಿಯುತ್ತಾನೆ. ಹೀಗೆ ಇರುವದರಿಂದ ಹಿಂದೆ ಅನುಭವಿಸಿದ ಕಷ್ಟವನ್ನು ನೆನಸಿಕೊಂಡು ಆಶ್ಚರ್ಯಪಡುತ್ತಾನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಅನೇಕ ಸಮಸ್ಯೆಗಳು ಉದ್ಭವಿಸಿದ್ದರೂ ಕೂಡ ಅದರಲ್ಲಿ ಆಹಾರದ ಪರಿಸ್ಥಿತಿ ಎಲ್ಲಕ್ಕೂ ಮಹತ್ತರವಾಗಿದ್ದಿತು. ಅದನ್ನು ನೆನೆಸಿಕೊಂಡಾಗ ದಿವಂಗತ ಸರದಾರ ವಲ್ಲಭಭಾಯಿ ಪಟೇಲರವರ ಒಂದು ಮಾತು ನೆನಪಾಗುತ್ತದೆ. ದೇಶದಲ್ಲಿ ಅನ್ನವಿಲ್ಲದೆ ಒಬ್ಬನನ್ನೂ ಕೂಡ ಸಾಯದಂತೆ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಕಂಟ್ರೋಲಿನಂಥ ಜಟಿಲವಾದ ಸಮಸ್ಯೆಯನ್ನು ಒಂದೇ ಒಂದು ಏಟಿನಿಂದ ದಿವಂಗತ ಶ್ರೀ ಕಿದವಾಯಿಯವರು ಹೇಗೆ ಪರಿಹರಿಸಿದರು ಎಂಬುದನ್ನು ನೆನಸಿಕೊಂಡಾಗ್ಗೆ, ನಮಗೆ ಸ್ವಾತಂತ್ರ್ಯ ಸಿಕ್ಕನಂತರ ಏನೇನು ಮಾಡಲಿಕ್ಕೆ ಸಾಧ್ಯವಿದೆ ಎಂಬುದು ಗೊತ್ತಾಗುತ್ತದೆ. ಆಹಾರಧಾನ್ಯಗಳ ಉತ್ಪತ್ತಿಯನ್ನು ಸಂಪೂರ್ಣವಾಗಿ ಮಾಡುವುದು ಸಾಧ್ಯವಾಗದಿದ್ದರೂ ಕೂಡ ಕೊರತೆಯನ್ನು ನಿವಾರಣೆ ಮಾಡಬಲ್ಲೆವು ಎಂಬ ಧೈರ್ಯ ನಮ್ಮಲ್ಲಿ ಉಂಟಾಗುವದಕ್ಕೆ ಸ್ವಾತಂತ್ರ್ಯವೇ ಕಾರಣವಾಗಿದೆ ಎಂಬುದನ್ನು ಎಲ್ಲರೂ ಒಪ್ಪತಕ್ಕಂಥಾದ್ದು. ರಾಷ್ಟ್ರದಲ್ಲಿಯ ಜನತೆಯ ಆರ್ಥಿಕಸ್ಥಿತಿ ಸುಧಾರಿಸುವದರ ಸಲುವಾಗಿ ಪಾಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಮಾಡುವುದಕ್ಕೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳೂ ಸಹ ಪ್ರಯತ್ನ ನಡೆಸಿದ್ದಾರೆ ಎಂಬುದು ಲಕ್ಷ್ಯದಲ್ಲಿ ಇಡತಕ್ಕಂಥಾದ್ದು ಆಗಿದೆ.

ಗ್ರೋಮೋರ್ ಫುಡ್ ಕ್ಯಾಂಪೇನ್ ಆಗಲಿ ಇತರ ವ್ಯವಸಾಯದ ಇಲಾಖೆಯ ಕಾರ್ಯಕ್ರಮಗಳಾಗಲಿ ಆಹಾರ ಧಾನ್ಯಗಳ ವಿಷಯದಲ್ಲಿ ಸ್ವಾವಲಂಬಿಯಾಗಿ ಮಾಡಬೇಕೆಂಬ ಉದ್ದೇಶದಿಂದ ಹೊರಟಿದ್ದಾರೆ ಎಂಬ ಮಾತನ್ನು ತಾವು ಮರೆಯಲಿಕ್ಕಾಗದು. ಆಹಾರ ಧಾನ್ಯದ ವಿಷಯದಲ್ಲಿ ಸ್ವಾವಲಂಬಿಯಾಗಿರುವುದಕ್ಕೆ ಪ್ರಯತ್ನಮಾಡುತ್ತಾ ಇದ್ದಾಗಲೂ ಕೂಡ, ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೇವೆ. ಆಹಾರಪದಾರ್ಥಗಳನ್ನು ಹೆಚ್ಚು ಬೆಳೆಯಲು ಪ್ರಯತ್ನ ಮಾಡುತ್ತಾಯಿರತಕ್ಕ ವಿಷಯದಲ್ಲಿ ಯಾರೂ ಸಂಶಯವನ್ನು ವ್ಯಕ್ತಪಡಿಸತಕ್ಕ ಪರಿಸ್ಥಿತಿ ಇಲ್ಲ. ಎಷ್ಟು ಆಹಾರ ನಮಗೆ ಬೇಕಾದೀತು, ಎಷ್ಟು ಆಹಾರವನ್ನು ನಾವು ಆರೋಗ್ಯಕರವಾದ ರೀತಿಯಲ್ಲಿ ಉಪಯೋಗಿಸುತ್ತೇವೆ, ಎಷ್ಟು ಬೆಳೆಯನ್ನು ಬೆಳೆಯುತ್ತೇವೆ ಎಂಬ ವಿಷಯದಲ್ಲಿ ಅನೇಕ ಸ್ನೇಹಿತರು ಈ ಅಂಕಿ ಅಂಶಗಳು ನಿಜವೇ ಎಂದು ಸಂದೇಹವನ್ನು ವ್ಯಕ್ತಗೊಳಿಸಿದರು. ಏತರ ಮೇಲಿಂದ ಇದನ್ನು ನಿರ್ಧಾರವಾಗಿ ಹೇಳಬಹುದು ಎಂಬ ವಿಷಯದಲ್ಲಿ ಅನೇಕ ಪ್ರಶ್ನೆಗಳನ್ನು ಹಾಕಿದ್ದಾರೆ. ಅಂಕಿ ಅಂಶಗಳ ವಿಷಯದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಎಲ್ಲಾ ಬೆಳೆಯನ್ನೂ ಅಳತೆಮಾಡಿ ಅಂಕಿ ಅಂಶ ಕೊಟ್ಟಿಲ್ಲ ಎಂಬ ಕಾರಣ ನಿಜ ಇದ್ದರೂ ಕೂಡ ಅನೇಕ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ, ಹಳ್ಳಿಗಳಲ್ಲಿ ಒಂದು Crop cutting campaign ಮಾಡಿ, sample crop cutting ನಿಂದ ಎಲ್ಲೆಲ್ಲಿ ಎಷ್ಟೆಷ್ಟು ಬೆಳೆ ಬಂದೀತು, ಕಂಪೋಸ್ಟ್ ಗೊಬ್ಬರ ಹಾಕಿದಾಗ ಹೇಗೆ ಬಂದೀತು ಇಲ್ಲದೆ ಇದ್ದಾಗ ಹೇಗೆ ಬಂದೀತು. ಕೆಮಿಕಲ್ ಫರ್ಟಿಲೈಸರ್ಸ್ ಹಾಕಿದಾಗ ಹೇಗೆ

ಬಂದೀತು ಎಂಬುದನ್ನೆಲ್ಲಾ ಗಮನದಲ್ಲಿ ತಂದುಕೊಂಡು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಸ್ಟ್ಯಾಟಿಸ್‌ಟೀಷಿಯನ್ ಅನ್ನುವವರು ಸರ್ಕಾರದ ಅಭಿಪ್ರಾಯದ ಪ್ರಕಾರ ನಡೆಯದೇ ತಮ್ಮದೇ ಆದ ಒಂದು ರೀತಿಯಲ್ಲಿ ಜಗತ್ತಿನಲ್ಲಿ ಮಾನ್ಯವಾಗದ ಇರತಕ್ಕ ಲೆಕ್ಕಗಳನ್ನು ಗಣನೆಗೆ ತೆಗೆದುಕೊಂಡು ಮಾಡಿದ್ದಾರೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ತಾವು ಹೇಳಿರತಕ್ಕ ಕೆಲವು ಲೋಪದೋಷಗಳಿರಬಹುದು. ಆ ಲೋಪದೋಷಗಳಿಗೆ ಮಾರ್ಜಿನ್ ಬಿಟ್ಟು ಇದರ ಆಧಾರದಮೇಲೆ ಇವೊತ್ತು ಚರ್ಚೆ ಮಾಡಬೇಕಾಗುತ್ತದೆ ಎಂಬ ಮಾತನ್ನು ಕೂಡ ಸಭೆಯ ಲಕ್ಷ್ಯಕ್ಕೆ ತರಬಯಸುತ್ತೇನೆ. ನನ್ನ ಸ್ನೇಹಿತರು ಯಾವ ಆಧಾರದ ಮೇಲಿಂದ 16 ಔನ್ಸ್ ಆಹಾರ ಒಬ್ಬ ಮನುಷ್ಯನಿಗೆ ಸಾಕಾಗುತ್ತದೆ ಎಂಬುದನ್ನು ತಿಳಿಸಬೇಕೆಂದು ಹೇಳಿದರು. ಕೊನೆಯಲ್ಲಿ ಹೇಳುತ್ತೇನೆ ಎಂದು ತಿಳಿಸಿದ್ದರಿಂದ ಈಗ ಇದನ್ನು ಅವರ ಗಮನಕ್ಕೆ ತರಬಯಸುತ್ತೇನೆ. "Balanced diet Bombay Mothers, and Children's Welfare Society" by Robert Mackeer. ಮ್ಯಾಕೀರ್ ಎನ್ನುವವರು ಇದರಲ್ಲಿ ಎಕ್ಸ್‌ಪರ್ಟ್ ಇದ್ದಾರೆ. ಅವರು ಪಬ್ಲಿಷ್ ಮಾಡಿದ್ದು. ಅವರು ಆಹಾರಧಾನ್ಯ ಎಷ್ಟು ಬೇಕಾಗುತ್ತದೆ, ಎಷ್ಟು ಶಕ್ತಿಯ ಧಾನ್ಯ ಪಡೆಯಬೇಕು ಎಂಬುದನ್ನು ಹೇಳಿದ್ದಾರೆ. ಸೆರಿಯಲ್ಸ್‌ನಲ್ಲಿ Rice, Wheat, Jawar, Maize, Bajra etc., ಎಷ್ಟು ಅಂಶ ಒಬ್ಬ ಪಡೆಯುತ್ತಾನೆ ಎಂದರೆ 14 ಅಂಶ ಎಂದು ಹೇಳಿದ್ದಾರೆ. ಇದರಲ್ಲಿ ದ್ವಿದಳಧಾನ್ಯ 3 ಅಂಶ roots, vegetables, fruits and so on ಇದೆಲ್ಲಾ ಹೇಳಿದ್ದಾರೆ. ಇದನ್ನೆಲ್ಲಾ ಏಕೆ ಹೇಳಿದೆ ಎಂದರೆ ಮುಂದೆ ಒಂದು ಅಂಶವನ್ನು ಅವರು ಹೇಳಿದ್ದು ತಮ್ಮ ಗಮನಕ್ಕೆ ತರಬಯಸುತ್ತೇನೆ. 'Do not remove bran from the wheat, use hand pounded rice. In case you use milled rice, take ¾ oz of rice bran every day' ಎಂದು ಹೇಳಿದ್ದಾರೆ. ಏಕೆ ಹೇಳಿದೆ ಎಂದರೆ ಡೀಹಸ್ಕ್ ಮಾಡಿದ ಅಕ್ಕಿ, ಪಾಸ್ತವಾಂಶ, ಎಲ್ಲರಿಗೂ ನೋಡುವುದಕ್ಕೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆ ಕಾರಣದಿಂದ ಡೀಹಸ್ಕ್ ರೈಸ್‌ಗೆ ಬಹಳ ಕೀಳ್ ತರಗತಿಯ ಭಾವನೆ ಬಂದಿದ್ದರೆ ತವಡುತಿನ್ನಿರಿ ಎಂದು ಹೇಳುವ ಒಬ್ಬ ಆಹಾರ ತಜ್ಞರ ಮಾತನ್ನು ತಮ್ಮ ಲಕ್ಷ್ಯಕ್ಕೆ ತಂದರೆ ನನ್ನನ್ನು ಕ್ಷಮಿಸುತ್ತೀರಿ ಎಂದು ಭಾವನೆ ಮಾಡುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ತೌಡು ತಿನ್ನಬೇಕೆಂದು ಶಿಫಾರ್ಸು ಮಾಡುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ಆರೋಗ್ಯ ಕಾಪಾಡಿಕೊಳ್ಳಲು ಇಷ್ಟು ಅಂಶ ಇರಬೇಕೆಂದು ಯಾರು ತಜ್ಞರು ಹೇಳಿದ್ದಾರೋ, ಅದನ್ನು ತಮ್ಮ ಲಕ್ಷ್ಯಕ್ಕೆ ತಂದೆ. ಅದು ಸುಳ್ಳೊ, ಒಪ್ಪೋ, ತಪ್ಪೋ ಅದನ್ನು ತಮಗೆ ಬಿಡುತ್ತೇನೆ. ಅಲ್ಲದೆ Balanced diet by V.V. Guha ಎನ್ನುವುದರಲ್ಲಿ Rice, par-boiled, milled over-all 9 + 5 = 14 oz. ಬೇಕು ಎಂದು ಹೇಳಿದ್ದಾರೆ. ಅದೇ ಪ್ರಕಾರ Bengalgram 1 oz. green leaves 2 oz. Brinjal etc., ಹೇಳಿದ್ದಾರೆ. ಚಕ್ರವರ್ತಿ ಎನ್ನುವವರು 10 ಔನ್ಸ್ ಮಾತ್ರ ಹೇಳಿದ್ದಾರೆ. ಈ ವಿವರ ಯಾರಿಗಾದರೂ ಬೇಕಾದರೆ ಕೊಡಲು ಸಿದ್ಧವಾಗಿದ್ದೇನೆ. ಸಾಮಾನ್ಯವಾಗಿ 16 ಔನ್ಸ್ ತೆಗೆದುಕೊಳ್ಳಬೇಕಾಗುತ್ತದೆ. 32 ಔನ್ಸ್ ತೆಗೆದುಕೊಳ್ಳುವವರೂ ಇದ್ದಾರೆ. 4-6-8-10 ಔನ್ಸ್ ತೆಗೆದುಕೊಳ್ಳುವವರೂ ಇದ್ದಾರೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ 100ಕ್ಕೆ 70 ಭಾಗ ಜನ ವಾಸಮಾಡುವುದರಿಂದ ಹಳ್ಳಿಗಳಲ್ಲಿ ಪರಿಶ್ರಮ ಜಾಸ್ತಿಯಾದ್ದರಿಂದ 18 ಕ್ಯಾಲರಿಯಿಂದ 26 ಕ್ಯಾಲರಿವರೆಗೂ ಬೇಕಾಗುತ್ತದೆ. ಇದರಲ್ಲಿ 4 ಹೆಚ್ಚಿರಬಹುದು 4 ಕಡಮೆ ಇರಬಹುದು. ಇದನ್ನೇ ಒಂದು ಆಧಾರವಾಗಿ ಹಿಡಿದು ಇದರಮೇಲೆ ವಾದ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

Sri J. B. MALLARADHYA.—I would like to have a clarification, Sir. ಭಾರತ ಸರ್ಕಾರದ ಅಂಕಿ ಅಂಶಗಳ ಆಧಾರದಮೇಲೆ ಒಬ್ಬರಿಗೆ 16 ಔನ್ಸ್ ಆಹಾರ ಬೇಕು ಎನ್ನುವುದರಮೇಲೆ ನಮ್ಮ ಆಹಾರ ನೀತಿಯನ್ನು ನಿಯೋಜಿಸುತ್ತ ಇರತಕ್ಕದ್ದು ಅಲ್ಲವೆ ಎಂದು ಕೇಳುತ್ತೇನೆ.

ಶ್ರೀ ಕೆ. ಎಫ್. ಪಾಟೀಲ್.—ಅದರಲ್ಲಿ waste ಎಲ್ಲ ಸೇರಿರುತ್ತದೆ. 14 ಔನ್ಸ್ ಒಬ್ಬರಿಗೆ ಬೇಕಾಗಿದ್ದರೂ ಕೂಡ 16 ಔನ್ಸ್ ಎಂದು ಲೆಕ್ಕಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಆ ರೀತಿ ಲೆಕ್ಕ ಹಾಕುತ್ತಿದ್ದೇವೆ. ನಮ್ಮಲ್ಲಿ ಸ್ವಾಭಾವಿಕವಾಗಿ ಆಹಾರವನ್ನು ಬೇಯಿಸುವಾಗಲೂ ಕೂಡ ಕೆಲವು ಕ್ರಮಗಳನ್ನು ಇಟ್ಟಿರುತ್ತೇವೆ. ನಮಗೆ ಪೌಷ್ಟಿಕವಾದ ಆಹಾರ ದೊರೆಯುವಂತೆ ಮಾಡಬೇಕಾದದ್ದು ಮುಖ್ಯ. ಕಸವನ್ನು ರಸವನ್ನಾಗಿ ಮಾಡುವಂಥ ಜಾಣತನ ನಮ್ಮ ಭಗಿನಿಯರಲ್ಲಿದೆ. ಅವರು ಉತ್ತಮವಾದ, ರಸವತ್ತಾದ, ಪೌಷ್ಟಿಕವಾದ ಆಹಾರವನ್ನು ಇದ್ದುದರಲ್ಲಿಯೇ ನಿರ್ಮಾಣಮಾಡಿಕೊಡಬಲ್ಲರು. ಈ ಕಾರಣದಿಂದ 16 ಔನ್ಸ್ ಇಟ್ಟುಕೊಂಡು ಲೆಕ್ಕ ಹಾಕಿದ್ದೇವೆ.

ಆಹಾರ ಸಮಸ್ಯೆಯ ವಿಷಯದಲ್ಲಿ ಅಭಿವೃದ್ಧಿ ಮಾಡುವುದರ ಸಲುವಾಗಿ ಸಾಮಾನ್ಯವಾಗಿ ಮೂರು ತರಹ ಕಾರ್ಯಕ್ರಮಗಳನ್ನು ಇಲಾಖೆಯವರು ಕೈಗೊಂಡಿದ್ದಾರೆ. ಸಂಶೋಧನೆಗಳನ್ನು ಮಾಡುವುದು, ವ್ಯವಸಾಯಗಾರರ ಮಕ್ಕಳನ್ನು ತರಬೇತಿ ಮಾಡುವುದು, ಸ್ಥಳೀಯ ಅಧಿಕಾರಿಗಳು ಮತ್ತು ತಜ್ಞರಿಂದ ವ್ಯವಸಾಯಗಾರರಿಗೆ ಶಿಕ್ಷಣ ಮತ್ತು ತರಬೇತಿ ಕೊಡುವುದು, ರೈತನಿಗೆ ಕೊಡತಕ್ಕ ಸಾಲಗಳು ಮತ್ತು ಇತರ ಸಹಾಯಸಲಕರಣೆಗಳನ್ನೊದಗಿಸುವುದು, ಈ ಮೂರು ನಾಲ್ಕು ವಿಧಗಳಲ್ಲಿ ವ್ಯವಸಾಯದ ಇಲಾಖೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಮಾನ್ಯ ಸದಸ್ಯರು ಗಮನದಲ್ಲಿಡಬೇಕು. ಅನೇಕ ವರ್ಷಗಳಿಂದಲೂ ಇಲಾಖೆಯು ಜೋಳ, ಭತ್ತ, ಗೋಧಿ ಮುಂತಾದವುಗಳ ವಿಷಯದಲ್ಲಿ ರೋಗ ರುಜಿನಗಳಿಲ್ಲದೆ ಯಾವ ಬೀಜ ಉತ್ತಮವಾಗಿದೆ ಎನ್ನುವ ವಿಷಯದಲ್ಲಿ ಸಂಶೋಧನೆಗಳನ್ನು ನಡೆಸಿದೆ. ಸಂಶೋಧನಾ ಕೇಂದ್ರಗಳು ಸತತವಾಗಿ ಕೆಲಸ ಮಾಡುತ್ತಿವೆ. ಅವುಗಳಲ್ಲಿ ತಜ್ಞರು ಕೆಲಸ ಮಾಡುತ್ತಿದ್ದಾರೆನ್ನುವುದನ್ನು ಲಕ್ಷ್ಯಮಾಡಿದಾಗ, ಪ್ರಯೋಗ ಶಾಲೆಯಲ್ಲಿ ಸಂಶೋಧನೆ ನಡೆದು ಇಂಥ ಬೀಜ ಇಷ್ಟೇ ಕಾಲಕ್ಕೆ ಇಷ್ಟೇ ಪ್ರಮಾಣದಲ್ಲಿ ಫಲ ಕೊಡುತ್ತದೆ ಎಂದು ಒತ್ತಾಯಪಡಿಸಲಿಕ್ಕೆ ಸಾಧ್ಯವಿಲ್ಲ. ಸಂಶೋಧನೆ ಮಾಡತಕ್ಕ ವ್ಯಕ್ತಿಯ ದಕ್ಷತೆ, ಅದರಲ್ಲಿ inherent ಆಗಿರತಕ್ಕ ಪರಿಸ್ಥಿತಿ, ಇವುಗಳಮೇಲೆ ಸಂಶೋಧನೆ ಫಲದಾಯಕವಾಗಿದೆಯೋ ಇಲ್ಲವೇ ಎನ್ನುವುದು ಅವಲಂಬಿಸಿರುತ್ತದೆ. ಗೋಧಿಯ ವಿಷಯದಲ್ಲಿ ಅನೇಕಾನೇಕ ಸಂಶೋಧನೆಗಳು ನಡೆದರೂ ರೋಗ ಬಾರದಂಥ ಗೋಧಿಯನ್ನು ಕಂಡುಹಿಡಿಯುವುದಕ್ಕೆ ಆಗಿಲ್ಲ. ಸಮೀಪ ಸಮೀಪಕ್ಕೆ ಬರುತ್ತಿದ್ದಾರೆ. ಪ್ರಯೋಗ ಶಾಲೆಯಲ್ಲಿ ಬೀಜಗಳು ಎರಡು ವರ್ಷ

(ಶ್ರೀ ಕೆ. ಎಫ್. ಪಾಟೀಲ್)

ಸಂಪೂರ್ಣ ಪ್ರಯೋಗವನ್ನು ಪಡೆದಮೇಲೆ ಆ ಬೀಜಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವ ಪರಿಸ್ಥಿತಿಯಲ್ಲಿದ್ದೇವೆ. ಹತ್ತಿ, ಜೋಳ, ರಾಗಿ ಇವುಗಳನ್ನು ಸಂಶೋಧನೆ ಮಾಡಿದ ಕೂಡಲೇ ಜನರಿಗೆ ಕೊಡುತ್ತೇವೆ. ಶ್ರೀಮಾನ್ ವೀರಣ್ಣಗೌಡರು ಹೇಳಿದಹಾಗೆ, ಸರ್ಕಾರದವರು ಕೊಟ್ಟ ಬೀಜವನ್ನು ಹಾಕಿದ್ದರಿಂದ ಬೆಳೆಯೆಲ್ಲ ನಷ್ಟವಾಗಿ ಹೋಯಿತು, ನಮ್ಮ ಅಧಿಕಾರಿಗಳದು ತಪ್ಪು ಎನ್ನುವುದು ಖಂಡಿತವಾಗಿಯೂ ತಪ್ಪು ಎಂದು ಹೇಳಬಯಸುತ್ತೇನೆ. ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಏನಾದರೂ ಮಾಡಿದ್ದರೆ ಅಂಥವರಮೇಲೆ ಕ್ರಮ ತೆಗೆದುಕೊಳ್ಳೋಣ. ಸಂಶೋಧಕರೇನಿದ್ದಾರೆ ಅವರು ಪ್ರಯೋಗ ಶಾಲೆಗಳಲ್ಲಿ ಪರೀಕ್ಷೆಮಾಡಿ, ದೊಡ್ಡ ಪ್ರಮಾಣದಿಂದ ಬೆಳೆಯುವುದಕ್ಕೆ ಯೋಗ್ಯವೆಂದು ಕಾಣದೆ ಇದ್ದರೆ ಅಂಥಾದ್ದನ್ನು ಅವರು ಕೊಡುವವರಲ್ಲ ಎನ್ನುವ ಮಾತನ್ನು ಸಾಮಾನ್ಯವಾಗಿ ಹೇಳಬಯಸುತ್ತೇನೆ. ಬೀಜದಲ್ಲಿ ಲೋಪ ದೋಷಗಳೇನಾದರೂ ಇದ್ದರೆ ಪ್ರಯೋಗಮಾಡಿ ಯಶಸ್ವಿ ಕಂಡುಬಂದ ಹೊರತು ಬೀಜಗಳನ್ನು ಕೊಡುವುದಿಲ್ಲ. ಇದು ಒಂದು technical subject ಆಗಿರುವುದರಿಂದ ಆ ವಿಷಯವನ್ನು ಅಭ್ಯಾಸಮಾಡಿ, ತರಬೇತಿ ಹೊಂದಿದವರನ್ನು ಮಾತ್ರ ಹಳ್ಳಿಗಳಲ್ಲಿ ಕೆಲಸಕ್ಕೆ ಕಳುಹಿಸುತ್ತೇವೆಯೇ ಹೊರತು ತರಬೇತಿ ಇಲ್ಲದೆ ಸಾಮಾನ್ಯವಾಗಿ ಕಳುಹಿಸುವುದಿಲ್ಲ. ಸ್ವಲ್ಪ ಕಾಲವಾದರೂ ಶಿಕ್ಷಣವಂತರಿಂದ ತರಬೇತಿ ಕೊಟ್ಟು, ಗೊಬ್ಬರ ತಯಾರಿಸುವುದು ಹೇಗೆ, ಉತ್ತಮವಾದ ಬೀಜಗಳನ್ನು ಆರಿಸುವುದು ಹೇಗೆ, ಯಾವ ಯಾವ ಮಣ್ಣಿನಲ್ಲಿ ಯಾವ ಪ್ರಕಾರವಾಗಿ ಬಿತ್ತನೆ ಮಾಡಿದರೆ ಎಷ್ಟು ಪ್ರಮಾಣದಲ್ಲಿ ಬೆಳೆ ಬಂದೀತು ಎನ್ನುವ ಸಾಮಾನ್ಯವಾದ ಕಲ್ಪನೆಯನ್ನು ಅವರಿಗೆ ಕೊಟ್ಟು ಅವರನ್ನು ಕಳುಹಿಸುತ್ತಿದ್ದೇವೆ. ಅವರು ಸುತ್ತಮುತ್ತಲಿನ ವಾತಾವರಣ, ಪರಿಸ್ಥಿತಿ ಇವುಗಳನ್ನು ನೋಡಿಕೊಂಡು ತಮ್ಮಂಥ ಸಸಸ್ಯರ ಸಲಹೆಗಳ ಪ್ರಕಾರ ನಡೆಯುಕಾಗುತ್ತದೆ. ಅವರು ಯೋಗ್ಯವಾದ ದಾರಿಯಲ್ಲಿ ನಡೆದುಕೊಂಡು ಉತ್ತಮವಾದ ಸೇವೆಯನ್ನು ಸಲ್ಲಿಸಲು ತಾವೆಲ್ಲ ಅನುಕೂಲ ಮಾಡಿಕೊಡಬೇಕು. ಅವರಲ್ಲಿ ತಪ್ಪುಗಳಿದ್ದರೂ ತಾವು ಸಾಧಾರಣವಾಗಿ ಮೇಲಿನವರಿಗೆ ತಿಳಿಸಬೇಕು. ಇಲ್ಲದೆ ಇದ್ದ ಪಕ್ಷದಲ್ಲಿ ತಾವೇ ಅವರಿಂದ ಹೆಚ್ಚಿನ ಸೇವೆಯನ್ನು ತೆಗೆದುಕೊಳ್ಳುವಹಾಗೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತೆ ಒಂದು ಮಾತನ್ನು ಮಾನ್ಯ ಸಭೆಯ ಲಕ್ಷ್ಯಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರನೇಕರು ಮಾತನಾಡುವಾಗ ಬಹಳ ದೊಡ್ಡ ಪ್ರಮಾಣದ ವ್ಯವಸಾಯವನ್ನು ರಷ್ಯದೇಶದಲ್ಲಿರತಕ್ಕ ಪದ್ಧತಿಯ ಮೇಲೆ ಮಾಡುವುದು ಬಹಳ ಒಳ್ಳೆಯದೆಂದು ಹೇಳಿದರು. ಶ್ರೀಮಾನ್ ಹನುಮಂತಯ್ಯನವರೂ ಇದೇ ರೀತಿ ಸಲಹೆಯನ್ನು ಕೊಟ್ಟರು. ಮತ್ತೆ ಜಪಾನ್‌ನಲ್ಲಿರತಕ್ಕ ಪದ್ಧತಿಯ ವಿಷಯದಲ್ಲಿ ಕೆಲವು ವಿಚಾರಗಳನ್ನು ಹೇಳಿದರು. ಚೈನಾ, ಜಪಾನ್ ಅಥವ ಯಾವುದೇ ಪದ್ಧತಿ ಇರಲಿ, ಅದು ನಮ್ಮ ದೇಶದಲ್ಲಿರುವುದನ್ನು ಮೀರಿಸುವ ಪದ್ಧತಿಯಾಗಿದ್ದರೆ ಅದನ್ನು ಏಕೆ ಅಂಗೀಕರಿಸಬಾರದು ಎಂಬ ಕುತೂಹಲ ಕೇಳಿಬರುತ್ತಿದೆ. ಎರಡು ವರ್ಷಗಳಲ್ಲಿ ಚೈನಾದಲ್ಲಿ ಆದಂಥ ಪ್ರಗತಿ ಸಾಧನೆಯನ್ನು ನಾನು ಕೇಳಿರುತ್ತೇನೆ. ಪತ್ರಿಕೆಗಳಲ್ಲಿ ಬಂದಿದ್ದ ವರದಿಯನ್ನು ಮಾನ್ಯ ಸದಸ್ಯರೂ ಓದಿರಬಹುದು. ಅವರು 70 ರಿಂದ 90 ರಷ್ಟು ಪ್ರಮಾಣದಲ್ಲಿ ಒಂದು ವರ್ಷದಲ್ಲಿ ಬೆಳೆಯನ್ನು ಅಭಿವೃದ್ಧಿ ಮಾಡಿಕೊಂಡಿದ್ದಾರೆನ್ನುವ ಮಾತನ್ನು ಕೇಳಿದ್ದೇನೆ. ಅವರು ಈ ರೀತಿಯಾಗಿ ಹೇಗೆ ಮಾಡಿದರು, ಯಾವ ಕ್ರಮದಿಂದ ಹೀಗೆ ಮಾಡಲು ಸಾಧ್ಯವಾಯಿತೆನ್ನುವುದನ್ನು ನಾವು ನೋಡಿದರೆ ಅವರಲ್ಲಿ ಕಳೆದ ಎರಡು ವರ್ಷಗಳಲ್ಲಿ ಒಂದಾದರೂ fertiliser ಕಾರ್ಖಾನೆ ಬಂದಿತ್ತೋ ಹೇಗೋ. ಆದರೂ ಅವರು ಒಂದೊಂದು ಎಕರೆಗೆ 40-50 ಟನ್ನುಗಳಷ್ಟು fertiliser ಉಪಯೋಗ ಮಾಡಿದ್ದಾರೆಂದು ಓದಿದ್ದೇವೆ. Fertiliser ಎಂದರೆ ಏನು, ಎಂಥ fertiliser ಉಪಯೋಗ ಮಾಡಿದ್ದಾರೆನ್ನುವ ಸಂಶಯ ಬರುತ್ತದೆ. Fertiliser ಎಂದರೆ ಕೆರೆಗಳಲ್ಲಿರತಕ್ಕ ಹೂಳುಮಣ್ಣು, ಹೊಳೆಗಳ ದಂಡೆಗಳಲ್ಲಿರತಕ್ಕ ರೇವುಮಣ್ಣು ಇವನ್ನು ತಮ್ಮ ತಮ್ಮ ಹೊಲಗಳಲ್ಲಿ ಹಾಕಿಕೊಂಡು ಉತ್ತಮವಾದ ಬೆಳೆಯನ್ನು ಎಂದರೆ ನೂರಕ್ಕೆ 70 ರಿಂದ 90 ರಷ್ಟು ಪ್ರಮಾಣದಲ್ಲಿ ತೆಗೆದಿದ್ದಾರೆ. ಜಪಾನ್ ಮತ್ತು ಚೈನಾ ದೇಶಗಳಲ್ಲಿ ಸಂಚಾರ ಹೋಗಿದ್ದು ಬಂದಂಥ ಶ್ರೀಮಾನ್ ಪಂಜಾಬರಾವ್ ದೇಶಮುಖ್ ಅವರು ತಾವು ಸಮಕ್ಷಮ ನೋಡಿದುದನ್ನು ಹೇಳಿದರು. ನಾವೂ ಸಹ ಅದೇ ಪದ್ಧತಿಯನ್ನು ಅನುಸರಣೆ ಮಾಡಿದರೆ ನಮ್ಮಲ್ಲಿಯೂ ಹಾಗೆಯೇ ಬೆಳೆಯಬಹುದೋ ಏನೋ. ಆ ದೇಶದ ಪರಿಸ್ಥಿತಿ ಹೇಗಿದೆ ಎಂದರೆ ಒಂದು ಆಜ್ಞೆಯನ್ನು ಹೊರಡಿಸಿದರೆ ದೇಶದ ಕೆಲಸಕ್ಕೆ ಜನರೆಲ್ಲರೂ ಬರುತ್ತಾರೆ. ಒಂದು ಕ್ಯಾಂಪಿನಲ್ಲಿ ಸುಮಾರು ಆರು ಲಕ್ಷ ಜನರು ಸಿಲ್ಟ್ ತೆಗೆಯುವ ಕೆಲಸ ಮಾಡುತ್ತಿದ್ದರಂತೆ. ಆ ಸರ್ಕಾರದ ಪದ್ಧತಿಗೂ ನಮ್ಮ ಸರ್ಕಾರದ ಪದ್ಧತಿಗೂ ಬಹಳ ವ್ಯತ್ಯಾಸವಿದೆ. ಅಲ್ಲಿ ಒಂದು ದೇಶದ ಕಾರ್ಯವನ್ನು ಮಾಡಬೇಕಾದರೆ ಅವರು ಎಲ್ಲರ services request ಮಾಡಿ, ಸೈನ್ಯದ ರೀತಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಆಹಾರಧಾನ್ಯಗಳನ್ನು ಅಷ್ಟೊಂದು ಪ್ರಮಾಣದಲ್ಲಿ ಬೆಳೆಯಲು ಸಾಧ್ಯವಾಯಿತೋ ಏನೋ ಎಂದು ನನಗನ್ನಿಸುತ್ತದೆ.

6 P.M.

ಆ ಪರಿಸ್ಥಿತಿ ನಮ್ಮಲ್ಲಿಲ್ಲದೇಯಿರುವುದರಿಂದ ಅಂಥ ಸಾಹಸಕ್ಕೆ ನಾವು ತೊಡಗಬಾರದು. ಅಥವ ಆ ರೀತಿ ಮಾಡಲು ವಿಚಾರ ಮಾಡಿದರೂ ಕೂಡ ಹಾಸ್ಯಾಸ್ಪದವಾದೀತು. ಈ ಹೊತ್ತು ಫರ್ಟಿಲೈಸರ್ಸ್ ಬಾರದೇಯಿರುವುದರಿಂದ ಕೊರತೆಯಾಯಿತೆಂದು ನಾವು ಆಹಾರ ಬೆಳೆಯುವುದು ಬೇಡ ಎನ್ನುವ ಮನೋಭಾವ ನಮ್ಮಲ್ಲಿ ಬೇಡ. ದೇಶದಲ್ಲಿ ಇದು ಸಾಕಷ್ಟು ಸಿಕ್ಕದೇಯಿದ್ದರೆ, ಅಥವ ಬೇರೆ ದೇಶಗಳಿಂದ ಒದಗಿಸುವುದು ಸಾಧ್ಯವಿಲ್ಲವೆಂದು ಆಹಾರಧಾನ್ಯ ಬೆಳೆಯುವುದು ಸಾಧ್ಯವಿಲ್ಲವೆಂದು ಹೇಳುವುದು ಬೇಡ, ಇದರಲ್ಲಿ ಒಂದು psychological factor ಇದೆ. ಆಹಾರ ಸಮಸ್ಯೆ ಸಾಮಾನ್ಯ ಸಮಸ್ಯೆಯಲ್ಲ, ನಾವು ಈ ಹೊತ್ತು ಏರ್ಪಾಡು ಮಾಡುತ್ತೇವೆಂದು ನಿರ್ಧಾರವಾಗಿ ಹೇಳುವ ಪರಿಸ್ಥಿತಿ ಇಲ್ಲ. ಕಬ್ಬಿಣ ಎಷ್ಟು ಬೇಕೋ ಅಷ್ಟನ್ನು ಒದಗಿಸುತ್ತೇನೆ ಎಂದು ಹೇಳುವ ಚೈತನ್ಯ ಈ ಹೊತ್ತು ನನಗಿಲ್ಲ. ರಾಷ್ಟ್ರದಲ್ಲಿ ಕಬ್ಬಿಣ ಎಷ್ಟು ಉತ್ಪತ್ತಿಯಾಗುತ್ತಿದೆ, ಇದರ ವಿತರಣೆ ಅಥವ ಹಂಚಿಕೆ ಹೇಗಿದೆ ಎನ್ನುವುದನ್ನು ನೋಡಿ ನನ್ನ ಸ್ನೇಹಿತರು ಎಷ್ಟೋ ಪ್ರಯತ್ನ ಮಾಡುತ್ತಿದ್ದಾರೆ. ಅವರ ಪ್ರಯತ್ನದ ಫಲವಾಗಿ ಈಗ ಇಷ್ಟಾದರೂ ನಮಗೆ ಬರುತ್ತಿದೆ. ಮೂರು ತಿಂಗಳ ಅವಧಿಯಲ್ಲಿ ಎಷ್ಟೇ ಕೇಳಿದರೂ ಕಬ್ಬಿಣ ಬಂದಿಲ್ಲ, ನನ್ನ ಶಕ್ತಿ ಮೀರಿ ಪ್ರಯತ್ನ ಮಾಡಿದ್ದೇನೆ. ಬರುವ

ಆಶೆ ಇದೆ, ಆದರೂ ನಾನು ಕೊಡುತ್ತೇನೆ, ಸುಗಮವಾಗಿ ಈ ಕಾರ್ಯ ಆಗುತ್ತದೆ ಎಂದು ಹೇಳುವ ಚೈತನ್ಯ ನನಗಿಲ್ಲ. ನಿಮಗೆ ಬೇಕಾದಷ್ಟು ಸಿಕ್ಕಿದೆ ಸೀಮೆ ಗೊಬ್ಬರ, ಆದರೆ ತೆಗೆದುಕೊಳ್ಳಲು ನಿಧಾನವಾಗಿದೆ ಎಂದು ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳಿದರೆಂದು ಮಾನ್ಯ ಸದಸ್ಯರು ಹೇಳಿದರು. ಅವರು ಯಾವ ಸಂದರ್ಭದಲ್ಲಿ ಹಾಗೆ ಹೇಳಿದರೋ ಗೊತ್ತಿಲ್ಲ. ಕೇಂದ್ರ ಸರ್ಕಾರ ಕೊಟ್ಟರೂ ನಮ್ಮ ಸರ್ಕಾರ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಎಂಟು ಸಾವಿರ ಟನ್ ಕೊಟ್ಟರೆಂದು ಕೇಳಿದೆ.

ಶ್ರೀ ಕೆ. ಎಫ್. ಪಾಟೀಲ್.—ನನಗೆ ಗೊತ್ತಿರುವ ಹಾಗೆ, ಒಮ್ಮೆ ಜುಲೈ ಆಖೈರಿನಲ್ಲಿ ಎಂದು ಕಾಣುತ್ತದೆ, ಮೂರು ಸಾವಿರ ಟನ್ ಜಪಾನಿನಿಂದ ಬರುತ್ತಿದ್ದುದು ಮುಳುಗಿಹೋಯಿತೆಂದು ಗೊತ್ತಾಯಿತು. ಇದೊಂದು ವಿಚಾರದಲ್ಲಿ, ನಮ್ಮ ಇಲಾಖೆಯವರಿಂದ ನಿಧಾನವಾಗಿ ಇಂಥಾ ಕೆಲಸವಾಗುತ್ತದೆಂದು ನಾನು ನಂಬುವುದಿಲ್ಲ. ಎಂಟು ದಿನಗಳಿಗೊಮ್ಮೆ ಎಷ್ಟು ಬಂತು, ಎಷ್ಟು ವಿನಿಯೋಗ ಮಾಡಿದೆ, ಹೇಗೆ ಮಾಡಿದೆ ಎಂಬುದನ್ನೆಲ್ಲಾ ನೋಡಿ, ಹೆಚ್ಚು ಅಮದುಮಾಡಿಕೊಳ್ಳಲು ಪ್ರಯತ್ನ ಮಾಡುತ್ತೇವೆ. ನಮ್ಮ ಇಲಾಖೆಯ ಅಧಿಕಾರಿಗಳು ಕಳಕಳಿಯಿಂದ ಕೆಲಸಮಾಡದೇಯಿದ್ದರೆ ಅವರನ್ನು 'ಚೆಕ್' ಮಾಡುವುದಕ್ಕೆ ನಮಗೆ ಶಕ್ತಿ ಇದೆ, ಅವರ ಪರವಾಗಿ ನಾನು ಮಾತನಾಡುತ್ತೇನೆಂದರೆ ಅವರನ್ನು ಎತ್ತಿ ಹಿಡಿಯುತ್ತೇನೆಂದು ಅರ್ಥವಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹಾಗೆ ಹೇಳಲಿಲ್ಲವೆಂದು ಹೇಳಿದರು. ನಾನು ಕೊಟ್ಟರೂ ತೆಗೆದುಕೊಳ್ಳಲಿಲ್ಲ ಎಂದು ಜನ ತಿಳಿದುಕೊಳ್ಳಲಿ ಎಂದು ಚುನಾವಣೆ ದೃಷ್ಟಿಯಿಂದ ಹೇಳಿದ್ದಾರೆಯೋ ?

ಶ್ರೀ ಕೆ. ಎಫ್. ಪಾಟೀಲ್.—ನನಗೆ ಗೊತ್ತಿಲ್ಲ. ಈ ಮಾತು ಹಾಗಿರಲಿ . . . . . .

Sri M. C. NARASIMHAN.—There is a statement made by the Government of India Minister to the effect that the Southern zone is self-sufficient. Actually it is not so, What are your views ?

ಶ್ರೀ ಕೆ. ಎಫ್. ಪಾಟೀಲ್.—ಸಾಮಾನ್ಯವಾಗಿ ಮಾನ್ಯ ಸದಸ್ಯರು ಎತ್ತಿದ ಪ್ರಶ್ನೆ ವಿಷಯದಲ್ಲಿ ಹೇಳಬೇಕಾದರೆ ನಮ್ಮ ದೇಶದ ಲೆಕ್ಕದ ಪ್ರಕಾರ ಮೂರು-ನಾಲ್ಕು ಲಕ್ಷ ಟನ್ ಅಕ್ಕಿ ಕೊರತೆ ಬೀಳಬಹುದು. ಕೇರಳದಲ್ಲಿ ನನಗೆ ಗೊತ್ತಿರುವ ಹಾಗೆ ಏಳು ಲಕ್ಷ ಟನ್ ಕೊರತೆಯಿದೆ, ಮದ್ರಾಸಿನಲ್ಲಿ ಎರಡು-ಮೂರು ಲಕ್ಷ ಟನ್ ಸರ್ಪ್ಲಸ್ ಇದೆ. ಆಂಧ್ರದಲ್ಲಿ ಹತ್ತು ಲಕ್ಷ ಟನ್ ಸರ್ಪ್ಲಸ್ ಇದೆ. ಸದರನ್ ಜೋನ್ ಮಾಡಿದ್ದರೂ 12 ಲಕ್ಷ ಟನ್ ಉತ್ತರ ಪ್ರದೇಶಗಳಿಗೆ ಹೋಗಿದೆ, ನಮ್ಮ ಜೋನ್‌ನ ಬೋರ್ಡ್ ಭದ್ರ ಮಾಡಿದ್ದರೆ, ಸ್ಮಗಲ್ ಆಗುವುದಕ್ಕೆ ಅವಕಾಶ ಕೊಡದಿದ್ದರೆ ಸ್ವಲ್ಪ ಹೆಚ್ಚುಕಡಮೆ ಇಲ್ಲಿನ ಪರಿಸ್ಥಿತಿ ಸರಿಪಡಿಸಿಕೊಳ್ಳಬಹುದಾಗಿತ್ತು ಎಂದು ಹೇಳಿದರು. ನಮ್ಮಲ್ಲಿ ಬೆಳೆದುದನ್ನು ದಾಸ್ತಾನುಮಾಡಿ ಹಂಚಿದ್ದರೆ ಕೊರತೆಗೆ ಅವಕಾಶವಿರುತ್ತಿರಲಿಲ್ಲ ಎಂದು ಹೇಳಿದರು. ದಕ್ಷಿಣ ಪ್ರದೇಶದ ಮಂತ್ರಿಗಳ ಸಭೆಯಲ್ಲಿ ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳು ದಕ್ಷಿಣ ವಲಯದಲ್ಲಿ ಕೊರತೆಯಾದರೆ ಸಾಮಾನ್ಯವಾಗಿ ನಾವು ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು, ಕೊರತೆ ಬಿದ್ದರೆ ತಂದು ಕೊಡುತ್ತೇವೆ ಎಂದು ಹೇಳಿದರು. ನಮ್ಮಲ್ಲಿ ಕೊರತೆಯನ್ನುಂಟುಮಾಡಿ ಬೇರೆ ಕಡೆಗೆ ಒಯ್ಯುತ್ತಾರೆಂಬ ಭಾವನೆಗೆ ಎಳ್ಳಷ್ಟೂ ಆಸ್ಪದವಿಲ್ಲ. ಅವಶ್ಯಕವಾದರೆ ಕೇಂದ್ರದಿಂದ ನೆರವು ತೆಗೆದುಕೊಳ್ಳಬಹುದು. ದಕ್ಷಿಣ ವಲಯದ ಪರಿಸ್ಥಿತಿ ಇತರ ವಲಯಗಳ ಪರಿಸ್ಥಿತಿಗಿಂತ ಸ್ವಲ್ಪ ಸಮಾಧಾನಕರವಾಗಿದೆ. ಅಂದರೆ ಆಹಾರ ಪರಿಸ್ಥಿತಿಯು ತೃಪ್ತಿಕರವಾಗಿದೆಯೆಂದು ಹೇಳುವುದಿಲ್ಲ. ಏಕೆ ಸಾಧಾರಣವಾಗಿ ಸಮಾಧಾನಕರವಾಗಿದೆಯೆಂದು ಹೇಳುವುದೆಂದರೆ, ಕೊರತೆಯಿದೆಯೆಂಬ ವಾತಾವರಣ ವುಂಟಾದರೆ ದಾಸ್ತಾನುಮಾಡಿ ಕೆಲವರು ಅಭಾವವನ್ನುಂಟುಮಾಡಲು ಸಾಧ್ಯವಾಗುತ್ತದೆ, ಅಂಥಹುದಕ್ಕೆ ಅವಕಾಶಕೊಡಬಾರದು ಎಂಬ ಉದ್ದೇಶದಿಂದ ಹೇಳುತ್ತಿದ್ದೇವೆ. ನಿಜವಾಗಿಯೂ ಕೊರತೆಯಿದ್ದರೆ, ಎಲ್ಲಿಂದಲಾದರೂ ತಂದು, ಒಂದನೆಯ ದರ್ಜೆಯ ಅಕ್ಕಿಯನ್ನು ತರುವುದಕ್ಕಾಗದಿದ್ದರೆ ಎರಡನೆಯ ದರ್ಜೆಯ ಅಕ್ಕಿಯನ್ನಾದರೂ ತಂದು, ಸರಬರಾಯಿಮಾಡಿ ಅಗತ್ಯವನ್ನು ಪೂರೈಸುವ ಸಾಮರ್ಥ್ಯ ನನಗಿದೆ ಎಂದು ಹೇಳಬಯಸುತ್ತೇನೆ.

ಕಬ್ಬಿಣದ ವಿಚಾರ ಹೇಳುವುದಾದರೆ 1957-58ರಲ್ಲಿ 34 ಸಾವಿರ ಟನ್ ಕೇಳಿ, ನಾಲ್ಕು ಸಾವಿರ ಟನ್ ಅಲಾಟ್ ಆಗಿ, 19 ನೂರು ಟನ್ ಮಾತ್ರ ಬಂತು. ಮೊನ್ನೆ ಮತ್ತೆ 22 ನೂರು ಟನ್ ಬಂತು. ಇದನ್ನೆಲ್ಲಾ ತಮ್ಮ ಮುಂದಿಡುವುದು ಅಭಾವವಿಲ್ಲವೆಂದು ಸಮರ್ಥನೆಮಾಡಿಕೊಳ್ಳಬೇಕೆಂದಿಲ್ಲ. ಅನಿವಾರ್ಯವಾಗಿ ಇರುವ ಪರಿಸ್ಥಿತಿ ಹೇಳುತ್ತಿದ್ದೇನೆ. ಇರುವ ಕಡೆಯಿಂದ ತಂದುಕೊಡುವ ಜವಾಬ್ದಾರಿ ನಮಗಿದೆ. ಶಕ್ತಿ ಮೀರಿ ಸಾಹಸಮಾಡಿ ಪ್ರಯತ್ನ ಮಾಡೋಣ. ಇದಕ್ಕೆ ಮಾನ್ಯ ಸದಸ್ಯರ ಸಹಕಾರ, ಸಹಾನುಭೂತಿ, ನೆರವು, ಸಲಹೆ ಅವಶ್ಯಕ. ಬ್ಲ್ಯಾಕ್‌ಮಾರ್ಕೆಟ್ ಮಾಡುತ್ತಿದ್ದರೆ ಅಂಥವರಿಗೆ ಆ ರೀತಿ ಮಾಡಿ ಬಡವರಿಗೆ ತೊಂದರೆ ಮಾಡಬಾರದೆಂದು ಹೇಳಬೇಕು. ಕದ್ದು ಮುಚ್ಚಿಟ್ಟು ಅಭಾವವನ್ನುಂಟುಮಾಡುವುದಾದರೆ ಅಂಥವರನ್ನು ಹಿಡಿದು ಅವರಲ್ಲಿರುವುದನ್ನು ವಶಪಡಿಸಿಕೊಂಡು ಹಂಚುವ ಸ್ಥಿತಿ ಬರುತ್ತದೆಯೋ ಏನೋ.

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ (ಚಾಮರಾಜಪೇಟೆ).—ನ್ಯಾಯಬೆಲೆ ಅಂಗಡಿ ಮೂಲಕ ಅಕ್ಕಿ, ರಾಗಿ, ಗೋಧಿ ಮಾರಾಟ ಮಾಡುವ ವಿಚಾರದಲ್ಲೇನು ಮಾಡುತ್ತೀರಿ ?

[MR. SPEAKER in the Chair]

ಶ್ರೀ ಕೆ. ಎಫ್. ಪಾಟೀಲ್.—ಈ ತಿಂಗಳಿನಲ್ಲಿ ಐದು ಸಾವಿರ ಟನ್ ಗೋಧಿಯನ್ನು ತರಿಸುವುದಕ್ಕೆ ಪ್ರಯತ್ನ ನಡೆಸಿದ್ದೇವೆ. ಉತ್ತಮ ರವೆ ಸಿಕ್ಕದೇ ಇರುವ ಪರಿಸ್ಥಿತಿ ಬಂದಾಗ ಕೇಂದ್ರದವರು 15 ಸಾವಿರ ಟನ್ ಗೋಧಿಯನ್ನು ಒದಗಿಸಿಕೊಟ್ಟಿದ್ದಾರೆ. ಈಗಾಗಲೇ 27 ಅಂಗಡಿಗಳನ್ನು ತೆರೆಯಲಾಗಿದೆ. ಆಹಾರಧಾನ್ಯಗಳನ್ನು ಮಾರುವುದಕ್ಕೆ ಇನ್ನೂ ಹೆಚ್ಚಿಗೆ 67 ಅಂಗಡಿಗಳನ್ನು ತೆರೆಯಬೇಕೆಂದಿದ್ದೇವೆ. ಈಗ ಒಂದು ರೂಪಾಯಿಗೆ ಎರಡು ಸೇರಿನಂತೆ ಕೊಡಲಾಗುತ್ತಿರುವ ಅಕ್ಕಿ ಅಷ್ಟು ಉತ್ತಮವಾದುದಲ್ಲ ಎಂಬುದು ನನಗೂ ಗೊತ್ತಿದೆ. ಇದಕ್ಕಾಗಿ ನನಗೆ ಕೆಡಕು ಅನಿಸುತ್ತದೆ. ಮುಂದಿನಸಲ ಎರಡನೆಯ ತರಗತಿಯ ಅಕ್ಕಿಯನ್ನು ಪಾಲಿಷ್‌ಮಾಡಿ ಬೇಕಾದಷ್ಟು ದೊರೆಯುವ ಹಾಗೆ ಅನುಕೂಲಮಾಡಿ ಕೊಡಲಾಗುವುದು. ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾಗುವ boiled rice ಒದಗಿಸಲಾಗುವುದು. ಜನರ ಆರ್ಥಿಕ ಪರಿಸ್ಥಿತಿಯು ಮೂಲಕ ಹೆಚ್ಚಿನ ಬೆಲೆ ಕೊಟ್ಟು ಅಕ್ಕಿಯನ್ನು ಕೊಳ್ಳುವುದಕ್ಕಾಗುವುದಿಲ್ಲ. ಪೌಷ್ಟಿಕ

(ಶ್ರೀ ಕೆ. ಎಫ್. ಪಾಟೀಲ್)

ಆಹಾರವಾಗಿರುವ de-husked rice ಕೊಡಬೇಕೆಂದು ಸಲಹೆ ಮಾಡುತ್ತೇವೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಸಲ ಅಕ್ಕಿಯನ್ನು ಒದಗಿಸಲು ಪ್ರಯತ್ನ ಮಾಡುತ್ತೇನೆ. ಇಲ್ಲಿಯವರೆಗೆ ಆಹಾರಧಾನ್ಯಗಳ ಅಂಗಡಿಯನ್ನು ಸಹಕಾರಿ ಬ್ಯಾಂಕು ಸೊಸೈಟಿಗಳಿಗೆ ಮಾತ್ರ ಕೊಡಲಾಗಿದೆ. ವಿಶೇಷವಾಗಿ ಇಂಥ ಅಂಗಡಿಗಳನ್ನು ಪಟ್ಟಣಗಳಲ್ಲಿ ತೆರೆಯಲಾಗಿದೆ. ಹಳ್ಳಿಗಳಿಗೆ ಕೊಟ್ಟಿಲ್ಲ. ಹಳ್ಳಿಗಳಲ್ಲಿ ಕೂಲಿಮಾಡುವವರಿಗೆ ಕೂಲಿಯನ್ನು ಧಾನ್ಯದ ರೂಪದಲ್ಲಿ ಕೊಡುವ ಪದ್ಧತಿ ಇರುವುದರಿಂದ ಹಳ್ಳಿಗಳಲ್ಲಿ ಪರಿಸ್ಥಿತಿ ಅಷ್ಟು ನಿಕೃಷ್ಟವಾಗಿಲ್ಲ. ಆದುದರಿಂದ ಪಟ್ಟಣಗಳಲ್ಲಿ ಮಾತ್ರ ಇಂಥ ನ್ಯಾಯಬೆಲೆಯ ಅಂಗಡಿಗಳನ್ನು ತೆರೆಯಲಾಗಿದೆ. ಈ ಅಂಗಡಿಗಳನ್ನು ಹಳ್ಳಿಗಳಲ್ಲಿ ತೆರೆಯುವ ಪರಿಸ್ಥಿತಿಯನ್ನು ಪರಮಾತ್ಮನು ತಂದು ಕೊಡದೇ ಇರಲಿ ಎಂದು ದೈನ್ಯದಿಂದ ಬೇಡಿಕೊಳ್ಳುತ್ತೇನೆ. ಸರಕಾರದ ಈ ಪ್ರಯತ್ನದಲ್ಲಿ ಮಾನ್ಯ ಸದಸ್ಯರೆಲ್ಲರೂ ತಮ್ಮ ನೈತಿಕ ಬೆಂಬಲವನ್ನು ಕೊಟ್ಟು ಸಹಾಯಮಾಡಬೇಕು ಎಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಅದೇನೆಂದರೆ ಒಂದು ತಿಂಗಳ ಕಾಲದಲ್ಲಿ ತೊಗರಿ ಬೇಳೆಯ ಬೆಲೆಯು ನೂರಕ್ಕೆ 50 ರಷ್ಟು ಹೆಚ್ಚಾಗಿದೆ. ಎಲ್ಲಿ ಅತಿಶಯವಾಗಿ ತೊಗರಿ ಬೆಳೆಯುತ್ತದೆಯೋ ಅಲ್ಲಿಂದ ಖರೀದಿಮಾಡಿ ತರುವುದಕ್ಕೆ ಸಾಧ್ಯವಾಗಿಲ್ಲ. ಈ ರಿಪಸ್ಥಿತಿಯನ್ನು ಸುಧಾರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಇದೆಯೋ ಇಲ್ಲವೋ ಎನ್ನುವ ವಿಚಾರದಲ್ಲಿ ಏನು ಹೇಳುತ್ತೀರಿ ?

ಶ್ರೀ ಕೆ. ಎಫ್. ಪಾಟೀಲ್.—ಬಿಜಾಪುರ ಜಿಲ್ಲೆಯಲ್ಲಿ ಐದು ವರ್ಷದೊಳಗೆ ಮೂರು ವರ್ಷ ಸತತವಾಗಿ ಆ ಪರಿಸ್ಥಿತಿ ಇರುತ್ತದೆ ಎಂದು ಲಕ್ಷ್ಯಕ್ಕೆ ಬಂದರೂ ಕೂಡ ಬರಗಾಲ ಎಂದು ಡಿಕ್ಲೇರ್ ಮಾಡಬೇಕಾದ ಕಂಡೀಷನ್ ಇಲ್ಲ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಸಣ್ಣ ನೀರಾವರೀ ಆಗಲಿ, ದೊಡ್ಡ ನೀರಾವರೀ ಆಗಲಿ, ಬಾವಿಗಳಿಂದ ನೀರನ್ನು ತೆಗೆದು ಹಾಯಿಸುವುದಾಗಲಿ ಯಾವುದೇ ಆದರೂ ಭೂಮಿ ಫಲವತ್ತಾಗಿರಬೇಕು. ಭೂಮಿ ಫಲವತ್ತಾಗಿರಬೇಕಾದರೆ ಕೇವಲ ಕೆಮಿಕಲ್ ಫರ್ಟಿಲೈಸರ್ಸ್ ಉಪಯೋಗಮಾಡುವುದರಿಂದ ಮಾತ್ರವೇ ಅಲ್ಲ, ಬಯಲಾಜಿಕಲ್ ದೃಷ್ಟಿಯಿಂದಲೂ ಕೂಡ ವಿಚಾರ ಮಾಡಬೇಕಾಗುತ್ತದೆ. ಭೂಮಿಯಲ್ಲಿರತಕ್ಕ ಸಾರ ಸತತವಾಗಿ ಉಳಿಯಬೇಕಾದರೆ ಅನೇಕ ರೀತಿಯ ಪ್ರಯೋಗಗಳನ್ನೂ ಕೂಡ ಮಾಡುವುದು ಅವಶ್ಯಕ ಎಂದು ಹೇಳುತ್ತೇನೆ.

ಶ್ರೀ ಎ. ಎಸ್. ಪಾಟೀಲ್.—Food Production Director ಎಂದು ಬೊಂಬಾಯಿನಲ್ಲಿ ಒಂದು ಹುದ್ದೆ ಇದೆ. ಅಂಥ ಒಂದು ಹುದ್ದೆಯನ್ನು ಇಲ್ಲಿಯೂ ಮಾಡುವುದು ಅವಶ್ಯವಲ್ಲವೇ ಎಂದು ನನ್ನ ಸೂಚನೆ ಇದೆ.

ಶ್ರೀ ಕೆ. ಎಫ್. ಪಾಟೀಲ್.—ತಾವು ಮಾತನಾಡುವವರಿದ್ದೀರಿ ಆದರೆ ಅವಕಾಶ ಸಿಕ್ಕಲಿಲ್ಲವೆಂದು ನನಗೆ ಗೊತ್ತಿದೆ. ನಾನು ಆ ಸೂಚನೆಯನ್ನು ಸ್ವಾಗತಿಸುತ್ತೇನೆ. ಈಗ Director of Agriculture ಆ ಕೆಲಸವನ್ನು ನೋಡುತ್ತಿದ್ದಾರೆ. ಅಂಥ ಪರಿಸ್ಥಿತಿ ಬಂದರೆ ಅದನ್ನು ವಿಚಾರಮಾಡಬೇಕಾಗಿ ಬಂದೀತು !

[SRI S. P. TALWALKAR put a question in Marathi.]

ಶ್ರೀ ಕೆ. ಎಫ್. ಪಾಟೀಲ್.—(ಮರಾಟಿ) ಬಹುಮಟ್ಟಿಗೆ ಜೋಳವನ್ನು ಸಹ ಸಂಗ್ರಹಣೆಮಾಡಿ ಜನರಿಗೆ ಕೊಡುವ ವಿಷಯವನ್ನು ಸರ್ಕಾರ ವಿಚಾರ ಮಾಡುತ್ತದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ ಸಾರಿ fair price depots ಕೊಡುವಾಗ ಎಲ್ಲ ಕಡೆಗಳಲ್ಲಿಯೂ ವ್ಯವಸ್ಥೆ ಮಾಡತಕ್ಕ ನೀತಿಗೆ ಗಮನ ಕೊಡುತ್ತೀರಾ ?

ಶ್ರೀ ಕೆ. ಎಫ್ ಪಾಟೀಲ್.—ಸ್ವಲ್ಪಮಟ್ಟಿಗೆ ಎಲ್ಲ ಕಡೆಗೂ ಮಾಡತಕ್ಕ ಪರಿಸ್ಥಿತಿ ಬಂದೀತು ಎಂದು ಕಾಣುತ್ತದೆ.

ಮುಖ್ಯವಾದ ಸಮಸ್ಯೆ ಎಂದರೆ ಆಹಾರಧಾನ್ಯಗಳ ವಿಷಯದಲ್ಲಿ ಸರ್ಕಾರದ ಧೋರಣೆ ಏನಿರಬೇಕು ಎಂಬುದು. ಆಹಾರಧಾನ್ಯವನ್ನು ಜನರ ಕಡೆಯಿಂದ ಒತ್ತಾಯದಿಂದ ಕೊಂಡು ಸಂಗ್ರಹಣೆಮಾಡಿ ಅದನ್ನು ಕಂಟ್ರೋಲ್ ಮುಖಾತರ ಜನರಿಗೆ ಕೊಡಬೇಕೆನ್ನುವ ಕಲ್ಪನೆಕೂಡ ಎಷ್ಟೋ ಜನರ ಮನಸ್ಸಿನಲ್ಲಿ ಹುಟ್ಟಿದೆ. ಇಂಥಾದ್ದು ಆಗಬಾರದು ಎಂದು ಹೇಳುವವರೂ ಇದ್ದಾರೆ. ನಿಜವಾದ ಪರಿಸ್ಥಿತಿ ಹೇಗಿದೆ ಎಂದರೆ ಕೇಂದ್ರ ಸರ್ಕಾರದವರು State Trading ಮಾಡಿ, ಅದನ್ನು ಜನತೆಗೆ ವಿತರಣೆ ಮಾಡಬೇಕೆನ್ನುವ ವಿಷಯದಲ್ಲಿ ರೂಪರೇಖೆಗಳನ್ನು ತಯಾರುಮಾಡುತ್ತಿದ್ದಾರೆ. ವೈಯಕ್ತಿಕವಾಗಿ ನನ್ನಮಟ್ಟಿಗೆ ಹೇಳುವುದಾದರೆ ದಕ್ಷಿಣ ವಲಯದಿಂದ ಆಹಾರಧಾನ್ಯಗಳು ಹೊರಗೆ ಹೋಗದಹಾಗೆ ಮಾಡಬೇಕೆಂದು National Development Council ನಲ್ಲಿ, ಇಡೀ ರಾಜ್ಯದ ದೃಷ್ಟಿಯಿಂದ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದನ್ನು ಜಾರಿಯಲ್ಲಿ ತರಬೇಕಾದ ಆವಶ್ಯಕತೆ ಬಂದೇ ಬರುತ್ತದೆನ್ನುವ ಭಾವನೆ ನನಗಿದೆ. ಅಂಥ ಪರಿಸ್ಥಿತಿ ಬಂದಾಗ ಜನತೆಗೆ ಶಕ್ಯವಿದ್ದಷ್ಟೂ ಕಡಮೆ ಬೆಲೆಯಲ್ಲಿ ಆಹಾರಧಾನ್ಯಗಳನ್ನು ಒದಗಿಸಲು ಅನುಕೂಲವಾದೀತು. ರೈತನು ಬೆಳೆದ ಮಾಲಿಗೆ ಸುಗ್ಗಿ ಕಾಲದಲ್ಲಿ ಬಹಳ ಕಡಮೆ ಬೆಲೆಯನ್ನು ಕೊಟ್ಟು ಜನರಿಗೆ ಕೇವಲ ಕಡಮೆ ಬೆಲೆಯಲ್ಲಿ ಆಹಾರಧಾನ್ಯವನ್ನು ಪೂರೈಸಬೇಕೆನ್ನುವ ಭಾವನೆ ಸಮರ್ಥನೀಯವಾದೀತೆಂದು ನನಗನ್ನಿಸುವುದಿಲ್ಲ. ರೈತನ ಬೆಳೆಗೆ ಯೋಗ್ಯವಾದ ಬೆಲೆಯನ್ನು ಕೊಡಬೇಕು. ಜನರಿಗೆ ಆ ಬೆಲೆಯಲ್ಲಿ ಕೊಳ್ಳುವಂಥ ಪರಿಸ್ಥಿತಿ ಇಲ್ಲದೆ ಇದ್ದರೆ, ಅವಶ್ಯಬಿದ್ದಲ್ಲಿ ಸರ್ಕಾರ ಸಬ್ಸಿಡಿಯನ್ನು ಕೊಟ್ಟು ಅಂಥ ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದೀತು. ರೈತನಿಗೆ ಮಾತ್ರ ಬೆಲೆಯನ್ನು ಕಡಮೆ ಮಾಡುವ ಪರಿಸ್ಥಿತಿಯನ್ನು ಸರ್ಕಾರ ಯೋಚನೆಮಾಡುವುದಿಲ್ಲವೆನ್ನುವುದನ್ನು ಸ್ಪಷ್ಟ ಮಾಡಬಯಸುತ್ತೇನೆ. ಯೋಗ್ಯ ಧಾರಣೆಯಾವುದು ಎನ್ನುವುದು ಸ್ಥಳೀಯ ಪರಿಸ್ಥಿತಿಯಿಂದ ವ್ಯಕ್ತವಾಗುತ್ತದೆ. ರೈತ ತಾನು ಬೆಳೆದ ಮಾಲನ್ನು ಕೆಲವುದಿನ ಇಟ್ಟುಕೊಂಡು ಯೋಗ್ಯ ಬೆಲೆ ಬಂದಾಗ ಅದನ್ನು ಮಾರುವುದಕ್ಕೆ ಅವಕಾಶ ಮಾಡುವುದೇ ಯೋಗ್ಯ. ಅವನು ಬೆಳೆದ ಧಾನ್ಯಗಳಿಗೆ ಯೋಗ್ಯ ಬೆಲೆ ಸಿಕ್ಕುವಂತೆ ಮಾಡಬೇಕೆಂದು ಅನೇಕ ಸದಸ್ಯರು ಹೇಳಿದುದೇನೋ ಸರಿ. ಆಹಾರಧಾನ್ಯಗಳ ಬೆಲೆಯನ್ನು ನಿರ್ದಿಷ್ಟ ಮಾಡುವುದು ಒಂದು ಸಮಸ್ಯೆ. ಇಂತಿಷ್ಟೇ ಎಂದು ನಿರ್ಧಾರ ಮಾಡುವುದು

ಈ ಸರ್ಕಾರಕ್ಕೆ ಅಲ್ಲ, ಕೇಂದ್ರ ಸರ್ಕಾರಕ್ಕೂ ಕಷ್ಟವಾದ ಕೆಲಸ. ಶ್ರೀಮಾನ್ ಖೋತ್ ಅವರು ಬಹಳ ಸೂಕ್ತವಾದ ಸಲಹೆ ಮಾಡಿದರು. ಧಾನ್ಯಗಳ ಬೆಲೆಯನ್ನು ಕಡಮೆ ಮಾಡುವುದಾದರೆ ಜೀವನಕ್ಕೆ ಬೇಕಾದ ಇತರ ಸಾಮಗ್ರಿಗಳ ಬೆಲೆಗಳನ್ನೂ ಏಕೆ ತಗ್ಗಿಸಬಾರದೆಂದು ಹೇಳಿದರು. ಬೆಲೆ ನಿಯಂತ್ರಣ ಮಾಡಬಾರದೇಕೆ ಎಂದು ಕೇಳಿದರು. ಇದನ್ನು ಯಾವ ರೀತಿ ಮಾಡುವುದು ಎಂದು ಯೋಚನೆ ಮಾಡಬೇಕಾದುದು ಸೂಕ್ತ.

Dr. R. NAGAN GOWDA.—Now, you are telling that large quantities of food grains are coming from outside ..

ಶ್ರೀ ಕೆ. ಎಫ್. ಪಾಟೀಲ್.—ಈಗ ನಮ್ಮ ಲೆಕ್ಕದ ಪ್ರಕಾರ 35,000 ಟನ್ ಬೆಂಗಳೂರಿಗೆ ರೈಲುಮಾರ್ಗದಲ್ಲಿ ಬಂದಿದೆ. ಟ್ರಕ್‌ಗಳಲ್ಲಿ ಬೇರೆಬೇರೆ ಪಟ್ಟಣಗಳಿಗೆ ಎಷ್ಟೋ ಬಂದಿದೆ. ಆಂಧ್ರದಿಂದ ಬಂದಿದೆ. ಕೆಲವು ಸದಸ್ಯರು ಶಿವಮೊಗ್ಗದಿಂದ ಹೊರಗೆ ಹೋಗಿದೆ ಎಂದ ಹೇಳಿದರು. ಗೋವಾ ಕಡೆಗೆ ಕೇರಳದ ಕಡೆಗೆ ಹೋಗಿದೆ ಎಂದರು. ಗೋವಾಕಡೆಗೆ ಹೋಗಿರುವ ಕಲ್ಪನೆ ನನಗಿಲ್ಲ. ಎಲ್ಲ ಸದಸ್ಯರ ಪ್ರಶ್ನೆಗಳಿಗೂ ವಿವರವಾಗಿ ಉತ್ತರ ಕೊಡುವುದಕ್ಕೆ ಸಾಕಷ್ಟು ಸಮಯ ನನಗೆ ಸಿಕ್ಕಿಲ್ಲವಾದರೂ ಸಮಯ ಸಿಕ್ಕಿದಾಗೆಲ್ಲ—ಇಲ್ಲಿ ಬಂದಿರುವ ಸಲಹೆಗಳನ್ನು ಗುರುತು ಹಾಕಿಕೊಂಡಿದ್ದೇನೆ—ವಿವರಗಳನ್ನು ಅವರಿಗೆ ಕೊಡುತ್ತೇನೆ. ಅನ್ನಬ್ರಹ್ಮ ತೃಪ್ತಿ ಯಾಗದೆ ಜಗತ್ತಿನಲ್ಲಿ ಯಾವುದೂ ನಡೆಯುವುದಿಲ್ಲವೆಂಬುದನ್ನು ನಾವು ಯಾರೂ ಮರೆಯುವ ಹಾಗಿಲ್ಲ. ಅನ್ನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಶಕ್ಯವಿದ್ದಷ್ಟೂ ಪ್ರಯತ್ನ ಮಾಡಬೇಕು. ಹಾಗೆ ಮಾಡದಿದ್ದರೆ ತನ್ನ ಜವಾಬ್ದಾರಿಯನ್ನು ಕರ್ತವ್ಯವನ್ನು ಮಾಡುತ್ತಿಲ್ಲವೆಂದು ಅರ್ಥವಾದೀತು...

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ರೈತರು ಆಹಾರ ಬೆಳೆಯುತ್ತಾರೆ, ಅದಕ್ಕೆ ಎಷ್ಟು ಖರ್ಚಾಗುತ್ತದೆಂದು ಸರ್ಕಾರ ಯೋಚನೆ ಮಾಡಿದ್ದಾರೆಯೇ? ಜೋಳವನ್ನು 40 ರೂಪಾಯಿನಂತೆ ಮಾರಿದರೆ ರೈತನಿಗೆ ಗಿಟ್ಟುತ್ತದೆಯೋ ಇಲ್ಲವೋ ಎಂಬುದನ್ನು ಯೋಚನೆ ಮಾಡಿದ್ದಾರೆಯೆ ?

ಶ್ರೀ ಕೆ. ಎಫ್. ಪಾಟೀಲ್.—ಈ ವಿಷಯದಲ್ಲಿ ಅನೇಕ ಪ್ರಯೋಗಗಳು ನಡೆದಿವೆ. ಎಲ್ಲೆಲ್ಲಿ ಯಾವ ಯಾವ ಬೆಳೆಗೆ ಎಷ್ಟೆಷ್ಟು ಖರ್ಚಾಗುತ್ತಿದೆ ಎಂಬ ಬಗ್ಗೆ ಅನೇಕ ಸಾಹಿತ್ಯವಿದೆ. ಇಂಥ ಬೆಳೆಗೆ ಇಷ್ಟು ರೂಪಾಯಿ ಖರ್ಚಾಗುತ್ತದೆಂದು ಹೇಳುವುದು ಕಷ್ಟ. ತಜ್ಞರು ಅಂಕಿ ಅಂಶಗಳನ್ನು ಸಂಗ್ರಹ ಮಾಡಿದ್ದಾರೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ ಮೂರು ಬೆಳೆ ಬರುವ ಅಡಕೆ ತೋಟಗಳಲ್ಲಿ ವಾಣಿಜ್ಯ ಬೆಳೆ ಬೆಳೆದರೆ ಆಹಾರೋತ್ಪತ್ತಿಗೆ ತೊಂದರೆ ಯಾಗುತ್ತದೆ.

ಶ್ರೀ ಕೆ. ಎಫ್. ಪಾಟೀಲ್.—ಅಡಕೆ ತೋಟಕ್ಕೆ ಎಂಟು–ಹತ್ತು ಸಾವಿರ ರೂಪಾಯಿ ಖರ್ಚು ಮಾಡಬೇಕು, ಆರೇಳು ವರ್ಷ ಕಾಯಬೇಕು ಎಂದು ಗೊತ್ತಿದೆ. ಆದರೆ ಹೊಸ ಭೂಮಿಯಿದ್ದರೆ ಅದನ್ನು ಕೊಡಬೇಕಾದರೆ ಆಹಾರಧಾನ್ಯ ಬೆಳೆಯಲು ಕೊಡಬೇಕೆ ಅಥವ ತೋಟಕ್ಕೆ ಕೊಡಬೇಕೆ ಎಂದು ಯೋಚನೆ ಮಾಡಬೇಕು.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಅಡಕೆ ತೋಟ ಬೆಳೆಯಲು ಆರುವರ್ಷ ಬೇಕೆಂದು ಹೇಳಿದರು. ಹತ್ತು ವರ್ಷ ಹನ್ನೆರಡು ವರ್ಷ ಸುಮ್ಮನೆ ಕಣ್ಣುಬಿಟ್ಟುಕೊಂಡು ನೋಡುತ್ತಿರಬೇಕು.

6-30 P M.

ಶ್ರೀ ಕೆ. ಎಫ್. ಪಾಟೀಲ್.—ಶ್ರೀ ಶಿವಪ್ಪನವರು ಹೇಳುವ ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ, ಸ್ವೀಕರಿಸುತ್ತೇನೆ. ಆಹಾರ ವಿತರಣೆ ಸರಿಯಾದ ರೀತಿಯಲ್ಲಿಮಾಡಿ ಸರ್ವರಿಗೂ ಯೋಗ್ಯ ಬೆಲೆಗೆ ದೊರಕುವಹಾಗೆ ಮಾಡುವುದು ಒಂದು ಕ್ರಮ. ತಾತ್ಕಾಲಿಕವಾಗಿ ಎಷ್ಟು ಶಕ್ಯವಿದೆ ಅಷ್ಟನ್ನು ತಾತ್ಪೂರ್ತಿಕವಾಗಿ ಮಾಡಲೇಬೇಕು. ಈಗ ಕಾರ್ಯಕ್ರಮ ಕೈಕೊಂಡು ತಕ್ಷಣ ಇರುವ ಆಹಾರದ ಕೊರತೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈ ವರ್ಷ ಕಾರ್ಯಕ್ರಮ ಕೈಗೊಂಡರೆ ಮುಂದಿನ ವರ್ಷ ಬಿತ್ತುವಕಾಲಕ್ಕೆ ಅನುಕೂಲವಾಗುತ್ತದೆ. ಶ್ರೀಮಾನ್ ಜಂಬಣ್ಣನವರು ಹೇಳಿದ ಹಾಗೆ, ಪಟ್ಟಣಗಳಲ್ಲಿ ಮಾಡುವ ಹಾಗೆ ಪ್ರತಿಯೊಂದು ಹಳ್ಳಿಯಲ್ಲೂ ಕಾಂಪೋಸ್ಟ್ ತಯಾರಿಸಿ ಒದಗಿಸಬೇಕಾದರೆ ಆರು ತಿಂಗಳು ಬೇಕಾಗುತ್ತದೆ. ಯಾರು ಯಾರಿಗೆ ಆಹಾರದ ಉತ್ಪತ್ತಿ ಹೆಚ್ಚಿಸಲು ಶಕ್ಯವಿದೆ ಅವರು ಈಗಿನಿಂದಲೇ ಗೊಬ್ಬರದ ಗುಣಿ ಮಾಡುವುದಕ್ಕಾಗಲಿ ಅಥವಾ ಸರ್ಕಾರಿ ಅಧಿಕಾರಿಗಳು ಆ ಕೆಲಸ ಮಾಡುತ್ತಿದ್ದರೆ ಅವರಿಗೆ ಸಹಕಾರಕೊಟ್ಟು ಆ ಕೆಲಸ ಯಶಸ್ವಿಯಾಗುವಂತೆ ಮಾಡುವುದಕ್ಕಾಗಲಿ ನೆರವಾಗಬೇಕು ಎಂದು ವಿನಂತಿ ಮಾಡುತ್ತೇನೆ. ಯಾರೂ ನಿರಾಶೆಯಾಗದೆ ನಾನು ಹೇಳಿದ ನಾಲ್ಕು ಮಾತುಗಳಲ್ಲಿ ಯೋಗ್ಯವಾಗಿರುವುದನ್ನು ಸ್ವೀಕರಿಸಬೇಕು, ಕ್ಲಾರಿಫಿಕೇಷನ್ ಅವಶ್ಯಕ ಬಿದ್ದಾಗ ಕೊಡುತ್ತೇನೆ ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಮರಾಮತ್ ಮತ್ತು ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).—ಇಂದು ಆಹಾರಧಾನ್ಯಗಳನ್ನು ಹೆಚ್ಚಾಗಿ ಉತ್ಪನ್ನ ಮಾಡುವುದಕ್ಕಾಗಿ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಪ್ರಾಧಾನ್ಯತೆ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿರುವುದು ಒಳ್ಳೆಯ ಸಲಹೆ. ಸರ್ಕಾರ ಅದನ್ನು ಅಂಗೀಕಾರಮಾಡಿ ಇನ್ನು ಮುಂದೆ ವಿದ್ಯುಚ್ಛಕ್ತಿಯನ್ನು ಕೊಡುವಾಗ ಮತ್ತು ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆ ಮಾಡುವಾಗ ಆಹಾರ ಬೆಳೆಯುವ ಯೋಜನೆಯೇನಿದೆ ಅದಕ್ಕೆ ಪ್ರಾಧಾನ್ಯತೆ ಕೊಡಬೇಕೆಂದು ಮೊದಲು ವಿದ್ಯುಚ್ಛಕ್ತಿ ಬೋರ್ಡಿಗೆ ಸೂಚನೆ ಕೊಡುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ರೈತರಿಗೆ ಬೆಳಗಿನ ಹೊತ್ತು ವಿದ್ಯುಚ್ಛಕ್ತಿ ಒದಗಿಸದೆ ರಾತ್ರಿವೇಳೆ ಒದಗಿಸಿದರೆ ವ್ಯವಸಾಯ ಅಭಿವೃದ್ಧಿಯಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರುವ ವಿದ್ಯುಚ್ಛಕ್ತಿಯನ್ನು ಒದಗಿಸಬಹುದೇ ಹೊರತು ಇಲ್ಲದಿರುವುದನ್ನು ಈ ಘಳಿಗೆಯಲ್ಲಿ ಉತ್ಪನ್ನ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಮೊದಲು ಒಪ್ಪಿಕೊಳ್ಳಬೇಕು. ರಾಷ್ಟ್ರದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಹೆಚ್ಚು ಕೆಲಸ ಮಾಡಬೇಕಾದರೆ ಮಾಡಲೇಬೇಕು, ಒಂದು ವೇಳೆ ರಾತ್ರಿ, ಹಗಲು ದುಡಿಯಬೇಕಾದರೆ ದುಡಿಯಲೇಬೇಕು.

ಎರಡನೆಯದಾಗಿ ಸಣ್ಣ ಪಟ್ಟ ನೀರಾವರಿ ಕಾಮಗಾರಿಗಳು ವಿದ್ಯುತ್‌ವೇಗದಲ್ಲಿ ನಡೆಯಬೇಕು ಎಂದು ಸರಕಾರದ ಆಶಯ. ಹಣವಿಲ್ಲ ಎಂಬುದು ಮುಖ್ಯವಲ್ಲ ಎಷ್ಟು ಹಣ ಬೇಕಾದರೂ ಕೊಡಲು ಸಿದ್ಧರಾಗಿದ್ದೇವೆ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಣ್ಣಪುಟ್ಟ ಕಾಮಗಾರಿಗಳ ಬಗ್ಗೆ ಮಾನ್ಯ ಸದಸ್ಯರು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಈ ಕೆಲಸದಲ್ಲಿ ಸಹಕರಿಸಬೇಕು.

(ಶ್ರೀ ಎಸ್. ಎಂ. ಚನ್ನಬಸಪ್ಪ)

ಇನ್ನು ಮೂರನೆಯದಾಗಿ ಎಲ್ಲೆಲ್ಲಿ ಹಿಂದಕ್ಕೆ scarcity area ಎನ್ನುವುದು ಇದ್ದಿತೋ ಅಲ್ಲಲ್ಲಿ ಅನುಕೂಲಮಾಡಿಕೊಡುವದಕ್ಕೆ ಶೇಕಡಾ ಒಂದರಷ್ಟು ಪ್ರತಿಫಲ ಬಂದರೂ ಸಾಕು ಎಂದು ಅಂಥ ನೀರಾವರಿ ಕಾರ್ಯಗಳನ್ನು ಕೈಗೊಳ್ಳಲು ಆಜ್ಞೆಮಾಡಿ ಹಣ ಮಂಜೂರುಮಾಡಿಕೊಟ್ಟಿದ್ದೇವೆ.

ನಾಲ್ಕನೆಯದಾಗಿ ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ಪರಿಶೀಲನೆಮಾಡಿ ಅಂದಾಜುಗಳು ತಯಾರು ಆಗುತ್ತಿವೆ. ಒಂದು ಪ್ರಾಯಾರಿಟಿ ಲಿಸ್ಟ್ ತಯಾರು ಮಾಡಿ ಬೇರೆಬೇರೆ ಸ್ಪೆಷಲ್ ಯೂನಿಟ್ಟುಗಳನ್ನು ಏರ್ಪಾಡುಮಾಡಿ ಕೆಲಸ ಪ್ರಾರಂಭಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಸಿಬ್ಬಂದಿ ನೇಮಕಮಾಡಿ, ಪರಿಶೀಲನೆ, ಪ್ಲಾನ್, ಅಂದಾಜು ತಯಾರುಮಾಡುವದಕ್ಕೆ ಏರ್ಪಾಡುಮಾಡುತ್ತಿದ್ದೇವೆ. ಇದರಿಂದ ಸಣ್ಣಪುಟ್ಟ ಕಾಮಗಾರಿಗಳು ಮುಂದುವರಿಯಲು ಅನುಕೂಲವಾಗುತ್ತದೆ.

ದೊಡ್ಡ ಯೋಜನೆಗಳಲ್ಲಿ ನೀರು ಸದ್ವಿನಿಯೋಗವಾಗಬೇಕು. ಅಲ್ಲಿ ನೀರನ್ನು ಉಪಯೋಗಿಸುವುದಕ್ಕೆ ಆ ಪ್ರದೇಶದಲ್ಲಿರತಕ್ಕ ರೂಲ್ಸ್ ಬದಲಾವಣೆಮಾಡಿ ರೈತನಿಗೆ ಅನುಕೂಲಮಾಡಬೇಕೆಂದು ಸರಕಾರದ ಪ್ರಯತ್ನವಿದೆ. ಆದಷ್ಟು ಜಾಗ್ರತೆ ಅನುಕೂಲವಾಗುವದೆಂದು ಹಾರೈಸುತ್ತೇನೆ.

ನೀರನ್ನು ಉಪಯೋಗಮಾಡುವ ವಿಷಯದಲ್ಲಿ ಹೆಚ್ಚಿನ ಪ್ರಾಧಾನ್ಯತೆಯಿರಬೇಕು, ಖರ್ಚುಮಾಡಿದ ಹಣ ಸದ್ವಿನಿಯೋಗವಾಗಬೇಕು. ಒಂದು ಇರಿಗೇಷನ್ ಬಿಲ್ಲನ್ನು ಸಹ ತಯಾರುಮಾಡಿ ಈ ಸಭೆಯಲ್ಲಿ ಆದಷ್ಟು ಬೇಗನೆ ಮಂಡಿಸಬೇಕೆಂದಿದ್ದೇವೆ. ಹೆಚ್ಚು ಆಹಾರ ಧಾನ್ಯ ಉತ್ಪತ್ತಿಗೆ ಬೇಕಾಗಿರುವ ವ್ಯವಸ್ಥೆಯನ್ನು ಸರಕಾರ ಕೈಕೊಳ್ಳುತ್ತದೆ. ಇಷ್ಟು ವಿಷಯಗಳನ್ನು ಮಾನ್ಯ ಸಭೆಗೆ ತಿಳಿಸಿದ್ದೇನೆ.

Mr. SPEAKER.—I shall read rule 279 to the House. It states :

> "A motion that the policy or situation or statement or any other matter be taken into consideration shall not be put to the vote of the Assembly, but the Assemby shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion.......",

Since no substantive motion about food situation was moved, it need not be put to the House.

I would like to announce that in this debate 23 members on the Congress side and 15 members of the Opposition (9 P.S.P. and 6 Independent) have taken part. I would also like to enlighten the House with districtwise information regarding members who participated in the debate.

Tumkur	...	4
Bangalore	...	7
Shimoga	...	2
South Canara	...	1
Mysore	...	3
Raichur	...	1
Bellary	...	2
Bijapur	...	2
Kolar	...	2
Chitald ug	...	4
Gulburga	...	1
Chikmagalur	...	1
Mandya	...	2
Dharwar	...	1
Belgaum	...	2
Northa Kanara	...	1
Hassan	...	1
Bidar	..	1

Before we rise I would like also to announce that the Business Advisory Committee which met this afternoon agreed for the allotment of time in respect of certain Government Bills. The programme for the next three days will be as follows:

Tomorrow the following Bills will be taken up :

1. The Madras Preservation of Private Forests Continuance Bill, 1958.
2. Mysore Rent Control Laws Continuance Bill, 1958.
3. The Mysore Personal and Miscellaneous Inams Abolition (Amendment) Bill, 1958.

On Monday, we will take up non-official business, *i.e.* Resolutions. On Tuesday, we will take up the Mysore Sales Tax (Amendment) Bill, 1958, as reported by the Select Committee. The Mysore Non-Agricultural Loans Bill, 1958, which was put down for today will also be taken up on Tuesday.

Sri K. PUTTASWAMY (Mysore).—About discussion of the Report of the State Electricity Board and the Gorwala Report, I have also sent a letter requesting that the Hon'ble Speaker may be pleased to fix the time, and also for discussing the Report submitted by the Public Service Commission.

Sri J. B. MALLARADHYA.—Sir, as far back as April or May, I sent three motions, one about the Plan, another about the Gorwala Report and the third about the Electricity Board Report. You were pleased to say that since the Government was bringing this as Government business, no date need be allotted. Those three important matters are being put off. You promised us that during this week, the Gorwala Report would be discussed. I want to know whether it will be discussed in this session.

Mr. SPEAKER.—We have not been able to fix the time beyond the 2nd of next month. It will not be possible today to fix the time further for the next business of the House. We are going to do it shortly.

The House now rises and meets tomorrow at 8-30 A.M.

The House rose for the day at Forty-five Minutes past Six of the Clock to meet again at Thirty Minutes past Eight of the Clock on Saturday, the 29th November 1958.

WD 2268—GPB—900—11-3-59